# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 14-08-2024ರ ಪೂರ್ವಾಹ್ನ 11.00 ಗಂಟೆಗೆ ನಡೆದ "ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆ"ಯ ನಡಾವಳಿ.**

**ಉಪಸ್ಥಿತರು:**

| | | |
|---|---|---|
| 1. | ಪ್ರೊ. ಎನ್.ಕೆ. ಲೋಕನಾಥ್, ಕುಲಪತಿಗಳು | - ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.<br>ಪ್ರೊ. ಎ.ಹೆಚ್.ಎಂ.ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು,<br>ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | - ಸದಸ್ಯರು |
| 3. | ಡಾ. ಟಿ.ಆರ್. ಚಂದ್ರಶೇಖರ್ | - ಸದಸ್ಯರು |
| 4. | ಶ್ರೀ ಗೋಕುಲ್ ಗೋವರ್ಧನ್ | - ಸದಸ್ಯರು |
| 5. | ಡಾ. ಗಣೇಶ್ ಕೆ. | - ಸದಸ್ಯರು |
| 6. | ಡಾ. ಅಂತೋನಿ ಪೌಲ್ ರಾಜ್ ಸಿ. | - ಸದಸ್ಯರು |
| 7. | ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ | - ಸದಸ್ಯರು |
| 8. | ಡಾ. ಮುಜ್ಹೀದ ಬಾನು | - ಸದಸ್ಯರು |
| 9. | ಶ್ರೀ ಮಹದೇಶು | - ಸದಸ್ಯರು |
| 10. | ಶ್ರೀ ನಾಗರಾಜು ಸಿ. | - ಸದಸ್ಯರು |
| 11. | ಡಾ. ಬಸವರಾಜು ಸಿ. | - ಸದಸ್ಯರು |
| 12. | ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ | - ಸದಸ್ಯರು |
| 13. | ಡಾ. ಶಿಲ್ಪ ಜೆ. | - ಸದಸ್ಯರು |
| 14. | ಡಾ. ನಟರಾಜು ಹೆಚ್.ಎಸ್. | - ಸದಸ್ಯರು |
| 15. | ಡಾ. ನಾಗರಾಜ, ಕುಲಸಚಿವ (ಪರೀಕ್ಷಾಂಗ) | - ಸದಸ್ಯರು |
| 16. | ಶ್ರೀಮತಿ ವಿ.ಆರ್. ಶೈಲಜ, ಕೆ.ಎ.ಎಸ್., ಕುಲಸಚಿವರು | - ಸದಸ್ಯ ಕಾರ್ಯದರ್ಶಿ |
| 17. | ಶ್ರೀಮತಿ ರೇಖಾ ಕೆ.ಎಸ್, ಹಣಕಾಸು ಅಧಿಕಾರಿ | - ವಿಶೇಷ ಆಹ್ವಾನಿತರು |

**ಅನುಪಸ್ಥಿತರು**

1. ಪ್ರೊ. ಸೊನರ್ ನಂದಪ್ಪ
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಸಚಿವರು ಸಿಂಡಿಕೇಟ್ ಸಭೆಯ ಅಧ್ಯಕ್ಷತೆ ವಹಿಸಿಕೊಂಡಿರುವ ಮಾನ್ಯ ಕುಲಪತಿಗಳಾದ ಪ್ರೊ. ಎನ್.ಕೆ.ಲೋಕನಾಥ್ ಹಾಗೂ ಉಪಸ್ಥಿತರಾಗಿರುವ ಗೌರವಾನ್ವಿತ ಸದಸ್ಯರುಗಳನ್ನು ಸ್ವಾಗತಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಎನ್ಐಆರ್ಎಫ್ (ನ್ಯಾಷನಲ್ ಇನ್ಸ್ಟಿಟ್ಯೂಷನಲ್ ರ್‍ಯಾಂಕಿಂಗ್ ಫ್ರೇಮ್‌ವರ್ಕ್) 2024ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ 54ನೇ ಶ್ರೇಯಾಂಕ ಪಡೆದಿದ್ದು, ಕರ್ನಾಟಕದ ಸಾರ್ವಜನಿಕ ವಿಶ್ವವಿದ್ಯಾನಿಲಯಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಾತ್ರ ರ್‍ಯಾಂಕಿಂಗ್ ದೊರಕಿರುವುದು ಹೆಮ್ಮೆಯ ವಿಷಯವಾಗಿದೆ. ಮಂಜೂರಾದ ಖಾಯಂ ಅಧ್ಯಾಪಕರುಗಳ ಹುದ್ದೆಗಳ ಎದುರಾಗಿ ಪ್ರಸ್ತುತ ಶೇಕಡ 33 ರಷ್ಟು ಖಾಯಂ ಅಧ್ಯಾಪಕರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅಧ್ಯಾಪಕರುಗಳ ಸಂಶೋಧನೆಯ ಆಧಾರದ ಮೇಲೆ ಈ ರ್‍ಯಾಂಕಿಂಗ್ ಶ್ರೇಣಿಯನ್ನು

ನೀಡಲಾಗಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರತಿವರ್ಷ ಖಾಯಂ ಅಧ್ಯಾಪಕರು ವಯೋನಿವೃತ್ತಿ ಹೊಂದುತ್ತಿದ್ದು, ಪಬ್ಲಿಕೇಷನ್‌ಗಳು ಹಾಗೂ ಸಂಶೋಧನೆಗಳು ಇಳಿಮುಖವಾಗುತ್ತಿರುವುದರಿಂದ ಈ ರ‍್ಯಾಕಿಂಗ್ ಬರಲು ಕಾರಣವಾಗಿದೆ. ಇದಕ್ಕೆಲ್ಲ ಒಂದೇ ಮಾನದಂಡವೆಂದರೆ ಖಾಲಿಯಿರುವ ಖಾಯಂ ಅಧ್ಯಾಪಕರುಗಳನ್ನು ಭರ್ತಿ ಮಾಡಿ ಗುಣತ್ಮಾಕವಾದ ಸಂಶೋಧನೆ ಹೆಚ್ಚಾದಲ್ಲಿ, ಎನ್‌ಆರ್‌ಎಫ್ ರ‍್ಯಾಕಿಂಗ್ ಹಾಗೂ ಇತರೆ ರ‍್ಯಾಕಿಂಗ್ ಅನ್ನು ನಾವು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಸಿಂಡಿಕೇಟ್ ಸದಸ್ಯರಾದ ಡಾ. ನಟರಾಜು ಹೆಚ್.ಎಸ್. ರವರು ಪಿಎಚ್.ಡಿ. ಪದವಿಯನ್ನು ಪಡೆದಿರುತ್ತಾರೆಂದು ಮಾನ್ಯ ಕುಲಪತಿಯವರು ಸಭೆಗೆ ಗಮನಕ್ಕೆ ತಂದು ಅಭಿನಂದಿಸಿದರು. ಹಾಗೂ ಸದಸ್ಯರುಗಳು ಅಭಿನಂದಿಸಿದರು.

ಶ್ರೀ ಮಹದೇಶುರವರು ಮತ್ತು ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಮೂಲಭೂತ ಸೌಕರ್ಯದ ಕೊರತೆಯೇ? ಶಿಕ್ಷಣದ ಗುಣಮಟ್ಟ ಕುಸಿತವೇ? ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಹತೆ ಅನುಗುಣವಾಗಿ ಉದ್ಯೋಗ ದೊರಕುತ್ತಿಲ್ಲವೇ? ಇದಕ್ಕೆ ಕಾರಣವೇನು ಇವೆಲ್ಲ ಮಾನದಂಡಗಳಿಂದಲ್ಲೇ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಎನ್‌ಇಆರ್‌ಎಫ್ ರ‍್ಯಾಕಿಂಗ್‌ನಲ್ಲಿ 54ನೇ ಶ್ರೇಯಾಂಕ ಬಂದಿರುವುದೇ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಉರ್ದು, ಹಿಂದಿ, ಸಂಸ್ಕೃತ ಹಾಗೂ ಮಾನವ ಅಭಿವೃದ್ಧಿ ಅಧ್ಯಯನ ಹಾಗೂ ವಿಶ್ವವಿದ್ಯಾನಿಲಯದ ಇನ್ನಿತರ ಕೋರ್ಸ್‌ಗಳಲ್ಲಿ ಖಾಯಂ ಅಧ್ಯಾಪಕರುಗಳು ಇಲ್ಲದಿರುವುದು ಹಾಗೂ ಸದರಿ ಅಧ್ಯಯನ ವಿಭಾಗಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಗಣನೀಯವಾಗಿ ಕುಸಿತವಾಗಿರುವುದರಿಂದ, ಸದರಿ ಅಧ್ಯಯನ ವಿಭಾಗಗಳಲ್ಲಿ ಯಾವುದೇ ಉಪಯುಕ್ತ ಹಾಗೂ ಗುಣಾತ್ಮಕ ಸಂಶೋಧನೆ ನಡೆಯದಿರುವುದು ಹಾಗೂ ಜರ್ನಲ್‌ಗಳು ಪ್ರಕಟವಾಗದಿರುವುದು ಸಹ ಎನ್‌ಇಆರ್‌ಎಫ್ ನಲ್ಲಿ 54ನೇ ರ‍್ಯಾಕಿಂಗ್ ಬರಲು ಕಾರಣವೆಂದು ಸಭೆಯಲ್ಲಿ ಪುನರುಚ್ಚರಿಸಿದರು. ಈ ಸಂಬಂಧ ಈಗಾಗಲೇ ಸರ್ಕಾರಕ್ಕೆ ಖಾಲಿ ಇರುವ ಅಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವಂತೆ ಕೋರಿ ಹಲವಾರು ಬಾರಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರವು ಸಕಾರಾತ್ಮಕವಾಗಿ ಸ್ಪಂದಿಸಿ ಹುದ್ದೆಗಳನ್ನು ಭರ್ತಿ ಮಾಡಲು ಅನುದಾನ ದೊರಕಿಸಿ ಅನುಮೋದನೆ ನೀಡಿದ್ದಲ್ಲಿ ಈ ಎಲ್ಲಾ ಕೊರತೆಗಳನ್ನು ನೀಗಿಸಲು ಸಾಧ್ಯವೆಂದು ಸಭೆಯ ಗಮನಕ್ಕೆ ತಂದರು.

ಶ್ರೀ ನಾಗರಾಜು ಸಿ. ರವರು ಮಾತನಾಡಿ, ಶಿಕ್ಷಣದ ಗುಣಮಟ್ಟದಿಂದ ಅಥವಾ ಖಾಯಂ ಅಧ್ಯಾಪಕರ ಕೊರತೆಯಿಂದ ರ‍್ಯಾಕಿಂಗ್ ಕುಸಿತಗೊಂಡಿರುವುದೇ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಖಾಯಂ ಅಧ್ಯಾಪಕರ ಕೊರತೆಯಿಂದ ರ‍್ಯಾಕಿಂಗ್ ಕುಸಿತಗೊಂಡಿದೆ ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ರವರು ಮಾತನಾಡಿ, ಸರ್ಕಾರದಲ್ಲಿ ಒತ್ತಡ ತಂದು ಖಾಯಂ ಅಧ್ಯಾಪಕರುಗಳ ಹುದ್ದೆಗಳನ್ನು ಭರ್ತಿ ಮಾಡಲು ನಾವು ಸಹ ನಿಮ್ಮೊಂದಿಗೆ ಸಹಕರಿಸುವುದಾಗಿ ಮಾನ್ಯ ಕುಲಪತಿಯವರಿಗೆ ತಿಳಿಸಿದರು.

ತದನಂತರ ಕಾರ್ಯಸೂಚಿಯನ್ನು ಈ ಕೆಳಕಂಡಂತೆ ಮಂಡಿಸಲಾಯಿತು.

| | |
|---|---|
| **ಸಾಮಾನ್ಯ ಸಭೆ 2024/5.1** | ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯ ಮೂಲಭೂತ ಸೌಲಭ್ಯಗಳು ಹಾಗೂ ಅತಿಥಿ ಉಪನ್ಯಾಸಕರುಗಳ ಆಯ್ಕೆಯ ಬಗ್ಗೆ. |
| | ಶ್ರೀ ನಾಗರಾಜು ಸಿ ಇವರು ಮಾತನಾಡಿ, 2021-22ನೇ ಶೈಕ್ಷಣಿಕ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಕೂಲ್ ಆಫ್ ಇಂಜಿನಿಯರಿಂಗ್ ಪ್ರಾರಂಭಿಸಿದ್ದು, ಆ ಅವಧಿಯಲ್ಲಿ 157 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. 2023-24ನೇ ಶೈಕ್ಷಣಿಕ ಸಾಲಿನಲ್ಲಿ 776 ವಿದ್ಯಾರ್ಥಿಗಳಿಗೆ ಹೆಚ್ಚಳವಾಗಿದೆ. ಮುಂದುವರೆದು, 2024-25ನೇ ಶೈಕ್ಷಣಿಕ ಸಾಲಿನಲ್ಲಿ 310 ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಲ್ಲಿದ್ದು, ಒಟ್ಟು 1086 ವಿದ್ಯಾರ್ಥಿಗಳು ವ್ಯಾಸಂಗ ಮಾಡಲಿದ್ದಾರೆ. |

| | |
|---|---|
| | ಈ ಎಲ್ಲಾ ವಿದ್ಯಾರ್ಥಿಗಳ ಅಗತ್ಯಕ್ಕೆ ತಕ್ಕಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವುದಿಲ್ಲ. ಉದಾಹರಣೆಗೆ, ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕಂಪ್ಯೂಟರ್, ಕುಡಿಯುವ ನೀರಿನ ಸೌಕರ್ಯ, ಆಡಿಟೋರಿಯಂ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ, ಅಗತ್ಯ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಅಧ್ಯಾಪಕರುಗಳ ಕೊರತೆ ಎದ್ದು ಕಾಣುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು. ನಿರ್ದೇಶಕರು, ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆ, ಇವರು ದಿನಾಂಕ 02-11-2021 ರಿಂದ 02-05-2024ರ ಅವಧಿಯಲ್ಲಿ ಮೂಲಭೂತ ಸೌಕರ್ಯಗಳು ಹಾಗೂ ಅಗತ್ಯ ಸಿಬ್ಬಂದಿಗಳನ್ನು ಒದಗಿಸುವಂತೆ ಕೋರಿ ನಿಮ್ಮ ಕಚೇರಿಗೆ ಪತ್ರಗಳನ್ನು ಬರೆದಿದ್ದು, ಈ ಸಂಬಂಧ ನಿಮ್ಮ ಕಚೇರಿಯ ವತಿಯಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅಗತ್ಯ ಕ್ರಮವಹಿಸುವಂತೆ ಕಾರ್ಯಪಾಲಕ ಅಭಿಯಂತರರು, ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗದವರಿಗೆ ದಿನಾಂಕ 31-05-2024ರಂದು ಪತ್ರ ಬರೆದಿರುತ್ತೀರಿ. ಆದರೆ, ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಪ್ರಸ್ತುತ ವ್ಯಾಸಂಗ ಮಾಡುತ್ತಿರುವ 776 ವಿದ್ಯಾರ್ಥಿಗಳಿಂದ 10 ಕೋಟಿ 30 ಲಕ್ಷ ರೂಪಾಯಿಗಳನ್ನು ವ್ಯಾಸಂಗ ಶುಲ್ಕವನ್ನಾಗಿ ಪಡೆಯಲಾಗಿರುತ್ತದೆ. ಸದರಿ ಮೊತ್ತದಲ್ಲಿ ತಾಂತ್ರಿಕ ಶಾಲೆಗೆ ರೂ. 4 ಕೋಟಿ 83 ಲಕ್ಷ ರೂ.ಗಳನ್ನು ಮಾತ್ರ ವೆಚ್ಚ ಮಾಡಿರುತ್ತೀರಿ. ದಿನಾಂಕ 18-08-2023ರಲ್ಲಿ ಒಂದು ಕೋಟಿ 18 ಲಕ್ಷಗಳನ್ನು ಡ್ರಾ ಮಾಡಿರುತ್ತೀರಿ ಮತ್ತು ದಿನಾಂಕ 11-03-2024ರಲ್ಲಿ 3 ಕೋಟಿ ಮೊತ್ತವನ್ನು ಡ್ರಾ ಮಾಡಿರುತ್ತೀರಿ. ಸದರಿ ಮೊತ್ತಗಳನ್ನು ಯಾವ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ ಎಂಬುದಕ್ಕೆ ಮಾಹಿತಿ ಇರುವುದಿಲ್ಲ ಹಾಗೂ ತಾಂತ್ರಿಕ ಶಾಲೆಗೆ ಅಗತ್ಯವಿರುವ ಮೂಲಭೂತ ಸೌಕರ್ಯ ಹಾಗೂ ವಿದ್ಯಾರ್ಥಿಗಳಿಗನುಗುಣವಾಗಿ ಅಗತ್ಯವಿರುವ ಅಧ್ಯಾಪಕರು ಹಾಗೂ ಅಧ್ಯಾಪಕೇತರರನ್ನು ನಿಯೋಜನೆ/ನೇಮಕ ಮಾಡುವಂತೆ ವಿಷಯವನ್ನು ಪ್ರಸ್ತಾಪಿದರು.<br><br>ಶ್ರೀ ನಾಗರಾಜು ಸಿ. ರವರು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಡಾ. ಟಿ.ಆರ್ ಚಂದ್ರಶೇಖರ್ ರವರು ಇದಕ್ಕೆ ತಮ್ಮ ಸಹಮತವಿರುವುದಾಗಿ ತಿಳಿಸಿ ಈ ಬಗ್ಗೆ ಕೂಡಲೇ ಕ್ರಮಕೈಗೊಳ್ಳಲು ಒತ್ತಾಯಿಸಿದರು.<br><br>ಶ್ರೀ ಮಹದೇಶು ರವರು ಮಾತನಾಡಿ, ಸದರಿ ಕಾಲೇಜಿನಲ್ಲಿ ಕಂಪ್ಯೂಟರ್ ಲ್ಯಾಬ್‌ನ ಕೊರತೆ ಇದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಮೂಲಭೂತ ಸೌಕರ್ಯಗಳನ್ನು ಒದಗಿಸುವುದರ ಸಂಬಂಧ ಮಾರ್ಚ್ 2024ರ ಮಾಹೆಯಲ್ಲಿ ಟೆಂಡರ್ ಆಹ್ವಾನಿಸಲು ಅಗತ್ಯ ಕ್ರಮವಹಿಸಲಾಯಿತು. ಆದರೆ ಲೋಕಸಭಾ ಚುನಾವಣೆಯ ನೀತಿ ಸಂಹಿತೆ ದಿನಾಂಕ 16-03-2024ರಿಂದ ಜಾರಿಗೊಂಡ ಹಿನ್ನೆಲೆಯಲ್ಲಿ, ಈ ಎಲ್ಲಾ ಟೆಂಡರ್ ಪ್ರಕ್ರಿಯೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು.<br><br>ಪ್ರೊ ಎ.ಹೆಚ್.ಎಂ ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರು ಮಾತನಾಡಿ, ಸರ್ಕಾರದ ಪ್ರಥಮ ದರ್ಜೆ ಕಾಲೇಜುಗಳಲ್ಲಿಯೂ ಸಹ ಮೂಲಭೂತ ಸೌಕರ್ಯಗಳ ಕೊರತೆ ಇದ್ದು, ಸದರಿ ಕಾಲೇಜುಗಳಲ್ಲಿಯೂ ಸಹ ಅಗತ್ಯವಿರುವ ಕಂಪ್ಯೂಟರ್ ಮತ್ತು ಪರಿಕರಗಳು ಇಲ್ಲದೆ ಇರುವುದರಿಂದ ಸರ್ಕಾರೇತರ ವಿವಿಧ ಏಜೆನ್ಸಿ ಅಥವಾ ಖಾಸಗಿ ಕಂಪನಿಗಳ ಪ್ರಾಯೋಜಕತ್ವದಲ್ಲಿ ಈ ಮೂಲಭೂತ ಸೌಕರ್ಯಗಳನ್ನು ಪಡೆಯಲು ಕ್ರಮವಹಿಸಲಾಗುತ್ತಿದೆ. ಈ ರೀತಿ ವಿಶ್ವವಿದ್ಯಾನಿಲಯವು ಸಹ ಸರ್ಕಾರೇತ್ತರ ವಿವಿಧ ಏಜೆನ್ಸಿಗಳ ಮೂಲಕ ಪ್ರಾಯೋಜಕತ್ವವನ್ನು ಪಡೆದುಕೊಂಡಲ್ಲಿ, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಹಾಯಕವಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಡಾ. ಬಸವರಾಜು ಸಿ. ಇವರು ಮಾತನಾಡಿ, ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯು ಸ್ವಯಂ ಆರ್ಥಿಕ ಯೋಜನೆಯಡಿ ನಡೆಸಲಾಗುತ್ತಿರುವ ಸಂಸ್ಥೆಯಾಗಿದ್ದು, ವಿದ್ಯಾರ್ಥಿಗಳಿಂದ ಸಂಗ್ರಹವಾಗುವ ಶುಲ್ಕಗಳಿಂದ ಮೇಲಿನ ಮೂಲಭೂತ ಸೌಕರ್ಯಗಳನ್ನು |

ಒದಗಿಸುವುದರಿಂದ ಪ್ರಾಯೋಜಕತ್ವದ ಅವಶ್ಯಕತೆ ಇರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ನಾಗರಾಜು ಸಿ ರವರು ಮಾತನಾಡಿ, 82 ಕಂಪ್ಯೂಟರ್‌ಗಳು ಇದೆ ಎಂದು ಸಭೆಯ ಗಮನಕ್ಕೆ ತಂದರು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿಗೆ ಮಾನ್ಯ ಕುಲಪತಿಗಳೊಂದಿಗೆ ತಾವು ಭೇಟಿ ನೀಡಿದ್ದು, ಈಗಾಗಲೇ ಒದಗಿಸಿರುವ ಸೌಲಭ್ಯಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ಶೇಕಡ 80 ರಷ್ಟು ಸಿಬ್ಬಂದಿಗಳು 12.30 ಗಂಟೆಯಾದರೂ ಕರ್ತವ್ಯಕ್ಕೆ ಬಂದಿರುವುದಿಲ್ಲ. ಹಾಗೆಯೇ, ಅಪರಾಹ್ನ 3.00 ಗಂಟೆಗೆಲ್ಲಾ ಕಛೇರಿಯಿಂದ ನಿರ್ಗಮಿಸಿರುತ್ತಾರೆ. ನಿರ್ದೇಶಕರು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಈ ಕುರಿತು ಈಗಾಗಲೇ ನೋಟಿಸ್ ಜಾರಿಗೊಳಿಸಲಾಗಿದೆ. IA marks books ಅನ್ನು scrap ತರಹ ಬಿಸಾಕಿದ್ದಾರೆ, ಮೌಲ್ಯಮಾಪನ ಮಾಡಿಲ್ಲ, ಅಂಕಗಳನ್ನು ನಮೂದಿಸಿಲ್ಲ. ಪ್ರಯೋಗಾಲಯದಲ್ಲಿ ಎಲ್ಲಾ ವಿಷಯಗಳನ್ನು miscellaneous ಆಗಿ ಇಟ್ಟಿದ್ದಾರೆ. ಉತ್ತರ ಪತ್ರಿಕೆಗಳನ್ನು ಸಹ ಮೌಲ್ಯಮಾಪನ ಮಾಡಿಲ್ಲ. ಕೇಳಿದರೆ ವಿಭಾಗಾಧ್ಯಕ್ಷರು ಇಲ್ಲ ಎಂದು ತಿಳಿಸುತ್ತಾರೆ. ವಿಭಾಗಾಧ್ಯಕ್ಷರನ್ನು ಕೇಳಿದರೆ ಸಂಬಂಧಪಟ್ಟ ಶಿಕ್ಷಕರಿಲ್ಲ ಎಂದು ತಿಳಿಸುತ್ತಾರೆ. ಯಾವುದನ್ನು ಮೌಲ್ಯಮಾಪನ ಮಾಡದೆ Blue Book ಇಟ್ಟಿದ್ದಾರೆ. ಪ್ರಯೋಗಾಲಯ ಸ್ವಚ್ಛತೆಯಿಲ್ಲ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ Local Area Network ಹಾಕಿಸಿದ್ದೇವೆ. ಅದು ಸುಟ್ಟು ಕರಕಲಾಗಿದೆ. ಬೋರ್‌ವೆಲ್‌ಯಿದ್ದರೂ ಸಹ ಕಾಲೇಜಿನ ಆವರಣದಲ್ಲಿರುವ ಲಾನ್‌ಗೆ ನೀರುಣಿಸುವ ವ್ಯವಸ್ಥೆಯನ್ನು ಮಾಡದೇ, ಲಾನ್ ಸಂಪೂರ್ಣವಾಗಿ ಒಣಗಿರುವುದು ಕಂಡುಬಂದಿದೆ. ಈ ರೀತಿಯ ಎಲ್ಲಾ ಅವ್ಯವಸ್ಥೆಯನ್ನು ಗಮನಿಸಿದಾಗ ನಿರ್ದೇಶಕರ ಅದಕ್ಷತೆ ಎದ್ದು ಕಾಣುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

ಡಾ. ಟಿ.ಆರ್ .ಚಂದ್ರಶೇಖರ್ ರವರು ಮಾತನಾಡಿ, ಎಲ್ಲಾ ವಿಭಾಗಗಳಲ್ಲಿಯೂ ಈ ರೀತಿ ಇದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಎಲ್ಲಾ ವಿಭಾಗಗಳಲ್ಲಿಯೂ ಈ ರೀತಿಯ ಅವ್ಯವಸ್ಥೆಯಿರುವುದಿಲ್ಲ. ಕೆಲವೊಂದು ವಿಭಾಗಗಳಲ್ಲಿ ಮಾತ್ರ ಇರುತ್ತದೆ. ಈ ರೀತಿಯ ಅವ್ಯವಸ್ಥೆಯನ್ನು ಹಂತ ಹಂತವಾಗಿ ಬಗೆಹರಿಸಿ, ಒಂದು ತಹಬದಿಗೆ ತರಲು ಪ್ರಯತ್ನಿಸುತ್ತಿದ್ದೇವೆ ಎಂದು ತಿಳಿಸಿದರು.

ಶ್ರೀ ಮಹದೇಶು ರವರು ಮಾತನಾಡಿ, ಬಯೋಮೆಟ್ರಿಕ್ಸ್ ಅನ್ನು ಅಳವಡಿಸಿ ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ರವರು ಮಾತನಾಡಿ, ಗ್ರಂಥಾಲಯಕ್ಕೆ ಭೇಟಿ ಕೊಟ್ಟಿದ್ದೀರಾ ಎಂದು ಕೇಳಿದರು. ಆರು ತಿಂಗಳಿಂದ ಸಂಪ್ ಸ್ವಚ್ಛಗೊಳಿಸಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯುಂಟಾದರೆ ಏನು ಗತಿ ಎಂದು ತಿಳಿಸಿದರು.

ಡಾ. ನಟರಾಜ್ ಹೆಚ್.ಎಸ್. ರವರು ಮಾತನಾಡಿ, ಸಭಾಂಗಣದ ಕೊರತೆ ಇದೆ ಹಾಗೂ ತಾಂತ್ರಿಕವಾಗಿ ವಿದ್ಯಾರ್ಥಿಗಳಿಗೆ ಪಾಠ ಮಾಡುವುದಕ್ಕೆ ಕೊರತೆ ಇದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಪಕ್ಕದಲ್ಲಿ ಫಾರ್ಮಸಿ ಕಾಲೇಜು ಪ್ರಾರಂಭಿಸಲು ಕಟ್ಟಡವನ್ನು ನಿರ್ಮಿಸಲಾಗಿದೆ. ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಅರ್ಕಿಟೆಕ್ಚರ್‌ನಲ್ಲಿ ದೊಡ್ಡ ಸಭಾಂಗಣವಿದೆ. ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಕಾರ್ಯಕ್ರಮಗಳನ್ನು ಆಯೋಜಿಸಿದಾಗ ಈ ಮೇಲೆ ತಿಳಿಸಿರುವ ಎರಡು ಕಟ್ಟಡಗಳಲ್ಲಿನ ಸಭಾಂಗಣವನ್ನು ಉಪಯೋಗಿಸಿಕೊಳ್ಳುವಂತೆ ಈಗಾಗಲೇ ಮೌಖಿಕವಾಗಿ ಸೂಚನೆಯನ್ನು ನೀಡಿರುವುದಾಗಿ ತಿಳಿಸಿದರು. ಮುಂದುವರಿದು, ಒಂದು ಸಂಸ್ಥೆ ಬೆಳೆಯಬೇಕಾದರೆ ಅಧ್ಯಾಪಕರಲ್ಲಿ ಪರಸ್ಪರ ಸಮನ್ವಯವಿರಬೇಕು. ಬಯೋಮೆಟ್ರಿಕ್ಸ್ ಸಾಧನವನ್ನು ಹಾಜರಾತಿಗಾಗಿ ಅಳವಡಿಸಲಾಗಿದೆ.

| | |
|---|---|
| | ನಿರ್ದೇಶಕರಾಗಲೀ ಅಥವಾ ಸಿಬ್ಬಂದಿಗಳಾಗಲೀ ವೇತನ ಪಾವತಿಸಲು ವೇತನದ ಹುಂಡಿಯೊಂದಿಗೆ ಬಯೋಮೆಟ್ರಿಕ್ಸ್‌ನಲ್ಲಿ ದಾಖಲಾದ ಹಾಜರಾತಿಯನ್ನು ಲಗತ್ತಿಸುತ್ತಿಲ್ಲವೆಂದು ತಿಳಿಸಿದರು. ಹಾಗೆಯೇ, ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿಯೂ ಬಯೋಮೆಟ್ರಿಕ್ಸ್ ಅಳವಡಿಸಲಾಗಿದ್ದು, ಬಯೋಮೆಟ್ರಿಕ್ಸ್ ವ್ಯವಸ್ಥೆಯನ್ನು ವಿಶ್ವವಿದ್ಯಾನಿಲಯದ ಇನ್ನಿತರೆ ಕಛೇರಿ/ವಿಭಾಗಗಳಲ್ಲಿ ಅಳವಡಿಸಲು ಕ್ರಮ ತೆಗೆದುಕೊಳ್ಳುತ್ತೇವೆಂದು ಹಾಗೂ ಇದಕ್ಕಾಗಿ ಟೆಂಡರ್ ಆಹ್ವಾನಿಸಲಾಗುವುದೆಂದು ತಿಳಿಸಿದರು.<br><br>ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ರವರು ಮಾತನಾಡಿ, ಆಧಾರ್ ಸಂಖ್ಯೆಯನ್ನೊಳಗೊಂಡ ಬಯೋಮೆಟ್ರಿಕ್ ಅನ್ನು ಅಳವಡಿಸುವಂತೆ ಸಲಹೆ ನೀಡಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಬಯೋಮೆಟ್ರಿಕ್ಸ್ ಅನ್ನು ಅಳವಡಿಸಿದ್ದು ಸ್ಥಳ, ಸಮಯ ಹಾಜರಾತಿಯಲ್ಲಿ ನಮೂದಾಗುತ್ತದೆ. ಸಿಬ್ಬಂದಿಗಳಿಗೆ ಮಾತ್ರವಲ್ಲದೇ ವಿದ್ಯಾರ್ಥಿಗಳಿಗೂ ಸಹ ಬಯೋಮೆಟ್ರಿಕ್ಸ್ ಕಡ್ಡಾಯಗೊಳಿಸಲು ಕ್ರಮವಹಿಸಲಾಗುವುದು. ಏಕೆಂದರೆ ಕೆಲವು ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗುತ್ತಿಲ್ಲವೆಂದು ಹಾಗೂ ಉತ್ತರಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದ್ದರೂ ಕೂಡ ಅಂಕಗಳನ್ನು ನಮೂದಿಸಿಲ್ಲವೆಂದು ತಿಳಿಸಿದರು.<br><br>ಡಾ. ಶಿಲ್ಪ ಜೆ. ರವರು ಮಾತನಾಡಿ, ಬಯೋಮೆಟ್ರಿಕ್ಸ್‌ನಲ್ಲಿ ದಾಖಲಾಗುವ ಹಾಜರಾತಿಯನ್ನು ಸಲ್ಲಿಸಿದ್ದಲ್ಲಿ ಮಾತ್ರ ವೇತನ ಪಾವತಿಸಲು ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.<br><br>ಡಾ. ಅಂಥೋನಿ ಪೌಲ್ ರಾಜ್ ಸಿ. ರವರು ಮಾತನಾಡಿ, ಅಂಕಗಳನ್ನು ನಮೂದಿಸಲು ಅಂತಿಮ ದಿನಾಂಕವನ್ನು ನಿಗದಿಗೊಳಿಸಲಾಗಿದೆ. ಆದರೆ, ಮೌಲ್ಯಮಾಪನ ಮಾಡಲು ಅಂತಿಮ ದಿನಾಂಕ ನಿಗಧಿಯಾಗಿರುವುದಿಲ್ಲ. ಸಿಬಿಸಿಎಸ್‌ನಲ್ಲಿ ವಿದ್ಯಾರ್ಥಿಗಳು ಉತ್ತರ ಪತ್ರಿಕೆಗಳ ನಕಲು ಪ್ರತಿಯನ್ನು ಕೇಳುವ ಸಂಭವವಿರುತ್ತದೆಯೆಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ರವರು ಮಾತನಾಡಿ, ಅಧ್ಯಾಪಕರ ಕೊರತೆಯಿದೆ. AICTE ಪ್ರಕಾರ 32 ಅಧ್ಯಾಪಕರು ಹೆಚ್ಚುವರಿಯಾಗಿ ಬೇಕು. ಆದರೆ ವಿಶ್ವವಿದ್ಯಾನಿಲಯದ ಪ್ರಕಾರ 20 ಅಧ್ಯಾಪಕರು ಬೇಕು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, AICTE ಒಂದು ಸಲಹಾ ಸಂಸ್ಥೆಯಾಗಿದೆ. All India Council for Technical Education (AICTE) ಮತ್ತು UGC ಯ ಮಾನದಂಡಗಳು ವಿಭಿನ್ನವಾಗಿರುತ್ತವೆ. ಯುಜಿಸಿಯು ಅಧ್ಯಾಪಕರುಗಳಿಗೆ ವೇತನ ಶ್ರೇಣಿಯನ್ನು ಮಾತ್ರ ನಿಗದಿಗೊಳಿಸುತ್ತವೆ. ಆದರೆ, ಸದರಿ ವೇತನ ಶ್ರೇಣಿಯನ್ವಯ ಆಯಾ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ವೇತನವನ್ನು ಪಾವತಿಸುತ್ತವೆ. ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ಮಾತ್ರ AICTE ಮಾರ್ಗಸೂಚಿಗಳನ್ನು ವಿಶ್ವವಿದ್ಯಾನಿಲಯ ಪಾಲಿಸಬೇಕು. ಸಾಂಪ್ರದಾಯಿಕ ಕೋರ್ಸುಗಳಿಗೆ ಯುಜಿಸಿಯ ಮಾನದಂಡವನ್ನು ಅನುಸರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಯುಜಿಸಿ ವೇತನ ಶ್ರೇಣಿಯಡಿ ವೇತನ ಪಡೆಯುತ್ತಿರುವ ಅಧ್ಯಾಪಕರುಗಳ ವಯೋನಿವೃತ್ತಿಯನ್ನು 62 ವರ್ಷಗಳಿಗೆ ನಿಗದಿಗೊಳಿಸಲಾಗಿದೆ. ಆದರೆ, ಯುಜಿಸಿ ವೇತನ ಶ್ರೇಣಿಯಡಿ ವೇತನ ಪಡೆಯುತ್ತಿರುವ ಸರ್ಕಾರದ ಪದವಿ ಕಾಲೇಜುಗಳ ಅಧ್ಯಾಪಕರುಗಳ ವಯೋನಿವೃತ್ತಿಯನ್ನು 60 ವರ್ಷಕ್ಕೆ ಮಾತ್ರ ನಿಗದಿಗೊಳಿಸಲಾಗಿದೆ. ಹೀಗಾಗಿ ಮಾರ್ಗಸೂಚಿಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಹಾಗೂ ಪದವಿ ಕಾಲೇಜುಗಳ ಅಧ್ಯಾಪಕರುಗಳಿಗೆ ವಿಭಿನ್ನವಾದ ಮಾನದಂಡಗಳನ್ನು ವಿಧಿಸಿದ್ದು, AICTE ವತಿಯಿಂದ BCA ಮತ್ತು BBA ಕೋರ್ಸುಗಳನ್ನು ಪ್ರಾರಂಭಿಸಲು ಅನುಮತಿ ಪಡೆದುಕೊಳ್ಳಬೇಕೆಂದು ಷರತ್ತು ವಿಧಿಸುತ್ತಾರೆ. ಆದರೆ AICTE ಹೇಳುವ ರೀತಿಯಲ್ಲಿ ಕೋರ್ಸ್‌ಗಳನ್ನು ನಡೆಸಲು ಸಾಧ್ಯವಾಗುವುದಿಲ್ಲ. ಏಕೆಂದರೆ AICTE ಮಾರ್ಗಸೂಚಿಯ ಪ್ರಕಾರ 20 ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರಿರಬೇಕೆಂಬ ನಿಯಮವಿದೆ. ಸದರಿ ನಿಯಮವನ್ನು ಸ್ಥಳೀಯ ಮಟ್ಟದಲ್ಲಿ ಪಾಲಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು. |

| | |
|---|---|
| | ಶ್ರೀ ನಾಗರಾಜು ಸಿ.ರವರು ಮಾತನಾಡಿ, 28 ಅಧ್ಯಾಪಕರಲ್ಲಿ 03 ಅಧ್ಯಾಪಕರು ಕರ್ತವ್ಯಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಪ್ರಸ್ತುತ 25 ಅಧ್ಯಾಪಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 20 ಅಧ್ಯಾಪಕರನ್ನು ನೇಮಕಾತಿ ಮಾಡಿಕೊಳ್ಳಬೇಕು. ಇದೇ ರೀತಿ ಮುಂದುವರಿದರೆ NIRF ರ್‍ಯಾಕಿಂಗ್‌ನಲ್ಲಿ ಕುಸಿತ ಕಂಡು ಬಂದಂತೆ ಸಂಸ್ಥೆಯನ್ನು ಮುಚ್ಚಬೇಕಾಗುತ್ತದೆಯೆಂದು ತಿಳಿಸಿದರು. ಆದಷ್ಟು ಬೇಗ ಸಮಸ್ಯೆಗಳನ್ನು ಬಗೆಹರಿಸುವಂತೆ ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, NIRF ರ್‍ಯಾಕಿಂಗ್‌ನ ಮಾನದಂಡವೇ ಬೇರೆ ಇಂಜಿನಿಯರಿಂಗ್ ಕಾಲೇಜಿನ ಮಾನದಂಡವೇ ಬೇರೆ. NIRF ರ್‍ಯಾಕಿಂಗ್‌ನಲ್ಲಿ ಐದು ಅಂಶಗಳಿವೆ ಎಂದು ತಿಳಿಸಿದರು. ಈಗಾಗಲೇ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಕ್ರಮವಹಿಸಲಾಗುತ್ತಿದೆ. ಬೋಧನಾ ಕೊಠಡಿಗಳ ಕೊರತೆಯಿದ್ದು, ಪಕ್ಕದ ಫಾರ್ಮಸಿ ಕಾಲೇಜಿನಲ್ಲಿ ತರಗತಿಗಳನ್ನು ನಡೆಸಲು ಅವಶ್ಯವಿರುವ ಕೊಠಡಿಗಳನ್ನು ಉಪಯೋಗಿಸಿಕೊಳ್ಳುವಂತೆ ವ್ಯವಸ್ಥೆ ಮಾಡಲು ಕ್ರಮವಹಿಸಲಾಗುವುದು.. ಮುಂಬರುವ ಶೈಕ್ಷಣಿಕ ಸಾಲಿನಿಂದ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿಗೆ ಅವಶ್ಯವಿರುವ ಮೂಲಭೂತ ಸೌಕರ್ಯವನ್ನು ಹಂತ ಹಂತವಾಗಿ ಕಲ್ಪಿಸಲು ಕ್ರಮವಹಿಸಲಾಗುವುದೆಂದು ತಿಳಿಸಿದರು.<br><br>ಶ್ರೀ ಮಹದೇಶು ರವರು ಮಾತನಾಡಿ, ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಪಕ್ಕದಲ್ಲಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ಕಟ್ಟಡವಿದ್ದು, ಸದರಿ ವಿಭಾಗದಲ್ಲಿ ವಿದ್ಯಾರ್ಥಿಗಳು ಇಲ್ಲದಿದ್ದರೆ ಆ ಕಟ್ಟಡವನ್ನು ಸಹ ಉಪಯೋಗಿಸಿಕೊಳ್ಳಬಹುದೆಂದು ಸಲಹೆ ನೀಡಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, B.Plan, B.Arch ಹಾಗೂ M.Arch ಕೋರ್ಸ್‌ಗಳು ನಡೆಯುತ್ತಿವೆ. ಆದ್ದರಿಂದ ಅವರ ತರಗತಿಗಳನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲ. ಸದರಿ ಕಟ್ಟಡದಲ್ಲಿನ ಸಭಾಂಗಣವನ್ನು ಮಾತ್ರ ಉಪಯೋಗಿಸಿಕೊಳ್ಳಬಹುದೆಂದು ತಿಳಿಸಿದರು.<br><br>ಡಾ. ನಟರಾಜ್ ಹೆಚ್.ಎಸ್. ಮತ್ತು ಶ್ರೀ ನಾಗರಾಜು ಸಿ. ಇವರುಗಳು ಮಾತನಾಡಿ, ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಕಟ್ಟಡ ಮಳೆಗಾಲದಲ್ಲಿ ಸೋರುತ್ತಿದೆಯೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಕಟ್ಟಡವನ್ನು ನಿರ್ಮಿಸಿದ್ದ ಸಂದರ್ಭದಲ್ಲಿ AICTE ಯವರು ಪರಿಶೀಲನೆಗೆ ಆಗಮಿಸುವರೆಂದು ಕಟ್ಟಡವನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಬೇಕೆಂಬ ಕಾರಣದಿಂದಾಗಿ ಗುಣಮಟ್ಟದಲ್ಲಿ ಏರುಪೇರಾಗಿರಬಹುದು ಎಂದು ಸಭೆಯ ಗಮನಕ್ಕೆ ತಂದರು.<br><br>ಶ್ರೀ ನಾಗರಾಜು ಸಿ.ರವರು ಮಾತನಾಡಿ, ವಿದ್ಯಾರ್ಥಿಗಳಿಂದ ಶುಲ್ಕವನ್ನು ಪಡೆದುಕೊಳ್ಳುವುದರಿಂದ ಅವರಿಗೆ ಉತ್ತಮ ಸವಲತ್ತುಗಳನ್ನು ನೀಡುವುದು ವಿಶ್ವವಿದ್ಯಾನಿಲಯದ ಕರ್ತವ್ಯವಾಗಿದೆ. ಆದ್ದರಿಂದ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ಸಮಸ್ಯೆಗಳನ್ನು ಹದಿನೈದು ದಿನಗಳೊಳಗಾಗಿ ಪರಿಹರಿಸಲು ಸೂಕ್ತಕ್ರಮಕೈಗೊಳ್ಳುವಂತೆ ಕೋರಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಆದಷ್ಟು ಬೇಗ ಸಮಸ್ಯೆಯನ್ನು ಪರಿಹರಿಸುತ್ತೇವೆಂದು ತಾವು ತೆಗೆದುಕೊಂಡ ಕ್ರಮದ ಬಗ್ಗೆ ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವುದಾಗಿ ತಿಳಿಸಿದರು. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದಂತೆ ತೆಗೆದುಕೊಂಡ ಕ್ರಮದ ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ನಿರ್ಣಯಿಸಿತು.** |

| | |
|---|---|
| ಸಾಮಾನ್ಯ ಸಭೆ 2024/5.2 | ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳು ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಂಬಂಧ ಹೊರದೇಶಕ್ಕೆ ಹೋಗಿಬರಲು ಅನುಮತಿ ನೀಡುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳು ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಂಬಂಧ ಹೊರದೇಶಕ್ಕೆ ಹೋಗಿಬರಲು ಅನುಮತಿ ನೀಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಗಿತ್ತು ಎಂದರು.<br><br>ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ವರದಿ ಹಾಗೂ ಸರ್ಕಾರದ ಸುತ್ತೋಲೆ ಪ್ರಕಾರ ಎಷ್ಟು ದಿನಗಳ ಅವಧಿಗೆ ವಿದೇಶಕ್ಕೆ ಭೇಟಿ ನೀಡಲು ಅನುಮತಿ ನೀಡುತ್ತೀರಿ ಎಂದು ಕೇಳಿದರು. ಅಧ್ಯಾಪಕರುಗಳು ವಿದೇಶಕ್ಕೆ ಭೇಟಿ ನೀಡುವ ಸಂದರ್ಭಗಳಲ್ಲಿ ಸದರಿ ವಿಷಯದ ಕುರಿತು ಚರ್ಚಿಸಬಹುದೆಂದು ಹಾಗೂ ಈ ಸಂಬಂಧ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಬಹುದೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳು ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಂಬಂಧ ಹೊರದೇಶಕ್ಕೆ ಹೋಗಿಬರಲು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದೆ ಅಧ್ಯಾಪಕರುಗಳು ಅಧ್ಯಯನ ನಿಮಿತ್ತ ಅಥವಾ ಸಂಶೋಧನಾ ನಿಮಿತ್ತ ಮೂರು ತಿಂಗಳ ಅವಧಿಯನ್ನು ಮೀರದಂತೆ ವಿದೇಶಕ್ಕೆ ತೆರಳಲು ಅನುಮತಿ ನೀಡುತ್ತಿರುವುದಾಗಿ ತಿಳಿಸಿದರು. ಪ್ರಸ್ತುತ ಇರುವ ಮಾನದಂಡವನ್ನು ಪರಿಷ್ಕರಿಸುವುದರ ಸಂಬಂಧ ವಿಷಯವನ್ನು ಮಂಡಿಸಲಾಗಿದೆ ಎಂದರು. |
| ತೀರ್ಮಾನ | **ದಿನಾಂಕ 03-11-2007ರ ಸಿಂಡಿಕೇಟ್ ಸಭೆಯ ನಿರ್ಣಯದನ್ವಯ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದೆ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಂಬಂಧ ಮೂರು ತಿಂಗಳ ಅವಧಿ ಮೀರದಂತೆ ಹೊರದೇಶಕ್ಕೆ ಹೋಗಿಬರಲು ನೀಡುತ್ತಿರುವ ಮಾನದಂಡವನ್ನೇ ಅನುಸರಿಸುವಂತೆ ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/5.3 | ಶ್ರೀ ನಟರಾಜ್ ಶಿವಣ್ಣ, ಮಾನ್ಯ ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದ ಟೆಂಡರ್ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕೋರಿರುವ ಬಗ್ಗೆ. |
| | ಡಾ. ನಟರಾಜು ಹೆಚ್.ಎಸ್. ರವರು ಮಾತನಾಡಿ, ಕಳೆದ ಸಭೆಯಲ್ಲಿ ಎಲ್ಲಾ ರೀತಿಯ ಟೆಂಡರ್ ಪ್ರಕ್ರಿಯೆಗಳ ಮಾಹಿತಿಗಳನ್ನು ಕೋರಿದ್ದು, ನನಗೆ ಸ್ಪಷ್ಟ ಮಾಹಿತಿ ಲಭ್ಯವಾಗಿರುವುದಿಲ್ಲ, ಮೊದಲನೇಯದಾಗಿ ಟೆಂಡರ್ ಪ್ರಕ್ರಿಯೆ ಕುರಿತು ಯಾವ ದಿನಾಂಕದಂದು ಅಧಿಸೂಚನೆ ಹೊರಡಿಸಿರುವುದನ್ನು ನಮೂದಿಸಿರುವುದಿಲ್ಲ. Last Date for submission ಎಂದು ಮಾತ್ರ ಇದೆ. ಆದರೆ ಪ್ರಾರಂಭದ ದಿನಾಂಕವನ್ನು ನಮೂದು ಮಾಡಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಕಳೆದ ತಿಂಗಳು ತಾಂತ್ರಿಕವಾಗಿ ಒಂದು ಸಮಸ್ಯೆಯಾಗಿದೆ. ಐಸಿಡಿ ವಿಭಾಗದಿಂದ ಸ್ನಾತಕೋತ್ತರ ಪ್ರವೇಶಾತಿಗೆ ಸಂಬಂಧಿಸಿದಂತೆ 27ನೇ ತಾರೀಖಿನಂದು ಅಧಿಸೂಚನೆ ಹೊರಡಿಸಿರುತ್ತೀರಿ, ಟೆಂಡರ್ ಪ್ರಕ್ರಿಯೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 29 ಎಂದು ನಮೂದಿಸಿದ್ದು, ಆದರೆ ಪೋರ್ಟಲ್ ತೆರೆಯುವುದು ದಿನಾಂಕ: 25 ಎಂದು ತಿಳಿಸಿರುತ್ತಾರೆ. ಇದು ಗೊಂದಲವನ್ನುಂಟು ಮಾಡಿದೆ ಎಂದು ತಿಳಿಸಿದರು. ಆದ್ದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸ್ಪಷ್ಟ ಮಾಹಿತಿ ನೀಡಬೇಕೆಂದು ಕೋರಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಐಸಿಡಿ ವಿಭಾಗದಿಂದ ಇದರ ಬಗ್ಗೆ ಮಾಹಿತಿ ನೀಡಲಾಗುವುದು ಹಾಗೂ ಓಪನಿಂಗ್ ಪೋರ್ಟಲ್ ಸಮಯದಲ್ಲಿ ಹಳೆ ಸಾಫ್ಟವೇರ್ ಇತ್ತು ಎಂದು ತಿಳಿಸಿದರು. |

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಒಂದೇ ಸಾಫ್ಟ್‌ವೇರ್ ಅನ್ನು ನಿರಂತರವಾಗಿ ಬಳಸಲು ಸಾಧ್ಯವಿಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಪ್ರವೇಶಾತಿ ಸಂದರ್ಭದಲ್ಲಿನ ಎರಡು ತಿಂಗಳುಗಳಿಗೆ ಮಾತ್ರ ಸಾಫ್ಟ್‌ವೇರ್‌ನ ಅವಶ್ಯಕತೆಯಿರುವುದರಿಂದ, ಎರಡು ತಿಂಗಳುಗಳಿಗೆ ಮಾತ್ರ ಸಾಫ್ಟವೇರ್ ಖರೀದಿಸಲಾಗಿದೆ. ಸದರಿ ಸಾಫ್ಟವೇರ್ ಅನ್ನು ವರ್ಷ ಪೂರ್ತಿ ಬಳಸಲು ಸಾಧ್ಯವಿಲ್ಲ ಹಾಗೂ ಒಂದು ವರ್ಷದ ಅವಧಿಗೆ ಖರೀದಿಸಿದಲ್ಲಿ, ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗುತ್ತದೆಯೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಅರ್ಜಿ ಸಲ್ಲಿಸಲು ಕೊನೆ ದಿನಾಂಕ 29 ಎಂದಿರುತ್ತದೆ. ಆದರೆ ಕುಲಸಚಿವರು ಆದೇಶವನ್ನು ಹೊರಡಿಸಿದ್ದು 25ನೇ ತಾರೀಖಿನಂದೇ ಪೋರ್ಟಲ್ ಓಪನ್ ಮಾಡಲಾಗುವುದೆಂದು ತಿಳಿಸಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ, ವಿದ್ಯಾರ್ಥಿಗಳಿಗೆ ಪಿಜಿ ಪ್ರವೇಶಾತಿಗೆ ಅನುಕೂಲವಾಗಲೆಂಬ ಕಾರಣಕ್ಕೆ ಟೆಂಡರ್ ಪೋರ್ಟಲ್ ಅನ್ನು ಓಪನ್ ಮಾಡಿಸಲಾಗಿರುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಉನ್ನತ ಶಿಕ್ಷಣ ಇಲಾಖೆಯಿಂದ Calendar of events ಬಂದಿದ್ದು, ಶೈಕ್ಷಣಿಕ ಪ್ರಕ್ರಿಯೆಯಲ್ಲಿ ತಡವಾಗಬಾರದು ಎಂಬ ಉದ್ದೇಶದಿಂದ ಪೋರ್ಟಲ್ ಓಪನ್ ಮಾಡಲಾಗಿದೆ ಎಂದು ತಿಳಿಸಿದರು. ಆದರೂ ಸಹ ಅರ್ಜಿಗಳನ್ನು ಸ್ವೀಕರಿಸಿರುವುದಿಲ್ಲ ಹಾಗೂ ಈ ಸಂದರ್ಭದಲ್ಲಿ SBI Gateway problem ಇರುವುದಾಗಿ ಸಹ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ವಿದ್ಯಾರ್ಥಿಗಳ ಪ್ರವೇಶಾತಿಗೆ ಸಂಬಂಧಿಸಿದ ಸಾಫ್ಟ್‌ವೇರ್ ಇದ್ದು, ಈ ಹಿಂದೆ ಇದ್ದ ಸಾಫ್ಟ್‌ವೇರ್ ಯಾರದ್ದು? ಎಂದು ಕೇಳಿದರು.

ಕುಲಸಚಿವರು ಮಾತನಾಡಿ ವಿದ್ಯಾರ್ಥಿಗಳ ಪ್ರವೇಶಾತಿಗೆ ಸಂಬಂಧಿಸಿದ ಸಾಫ್ಟವೇರ್‌ನ ಟೆಂಡರ್ ಅವಧಿ ಮುಗಿದಿರುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, 60 ಲಕ್ಷದ ಟೆಂಡರ್ ಅನ್ನು ಕೇವಲ ಮೂರು ತಿಂಗಳಿಗೆ ಹೊರಗುತ್ತಿಗೆ ನೀಡುವ ಬದಲು ನಾವೇ ಯಾಕೆ ವಿಶ್ವವಿದ್ಯಾನಿಲಯದಿಂದ ಒಂದು ಸಾಫ್ಟ್‌ವೇರ್ ಅನ್ನು ಸಿದ್ಧಗೊಳಿಸಬಾರದು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಸ್ತುತ ಖರೀದಿ ಮಾಡಿರುವ ಸಾಫ್ಟವೇರ್‌ಗೆ ಮೇಲೆ ತಿಳಿಸಿರುವಂತೆ 60 ಲಕ್ಷಗಳಷ್ಟು ಮೊತ್ತ ನೀಡುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಅಷ್ಟು ಮೊತ್ತವನ್ನು ಹೊರಗುತ್ತಿಗೆದಾರರಿಗೆ ಕೊಡುವ ಬದಲು ಮೈಸೂರು ವಿಶ್ವವಿದ್ಯಾನಿಲಯದಲ್ಲೇ ವಿದ್ಯಾರ್ಥಿಗಳ ದಾಖಲಾತಿಗೆ ಸಂಬಂಧಿಸಿದಂತೆ ಸ್ವಂತ ಸಾಫ್ಟ್‌ವೇರ್ ಇಟ್ಟುಕೊಂಡು ಆನ್‌ಲೈನ್ ಮುಖಾಂತರ ವಿದ್ಯಾರ್ಥಿಗಳ ಪ್ರವೇಶಾತಿಗೆ ಕ್ರಮಕೈಗೊಂಡರೆ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ಹೊರೆಯಾಗುವುದಿಲ್ಲ ಎಂದು ತಿಳಿಸಿದರು. ಹಿಂದೆ ನೀಡಿರುವ ಟೆಂಡರ್ ಅನ್ನು ರದ್ದುಗೊಳಿಸಿ ಹೊಸದಾಗಿ ಟೆಂಡರ್‌ನ ಅವಶ್ಯಕತೆ ಇದ್ದರೆ ಪ್ರಾಧಿಕಾರದ ಅನುಮತಿಯನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು. ಮುಂದುವರೆದು, ಪ್ರಾಧಿಕಾರದ ಅನುಮೋದನೆ ಬದಲಾಗಿ ಅನುಮತಿ ಪಡೆದು ಟೆಂಡರ್‌ಗೆ ಕ್ರಮವಹಿಸಬೇಕೆಂದು ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಕುಲಪತಿಯವರಿಗೆ ತಮ್ಮದೇ ಆದ ಅಧಿಕಾರವಿರುತ್ತದೆ. ಪ್ರತಿಯೊಂದು ವಿಷಯಗಳನ್ನು ಸಿಂಡಿಕೇಟ್ ಸಭೆಯ ಪೂರ್ವಾನುಮತಿಗೆ ತರಲು ಸಾಧ್ಯವಿಲ್ಲ. ಯಾವ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವುದೋ ಅಥವಾ ಬೇಡವೋ ಎಂಬುದರ ಬಗ್ಗೆ ನಿರ್ಧರಿಸುತ್ತೇನೆ. ಪ್ರವೇಶಾತಿಗೆ ಸಂಬಂಧಿಸಿದಂತೆ

ನಿಯಮಗಳನ್ನು ಅನುಸರಿಸಿದ್ದೇವೆ. ಮಾನವೀಯತೆ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪ್ರವೇಶಾತಿಯನ್ನು ಮುಂದುವರಿಸುತ್ತೇವೆ. ತುರ್ತು ಸಂಧರ್ಭದಲ್ಲಿ ಕೆಲವೊಂದು ವಿಷಯಗಳಿಗೆ ಅನುಮೋದನೆ ನೀಡಬೇಕಾಗಿರುತ್ತದೆ ಎಂದು ತಿಳಿಸಿದರು. ಪ್ರಮುಖ ವಿಷಯಗಳನ್ನು ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳಲಾಗುತ್ತದೆ ಎಂದು ತಿಳಿಸಿದರು. ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸಲಾಗುವುದೆಂದು ಹಾಗೂ ಕುಲಪತಿಯವರು, ಕುಲಸಚಿವ (ಆಡಳಿತ), ಕುಲಸಚಿವ (ಪರೀಕ್ಷಾಂಗ), ಹಣಕಾಸು ಅಧಿಕಾರಿ, ಕಾರ್ಯಪಾಲಕ ಅಭಿಯಂತರರು ಹಾಗೂ ವಿಶ್ವವಿದ್ಯಾನಿಲಯದ ಇತರೆ ಶಾಸನಬದ್ಧ ಅಧಿಕಾರಿಗಳಿಗೆ ಶೈಕ್ಷಣಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಕಾರ್ಯನಿರ್ವಹಿಸಲು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ರನ್ವಯ ಹಾಗೂ ಕೆ.ಸಿ.ಎಸ್.ಆರ್ ನಿಯಮಗಳನ್ವಯ ಕಾರ್ಯನಿರ್ವಹಿಸಲು ಅಧಿಕಾರವುಳ್ಳವರಾಗಿರುತ್ತಾರೆ. ಸದರಿ ಅಧಿಕಾರಿಗಳು ಅವರುಗಳ ವಿಭಾಗ/ಕಛೇರಿಗಳ ಕೆಲಸಕಾರ್ಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ವಯ ಅವಕಾಶಗಳಿರುವಂತೆ ಕರ್ತವ್ಯವನ್ನು ನಿರ್ವಹಿಸಬೇಕಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಡಾ. ನಟರಾಜು ಹೆಚ್.ಎಸ್. ರವರು ಮಾತನಾಡಿ, ಅತಿಥಿ ಉಪನ್ಯಾಸಕರನ್ನು ಸಂದರ್ಶನದ ಮೂಲಕ ನೇಮಕಾತಿಗೆ ಕ್ರಮಕೈಗೊಂಡಿರುವುದು ಸಿಂಡಿಕೇಟ್ ಸದಸ್ಯರುಗಳ ಗಮನಕ್ಕೆ ತಡವಾಗಿ ಬಂದಿರುತ್ತದೆ. ಆದರೂ ಕೂಡ ತೆಗೆದುಕೊಂಡಿರುವ ಕ್ರಮ ಸ್ವಾಗತಾರ್ಹ ಎಂದು ತಿಳಿಸಿದರು. ಆದರೆ ಕೆಲವೊಂದು ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದ ವಿಷಯವನ್ನು ಅನುಸಮರ್ಥನೆಗೆ ತರಲಾಗಿದೆ ಅನುಮೋದನೆಗೆ ಯಾವ ವಿಷಯವನ್ನು ಮಂಡಿಸಿರುವುದಿಲ್ಲ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ನೀತಿ ಸಂಹಿತೆ ಇದ್ದ ಸಂದರ್ಭದಲ್ಲಿ ವಿವಿ ವಸತಿನಿಲಯಗಳ ಭೋಜನ ವ್ಯವಸ್ಥೆಗೆ ತರಕಾರಿ, ಹಾಲು, ಮೊಸರು, ದಿನಸಿ ಮತ್ತು ಇತರೆ ಪದಾರ್ಥಗಳನ್ನು ಕೆಟಿಪಿಪಿ ಆಕ್ಟ್ ಪ್ರಕಾರ ನಿಯಮಾನುಸಾರ ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗದ ಪರಿಸ್ಥಿತಿಯಿದ್ದು 4500 ವಿದ್ಯಾರ್ಥಿಗಳಿಗೂ ಮೀರಿ ಆಹಾರ ಪೂರೈಕೆಗೆ ಕ್ರಮ ತೆಗೆದುಕೊಳ್ಳ ಬೇಕಾಗಿರುತ್ತದೆ, ಇಂತಹ ಸಂದರ್ಭದಲ್ಲಿ ಕಾರ್ಯಾದೇಶ ನೀಡದೆ ಟೆಂಡರ್‌ದಾರರು ಸರಬರಾಜು ಮಾಡುವುದಿಲ್ಲ. ಆದ್ದರಿಂದ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ನಿಯಮಾನುಸಾರ ಕಾರ್ಯಾದೇಶ ನೀಡಲಾಗಿದ್ದು, ಸದರಿ ವಿಷಯವನ್ನು ಅನುಸಮರ್ಥನೆಗೆ ತರಲಾಗಿದೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000ರ Powers of the Syndicate 29. (2) (b) to enter into, vary, carryout and cancel contracts on behalf of the University ಎಂದಿದೆ. ಮುಂದುವರೆದು, to enter into ಎಂದರೆ is it not ಮುಂಚೆ ಎಂದು ಅಲ್ಲವೇ ಎಂದು ಪ್ರಶ್ನಿಸಿದರು. ಮುಂದುವರೆದು, ಸಿಂಡಿಕೇಟ್ ಸದಸ್ಯರು ಕೋರುವ ಮಾಹಿತಿಗಳಿಗೆ ಒಂದೇ ಪುಟದಲ್ಲಿ ಉತ್ತರಿಸಲಾಗುತ್ತದೆ. ಅದಕ್ಕೆ ಸಂಬಂಧಿಸಿದ ಅನುಬಂಧಗಳು ಇರುವುದಿಲ್ಲ. ಆದರೆ ವಿಶ್ವವಿದ್ಯಾನಿಲಯ ನೀಡುವ ಮಾಹಿತಿಗಳಲ್ಲಿ ಅನುಬಂಧಗಳು ಇರುತ್ತದೆ ಎಂದು ತಿಳಿಸಿದರು. ಮುಂದುವರೆದು, GeM portalಗೆ ಸಂಬಂಧಿಸಿದ ಮಾಹಿತಿಯನ್ನು ಸಿಂಡಿಕೇಟ್ ಸದಸ್ಯರು ಒಂದು ಪತ್ರವನ್ನು ಕುಲಸಚಿವರಿಗೆ ಸಲ್ಲಿಸಲಾಗಿರುತ್ತದೆ. ಆದರೆ ಅವರಿಂದ ಯಾವುದೇ ಮಾಹಿತಿ ದೊರಕಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಎಲ್ಲಾ ವಿಷಯಗಳನ್ನು ಸಿಂಡಿಕೇಟ್‌ನಲ್ಲಿ ಚರ್ಚಿಸಬೇಡಿ ಎಂದು ತಿಳಿಸುತ್ತೀರಿ, ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ ಅವರು ಮಾಹಿತಿ ನೀಡುತ್ತಾರೆ ಎಂದು ತಿಳಿಸುತ್ತೀರಿ ಕುಲಸಚಿವರನ್ನು ಭೇಟಿ ಮಾಡಿ ವಿಶ್ವವಿದ್ಯಾನಿಲಯಕ್ಕೆ ಒಂದು ಕೋಟಿ ಹಣ ಉಳಿತಾಯವಾಗುತ್ತದೆ ಆದ್ದರಿಂದ ಆ ಟೆಂಡರ್‌ದಾರರು ಪ್ರಾತ್ಯಕ್ಷಿಕೆ ನೀಡಲು ಸಿದ್ದರಿದ್ದು,

| | |
|---|---|
| | ನೀವು ಪ್ರಾತ್ಯಕ್ಷಿಕೆ ನೋಡಿಲ್ಲವಂತೆ ಎಂದು ತಿಳಿಸಿ ತಮಗೆ ಪತ್ರ ಬರೆದಿದ್ದರೂ ಕೂಡ ಸ್ಪಂದಿಸಿರುವುದಿಲ್ಲವೆಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ರವರು ಮಾತನಾಡಿ, ಸಿಂಡಿಕೇಟ್ ಸದಸ್ಯರು ಕೋರುವ ಮಾಹಿತಿಗಳಿಗೆ ಹಾಗೂ ಪತ್ರಗಳಿಗೆ ಮನ್ನಣೆ ನೀಡುವುದು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, Powers of the Syndicate 29. (2) (b) to enter into ಎಂದಿದೆ ಎಂದರೆ ಸಿಂಡಿಕೇಟ್‌ಗೆ ಅಧಿಕಾರವಿದೆ ಎಂದರರ್ಥವಲ್ಲವೆಂದು ಕೇಳಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಕೆಲವೊಂದು ಸಂದರ್ಭದಲ್ಲಿ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ಹಾಗೂ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಅನುಮೋದನೆ ನೀಡಲು ತಮಗೆ ಅಧಿಕಾರವಿದೆಯಿದೆಯೆಂದು ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ ಪ್ರಮುಖವಾದ ತೀರ್ಮಾನ, ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ಸಿಂಡಿಕೇಟ್ ವ್ಯಾಪ್ತಿಗೆ ಅನುಸಮರ್ಥನೆಗೆ ತರುವುದನ್ನು ತಕ್ಷಣದಿಂದ ರದ್ದು ಮಾಡಿ, ಅನುಸಮರ್ಥನೆಯ ಬದಲು ಅನುಮತಿಯನ್ನು ಪಡೆಯಬೇಕೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಎಲ್ಲಾ ಟೆಂಡರ್ ಪ್ರಕ್ರಿಯೆಗಳಲ್ಲಿ ಕೊನೆಯ ದಿನ ಸಲ್ಲಿಕೆಯಾದ ನಂತರ, ಫ್ರಿ ಬಿಡ್ ಸಭೆಯಲ್ಲಿ ಟೆಂಡರ್‌ದಾರರ ಜೊತೆ ಚರ್ಚಿಸಲಾಗಿರುವ ವಿಷಯದ ಕುರಿತು ಟಿಪ್ಪಣಿ ಇದೆಯಾ ಎಂದು ಕೇಳಿದರು.<br><br>ಕುಲಸಚಿವರು ಮಾತನಾಡಿ, ಟೆಂಡರ್ ಕೊನೆ ದಿನ ಸಲ್ಲಿಕೆಯಾದ ನಂತರ ನಿಯಮಾನುಸಾರ ಕ್ರಮವಹಿಸಲಾಗಿದೆ. ಹಾಗೂ Prebid ಸಭೆಯನ್ನು ನಡೆಸಲಾಗಿದೆ.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಎಲ್ಲಾ ಟೆಂಡರ್‌ನಲ್ಲಿ ಕೊನೆಯ ದಿನಾಂಕವನ್ನು ಸಲ್ಲಿಕೆಗಾಗಿ ನೀಡಲಾಗಿದೆ. ಟೆಂಡರ್ ತೆರೆಯಲು 2, ಮತ್ತು 4 ದಿನಗಳ ಕಾಲಾವಕಾಶ ನೀಡಲಾಗಿದೆ. ಆದರೆ GeM portalನಲ್ಲಿ ಮಾತ್ರ 13ನೇ ತಾರೀಖು ಕಡೆಯ ದಿನವಾಗಿದ್ದು, ಅದೇ ದಿನವೇ ಹೇಗೆ ತೆರೆಯಲಾಗಿದೆ ಎಂದು ಕೇಳಿದರು.<br><br>ಕುಲಸಚಿವರು ಮಾತನಾಡಿ, ಇದರ ಬಗ್ಗೆ ಕಾರ್ಯಪಾಲಕ ಅಭಿಯಂತರರಿಂದ ಮಾಹಿತಿ ಪಡೆದು ನೀಡುವುದಾಗಿ ತಿಳಿಸಿದರು.<br><br>ಶ್ರೀ ಮಹದೇಶುರವರು ಮಾತನಾಡಿ, GeM portalಗೆ ಸಂಬಂಧಿಸಿದಂತೆ ತಮಗೆ ದೊರೆತಿರುವ ಮಾಹಿತಿಯಲ್ಲಿ 2-3 ಜನ ಟೆಂಡರ್ ಸಲ್ಲಿಸಿದ್ದು, ಅದರಲ್ಲಿ ಕನಿಷ್ಠತಮ ದರ ನಮೂದಿಸಿರುವ ರೂ. 1.3 ಕೋಟಿಗಳನ್ನು ನಮೂದು ಮಾಡಿರುವ ಬಿಡ್‌ದಾರರು ತಾಂತ್ರಿಕವಾಗಿ ಸಫಲರಾಗಿದ್ದು, ಆದರೆ ಅವಶ್ಯವಿರುವ ಮಾದರಿಗಳನ್ನು ಹಾಜರುಪಡಿಸಿ ಪ್ರಾತ್ಯಕ್ಷಿಕೆ ನಡೆಸಿರುವುದಿಲ್ಲ. ಈ ಒಂದು ಕಾರಣದಿಂದ 80 ರಿಂದ 90 ಲಕ್ಷ ರೂಪಾಯಿಗಳು ವಿಶ್ವವಿದ್ಯಾನಿಲಯಕ್ಕೆ ನಷ್ಟ ಉಂಟಾಗುತ್ತಿದೆ. ಆದ್ದರಿಂದ ನಷ್ಟವನ್ನು ಉಳಿಸಲು ಟೆಂಡರ್‌ದಾರರನ್ನು ಪುನ: ಕರೆಸಿ ಸ್ಯಾಂಪಲ್ ಕೇಳಿದರೆ ತಪ್ಪಿಲ್ಲವೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಎಲ್ಲಾ ಟೆಂಡರ್‌ಗಳನ್ನು ರದ್ದುಗೊಳಿಸಿ, ಹೊಸದಾಗಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿ ಎಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ರವರು ಮಾತನಾಡಿ, ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೋರಿರುವ ಮಾಹಿತಿಯನ್ನು ಕುಲಸಚಿವರು ಐಸಿಡಿ ವಿಭಾಗದಿಂದ ಪಡೆದು ಸಲ್ಲಿಸಬೇಕೆಂದು ತಿಳಿಸಿದರು. |

| | |
|---|---|
| | ಕುಲಸಚಿವರು ಮಾತನಾಡಿ, ಯಾವುದೇ ಮಾಹಿತಿ ಕೋರಿದ್ದಲ್ಲಿ ತಾವು ನೇರವಾಗಿ ಉತ್ತರವನ್ನು ನೀಡುವುದಿಲ್ಲವೆಂದು, ಬದಲಾಗಿ ಐಸಿಡಿ ವಿಭಾಗದಿಂದ ಮಾಹಿತಿಯನ್ನು ಪಡೆದು ನೀಡಲಾಗುತ್ತದೆ ಎಂದು ತಿಳಿಸಿರುತ್ತೇನೆ. ಏಕೆಂದರೆ ನಾನು ತಾಂತ್ರಿಕ ಸಮಿತಿಯಲ್ಲಿರುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳಿರುತ್ತಾರೆ. ತಾಂತ್ರಿಕ ಸಮಿತಿಯಲ್ಲಿ ಅನರ್ಹಗೊಂಡ ಬಿಡ್‌ದಾರರು ಪುನ: ಮೇಲ್ಮನವಿ ಸಲ್ಲಿಸಬೇಕು. ಇ-ಪೆಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆಕ್ಷೇಪಿಸಲು ನನ್ನ ಯಾವುದೇ ಪಾತ್ರವಿರುವುದಿಲ್ಲವೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, GeM portalಗೆ ಸಂಬಂಧಿಸಿದಂತೆ ತಮಗೆ ಪತ್ರವನ್ನು ಸಲ್ಲಿಸಲಾಗಿದೆ. ಆದರೆ ಈ ಸಂಬಂಧ ಯಾವುದೇ ಮಾಹಿತಿ ಒದಗಿಸಿರುವುದಿಲ್ಲವೆಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ರವರು ಮಾತನಾಡಿ, ಅತಿಥಿ ಉಪನ್ಯಾಸಕರ ಸಂದರ್ಶನ ನಡೆಯುತ್ತಿದ್ದ ಅವಧಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಂಬಂಧ ಇಲ್ಲದೆ ಇರುವವರು ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರುಗಳ ನೇಮಕಾತಿಯ ಕುರಿತು ಅಪಪ್ರಚಾರ ಮಾಡುತ್ತಿರುವುದು ಕಂಡು ಬಂದಿದೆ. ಆದ್ದರಿಂದ ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಂಡು ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಿ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್, ಡಾ. ನಟರಾಜು ಹೆಚ್.ಎಸ್. ಹಾಗೂ ಶ್ರೀ ನಾಗರಾಜು ಸಿ. ರವರು ಸದರಿ ವಿಷಯದ ಬಗ್ಗೆ ದನಿಗೂಡಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಕಳೆದ ಶೈಕ್ಷಣಿಕ ಸಾಲಿನಲ್ಲಿ ಸಂದರ್ಶನದ ಮೂಲಕ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಬೇಕಾಗಿತ್ತು. ಕಾರಣಾಂತರಗಳಿಂದ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನೇ ಮುಂದುವರೆಸಲಾಗಿತ್ತು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಲ್ಲಿ ಕೆಲವರು ಎರಡು ಕಡೆ ಕರ್ತವ್ಯ ನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಆದಕಾರಣ ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸುವ ಉದ್ದೇಶದಿಂದ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು/ಅಧ್ಯಯನ ವಿಭಾಗಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಾಲೇಜಿನ ಕರ್ತವ್ಯದಲ್ಲಿ ತೊಡಗಿಸಿಕೊಂಡು ಕರ್ತವ್ಯ ನಿರ್ವಹಿಸುವ ಸಲುವಾಗಿ ಎರಡು ಕಡೆ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವುದನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ, ಅತಿಥಿ ಉಪನ್ಯಾಸಕರನ್ನು ಸಂದರ್ಶನ ಮುಖೇನ ನೇಮಕ ಮಾಡಲು ಕ್ರಮವಹಿಸಲಾಯಿತು ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ರವರು ಮಾತನಾಡಿ, ಬೇರೆ ಬೇರೆ ಕಡೆ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಅವಕಾಶ ನೀಡುವುದು ಬೇಡ. ಅರ್ಹ ಅತಿಥಿ ಉಪನ್ಯಾಸಕರುಗಳಿಗೆ 8 ಗಂಟೆಗಳ ಅಥವಾ 12 ಗಂಟೆಗಳ ಕಾರ್ಯಭಾರವನ್ನು ನೀಡಿ, ಅರ್ಹರಿಲ್ಲದವರನ್ನು ಬಿಡುಗಡೆಗೊಳಿಸುವಂತೆ ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಕೆಲವೊಂದು ಸಂದರ್ಭದಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಹಾಗೆಯೇ ಅತಿಥಿ ಉಪನ್ಯಾಸಕರನ್ನು ಸಂದರ್ಶನದ ಮೂಲಕ ನೇಮಕಾತಿ ಮಾಡಲು ಕ್ರಮವಹಿಸಲಾಯಿತು. ತಾವು ಅಧಿಕಾರ ವಹಿಸಿಕೊಂಡ ಅವಧಿಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೆಲವು ಬದಲಾವಣೆ ಮಾಡಲಾಯಿತು ಎಂದು ತಿಳಿಸಿದರು. ಕೆಲವೊಂದು ಸಂದರ್ಭದಲ್ಲಿ ಶೈಕ್ಷಣಿಕ ವಿಷಯಗಳಿಗೆ ಸಂದರ್ಭಾನುಸಾರ ಅನುಮೋದನೆ ನೀಡಲು ಅಧಿಕಾರವಿರುತ್ತದೆ ಹಾಗೂ ಈಗಾಗಲೇ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಹಲವಾರು ಮಾರ್ಪಾಡುಗಳನ್ನು ಮಾಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಡಾ. ಬಸವರಾಜು ಹಾಗೂ ಶ್ರೀ ಮಹದೇಶುರವರು ಮಾತನಾಡಿ, ಮಾನ್ಯ ಕುಲಪತಿಗಳು ತೆಗೆದುಕೊಳ್ಳುವ ನಿರ್ಧಾರಗಳು ಸಮಂಜಸವಾಗಿರುತ್ತದೆ. ಆದರೆ ತಾವು ಸಿಂಡಿಕೇಟ್ ಸದಸ್ಯರ ಗಮನಕ್ಕೆ ತರುವುದು ಸೂಕ್ತ ಎಂದು ತಿಳಿಸಿದರು. |

| | |
|---|---|
| | ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಎಲ್ಲಾ ಟೆಂಡರ್‌ಗಳನ್ನು ರದ್ದುಗೊಳಿಸಿ, ಹೊಸದಾಗಿ ಟೆಂಡರ್ ಆಹ್ವಾನಿಸಬೇಕೆಂದು ಹಾಗೂ ಟೆಂಡರ್ ಅಂಗೀಕಾರ ಪ್ರಾಧಿಕಾರ ಸಮಿತಿಗೆ ಸಿಂಡಿಕೇಟ್ ಸದಸ್ಯರನ್ನು ಸಹ ಸೇರ್ಪಡೆಗೊಳಿಸಿ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಹೊಸದಾಗಿ ಟೆಂಡರ್ ಆಹ್ವಾನಿಸುವುದರ ಬಗ್ಗೆ ಕ್ರಮ ಕೈಗೊಳ್ಳುವುದು ಅಸಾಧ್ಯ. ಕಾನೂನಿನ ಚೌಕಟ್ಟು ಮೀರಿ ತಾವು ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿದರು.<br><br>ಡಾ. ನಟರಾಜು ಹೆಚ್.ಎಸ್. ರವರು ಮಾತನಾಡಿ, ಮೆ: ಕಾಂತಿ ಏಜೆನ್ಸಿಯವರಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ತುಂಬಾ ತೊಂದರೆಯಾಗಿದೆ. ಅಜಾಗರೂಕತೆಯಿಂದ ಊಟದಲ್ಲಿ ಇಲಿ ಬಿದ್ದಿರುವ ಘಟನೆ ನಡೆದಿದೆ ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ಕಡಿಮೆ ವೇತನ ನೀಡಲಾಗುತ್ತಿದೆ ಆದರೆ ಹಾಜರಾತಿಯಲ್ಲಿ ಹೆಚ್ಚಿನ ವೇತನ ಎಂದು ನಮೂದಿಸಲಾಗಿದೆ. ತಾವು ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೋರಿರುವ ಮಾಹಿತಿ ಅಪೂರ್ಣವಾಗಿರುತ್ತದೆಂದು ತಿಳಿಸಿದರು.<br><br>ಶ್ರೀ ಮಹದೇಶು ರವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ೮೦ ರಿಂದ ೯೦ ಲಕ್ಷ ರೂಪಾಯಿಗಳು ಉಳಿತಾಯವಾಗುತ್ತದೆಯೆಂದಾದರೆ ಮೂರು ಟೆಂಡರ್‌ದಾರರಿಗೆ ಸ್ಯಾಂಪಲ್ಸ್ ನೀಡಲು ಕಾಲಾವಕಾಶ ನೀಡಬಹುದಾಗಿತ್ತು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಟೆಂಡರ್‌ದಾರರಿಗೆ ಸ್ಯಾಂಪಲ್ಸ್ ನೀಡಲು ಕಾಲಾವಕಾಶ ಹಾಗೂ ದಿನಾಂಕವನ್ನು ನಿಗದಿ ಮಾಡಲಾಗಿತ್ತು ಎಂದು ತಿಳಿಸಿದರು.<br><br>ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಟೆಂಡರ್‌ದಾರರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಸ್ಯಾಂಪಲ್ಸ್ ನೀಡುವಂತೆ ತಿಳಿಸಲಾಗಿತ್ತು. ಆದರೆ, ನಿಗಧಿತ ಅವಧಿಯೊಳಗೆ ಸ್ಯಾಂಪಲ್ (ಮಾದರಿ) ನೀಡದೆ ಇರುವುದರಿಂದ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ, ಸದರಿ ಟೆಂಡರ್‌ದಾರರನ್ನು ಅನರ್ಹಗೊಳಿಸಲಾಯಿತು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಚುನಾವಣಾ ನೀತಿ ಸಂಹಿತೆ ಇದ್ದ ಸಂದರ್ಭದಲ್ಲಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದು, ಹಣ ಬಿಡುಗಡೆ ಮಾಡುವುದು, ವರ್ಗಾವಣೆ ಮಾಡಿರುವುದು ಕಂಡುಬಂದಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ನೀತಿ ಸಂಹಿತೆ ಇದೆ ಎಂಬ ಕಾರಣಕ್ಕೆ ತುರ್ತು ಸಂದರ್ಭಗಳಲ್ಲಿ ಎಲ್ಲಾ ಕಾರ್ಯಗಳನ್ನು ಸ್ಥಗಿತಗೊಳಿಸಲು ಸಾಧ್ಯವಿಲ್ಲ. ವಿಶ್ವವಿದ್ಯಾನಿಲಯದ ಕೆಲವೊಂದು ಟೆಂಡರ್ ಪ್ರಕ್ರಿಯೆಯ ಕಾರ್ಯಗಳನ್ನು ಸ್ಥಗಿತಗೊಳಿಸುವುದಕ್ಕೆ ಸಾಧ್ಯವಿಲ್ಲ, ತೆಗೆದುಕೊಂಡಿರುವ ಕ್ರಮಗಳನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗುತ್ತದೆ. ಸಿಂಡಿಕೇಟ್ ಸದಸ್ಯರು ತಮ್ಮ ಅಭಿಪ್ರಾಯವನ್ನು ಮಂಡಿಸಬಹುದಾಗಿರುತ್ತದೆ. ಹೊಸದಾಗಿ ಕಾಮಗಾರಿ/ ನೇಮಕಾತಿ ಕೈಗೊಳ್ಳುವುದನ್ನು ಬಿಟ್ಟು, ಸಣ್ಣ ಪುಟ್ಟ ಹಣ ಪಾವತಿಯನ್ನು, ಈಗಾಗಲೇ ಅನುಮೋದನೆಯಾಗಿರುವ ಟೆಂಡರ್‌ದಾರರಿಗೆ ಪಾವತಿಸಲು, ವೇತನ ಇತ್ಯಾದಿಗಳನ್ನು ಪಾವತಿ ಮಾಡಬಹುದಾಗಿರುತ್ತದೆ.<br><br>ಡಾ. ಬಸವರಾಜು ಸಿ. ರವರು ಮಾತನಾಡಿ, ವಿಶ್ರಾಂತ ಕುಲಪತಿಗಳಾದ ಪ್ರೊ. ಕೆ.ಎಸ್.ರಂಗಪ್ಪ ಮತ್ತು ಪ್ರೊ. ಜೆ.ಹೇಮಂತಕುಮಾರ್ ಇವರುಗಳು ಅವರ ಅಧಿಕಾರ ಅವಧಿಯಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರೂ ಸಹ ಸಿಂಡಿಕೇಟ್ ಸಭೆಗಳನ್ನು ನಡೆಸಿರುತ್ತಾರೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ಕೆ.ಎಸ್.ರಂಗಪ್ಪರವರು ಕುಲಪತಿಗಳಾಗಿದ್ದ ಅವಧಿಯಲ್ಲಿ ಚುನಾವಣಾ ನೀತಿ ಸಂಹಿತಿ ಜಾರಿಯಲ್ಲಿದ್ದ ಸಂದರ್ಭದಲ್ಲಿ ಸಿಂಡಿಕೇಟ್ ಸಭೆ |

| | |
|---|---|
| | ನಡೆಸಿರುವುದರ ಬಗ್ಗೆ ತಮಗೆ ಮಾಹಿತಿ ಇರುವುದಿಲ್ಲ. ಆದರೆ ಪ್ರೊ. ಜೆ.ಹೇಮಂತಕುಮಾರ್ ರವರು ಕುಲಪತಿಗಳಾಗಿದ್ದ ಅವಧಿಯಲ್ಲಿ ತಾವು ಪಿಎಂಇಬಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅ ಅವಧಿಯಲ್ಲಿ ಯಾವುದೇ ಸಿಂಡಿಕೇಟ್ ಸಭೆಯನ್ನು ನಡೆಸಿರುವುದಿಲ್ಲ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಚುನಾವಣಾ ನೀತಿ ಸಂಹಿತೆ ಇದ್ದ ಸಂದರ್ಭದಲ್ಲಿ ಸರ್ಕಾರವು ಟೆಂಡರ್ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಟೆಂಡರ್ ಆಹ್ವಾನಿಸಿರುವುದು ಸರಿಯೇ ಎಂದು ಪ್ರಶ್ನಿಸಿದರು.<br><br>ಕುಲಸಚಿವರು ಮಾತನಾಡಿ, ಚುನಾವಣಾ ನೀತಿ ಸಂಹಿತೆ ಇದ್ದ ಸಂದರ್ಭದಲ್ಲಿ ಯಾವುದೇ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಂಡಿರುವುದಿಲ್ಲ. ಯಾವುದಾದರೂ ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದರೂ ಚುನಾವಣಾ ನೀತಿ ಸಂಹಿತಿ ಜಾರಿಯಾಗುವ ಪೂರ್ವದಲ್ಲಿ ಕೈಗೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೋರಿರುವ ಮಾಹಿತಿಯಲ್ಲಿ ವ್ಯಕ್ತಿಗಳ ಹೆಸರು ಹಾಗೂ ಸಂಸ್ಥೆಗಳ ಹೆಸರುಗಳನ್ನು ನಮೂದಿಸುವ ಬದಲು ಟೆಂಡರ್ ಸಂಖ್ಯೆಗಳನ್ನು ನಮೂದಿಸಿದರೆ ತಮಗೆ ತಿಳಿಯುವುದಿಲ್ಲವೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಟೆಂಡರ್ ಸಂಖ್ಯೆಗಳನ್ನು ಇ-ಪೋರ್ಟಲ್‌ನಲ್ಲಿ ನಮೂದಿಸಿದರೆ ಟೆಂಡರ್‌ದಾರರ ಪೂರ್ಣ ಮಾಹಿತಿ ದೊರಕುವುದು ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ರವರು ಮಾತನಾಡಿ, ಚುನಾವಣಾ ನೀತಿ ಸಂಹಿತೆ ಜಾರಿ ಇದ್ದ ಸಂದರ್ಭದಲ್ಲಿ ಕೆಲವೊಂದು ಕಾಮಗಾರಿಗಳಿಗೆ ಹಣ ಪಾವತಿ ಮಾಡಲಾಗಿದೆ, ಕೆಲವೊಂದು ವಿಭಾಗಗಳಿಗೆ ನಿರ್ದೇಶಕರು ಹಾಗೂ ವಿಭಾಗಾಧ್ಯಕ್ಷರುಗಳನ್ನು ವರ್ಗಾವಣೆ ಮಾಡಿರುತ್ತೀರಿ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಚುನಾವಣೆ ನೀತಿ ಸಂಹಿತಿ ಜಾರಿ ಇದ್ದ ಸಂದರ್ಭದಲ್ಲಿ ಯಾವುದೇ ಕಾಮಗಾರಿಗಳಾಗಲೀ ಅಥವಾ ವರ್ಗಾವಣೆಯಾಗಲೀ ಆಗುವುದಿಲ್ಲವೆಂದು ತಾವು ತಿಳಿದಿದ್ದು, ಮೇಲಿನ ಪ್ರಕ್ರಿಯೆಗಳನ್ನು ಮಾಡಬಹುದಾಗಿದೆ ಎಂಬುದಾಗಿದ್ದರೆ ಕುಲಪತಿಯವರು ದಾಖಲೆ ಇದ್ದರೆ ಸಲ್ಲಿಸಬೇಕೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಅಧ್ಯಕ್ಷರ ನೇಮಕಾತಿ ಎರಡು ವರ್ಷದ ಅವಧಿಗೆ ಅಥವಾ ವಯೋನಿವೃತ್ತಿ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ನೀಡಲಾಗಿರುತ್ತದೆ. ಚುನಾವಣಾ ನೀತಿ ಸಂಹಿತೆ ಜಾರಿ ಇದ್ದ ಸಂದರ್ಭದಲ್ಲಿ ಶೈಕ್ಷಣಿಕ ವಿಷಯವಾಗಿರುವುದರಿಂದ ಅಧ್ಯಕ್ಷರ ನೇಮಕಾತಿ ಮಾಡಲಾಗಿದೆ, ಬಿಲ್‌ಗಳ ಪಾವತಿಗೆ ಸಂಬಂಧಿಸಿದಂತೆ ಈಗಾಗಲೇ ಮುಗಿದು ಹೋಗಿರುವ ಕಾಮಗಾರಿಗಳಿಗೆ ಹಣ ಪಾವತಿ ಮಾಡಲಾಗಿದೆ. ಹೊಸದಾಗಿ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿರುವುದಿಲ್ಲ. ಇ-ಟೆಂಡರ್ ಪೋರ್ಟಲ್ ಅನ್ನು ಸರ್ಕಾರದ ವತಿಯಿಂದ ನಿರ್ವಹಿಸಲ್ಪಡುತ್ತದೆ. ಇದರಲ್ಲಿ ಯಾವುದೇ ರೀತಿಯ ಬದಲಾವಣೆ/ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದರು.<br><br>ಶ್ರೀ ಮಹದೇಶು ರವರು ಮಾತನಾಡಿ, ಟೆಂಡರ್ ಪಟ್ಟಿಯನ್ನು ಈಗಾಗಲೇ ನೀಡಿದ್ದು, ವಿಶೇಷವಾಗಿ GeM portalಗೆ ಮಾತ್ರ ಟೆಂಡರ್ ಸಲ್ಲಿಕೆಗೆ ನೀಡಿದ ದಿನಾಂಕ ಹಾಗೂ ಟೆಂಡರ್‌ನಲ್ಲಿ ಬಿಡ್‌ದಾರರು ಭಾಗವಹಿಸಲು ನೀಡಿರುವ ದಿನಾಂಕ ಒಂದೇ ದಿನಾಂಕವಾಗಿದ್ದು ಇದು ಹೇಗೆ ಸಾಧ್ಯ ಎಂದು ಕೇಳಿದರು.<br><br>ಕುಲಸಚಿವರು ಮಾತನಾಡಿ, ಟೆಂಡರ್ ಸಲ್ಲಿಕೆ ಮುಗಿದ ದಿನಾಂಕದ ನಂತರ ಟೆಂಡರ್ ತೆರೆಯಲಾಯಿತು ಎಂದು ತಿಳಿಸಿದರು. |

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಟೆಂಡರ್ ಸಲ್ಲಿಸಲು ಇನ್ನು ಹದಿನೈದು ದಿನಗಳ ಕಾಲಾವಕಾಶ ನೀಡಬಹುದು ಅಲ್ಲವೇ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕದ ನಂತರ ಯಾರಿಗೂ ಕಾಲಾವಕಾಶ ನೀಡುವುದಿಲ್ಲ ಎಂದು ತಿಳಿಸಿದರು. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನ್ನು ದಿನಾಂಕ 01-01-2024ರಂದು ಹಣಕಾಸು ಇಲಾಖೆಯ ಮೂಲಕ ಪರಿಷ್ಕರಣೆ ಮಾಡಿ, ಹೊಸ version ಅನ್ನು ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು, ಇವರು ಬಿಡುಗಡೆ ಮಾಡಿರುತ್ತಾರೆ. ಪೋರ್ಟಲ್‌ನಲ್ಲಿ ಯಾವುದೇ ರೀತಿಯ manipulation ಮಾಡಲು ಸಾಧ್ಯವಿಲ್ಲ. ಪೋರ್ಟಲ್ ಪ್ರವೇಶಿಸಲು ನಾವು ಡಿಜಿಟಲ್ ಸಿಗ್ನೇಚರ್ ಕಾರ್ಡ್‌ನ್ನು ಹೊಂದಿದ್ದು, ಅದು maping ಆಗಿರುತ್ತದೆ. ಅದೇ ರೀತಿ ಕಾರ್ಯಪಾಲಕ ಅಭಿಯಂತರರ ಬಳಿಯಿರುವ ಡಿಜಿಟಲ್ ಸಿಗ್ನೇಚರ್ ಕಾರ್ಡ್ ಸಹ maping ಆಗಿರುತ್ತದೆ. e-portal ಹಾಗೂ GeM Portal ನಲ್ಲಿ ನಡೆಯುವ ಚಟುವಟಿಕೆಗಳನ್ನು ಯಾರು ಸಹ ತಿರುಚಲು ಸಾಧ್ಯವಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಯಾವುದೇ ಸಂಸ್ಥೆ/ಸರ್ಕಾರದ ಇಲಾಖೆ/ ಕಛೇರಿ ವತಿಯಿಂದ ಟೆಂಡರ್ ಆಹ್ವಾನಿಸಿದ್ದಲ್ಲಿ, ಸದರಿ ಟೆಂಡರ್ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಸರ್ಕಾರದ ನಿಯಂತ್ರಣದಡಿ ಬರುವ e-procurement portal ಮುಖಾಂತರ ನಿರ್ವಹಿಸುವುದರಿಂದ ವಿಶ್ವವಿದ್ಯಾನಿಲಯವು ಈ ಸಂಬಂಧ ಯಾವುದೇ ನಿಯಮಬಾಹಿರ ಕ್ರಮವಹಿಸುವುದು ಸಾಧ್ಯವಿಲ್ಲವೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ತಾಂತ್ರಿಕ ಸಮಿತಿಯಲ್ಲಿ ನಾಲ್ಕು ಅಧಿಕಾರಿಗಳಿರುತ್ತಾರೆ. ಸದರಿ ತಾಂತ್ರಿಕ ಸಮಿತಿಯ ತೀರ್ಮಾನವಾದ ನಂತರ ಆರ್ಥಿಕ ಬಿಡ್ ತೆರೆಯಲಾಗುತ್ತದೆ. ಸದರಿ ಬಿಡ್‌ನಲ್ಲಿ ಭಾಗವಹಿಸಿರುವವರಲ್ಲಿ ತಾಂತ್ರಿಕವಾಗಿ ಯಶಸ್ವಿ ಬಿಡ್‌ದಾರರಾದ ಎಲ್1, ಎಲ್2 ಮತ್ತು ಎಲ್3 ಇತ್ಯಾದಿ ಇವರಲ್ಲಿ ಕನಿಷ್ಟ ದರ ನಮೂದಿಸಿರುವ ಬಿಡ್‌ದಾರರಿಗೆ ನಿಯಮಾನುಸಾರ ಟೆಂಡರ್ ಅಂಗೀಕರಿಸಿ ಕಾರ್ಯಾದೇಶ ನೀಡಲಾಗುತ್ತದೆ ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ರವರು ಮಾತನಾಡಿ ನನಗೆ ಬಂದಿರುವ ಮಾಹಿತಿ ಪ್ರಕಾರ ವಿಶ್ವವಿದ್ಯಾನಿಲಯದ ಕಾರ್ಯಸೌಧದಲ್ಲಿಯೇ ಟೆಂಡರ್ ಸಂಬಂಧಿಸಿದಂತಹ ಮಾಹಿತಿಗಳನ್ನು ಸೋರಿಕೆ ಮಾಡಿ ಟೆಂಡರ್‌ದಾರರಿಗೆ ಅನುಕೂಲ ಮಾಡುವಂತೆ ಮಾಹಿತಿಯನ್ನು upload ಮಾಡುವ ಕಾರ್ಯವು ನಡೆಯುತ್ತಿದೆ ಎಂದು ತಿಳಿಸಿದ್ದರು.

ಕುಲಸಚಿವರು ಮಾತನಾಡಿ, ಟೆಂಡರ್ ಸಂಬಂಧಿಸಿದ ಮಾಹಿತಿಯು ಎಲ್ಲವೂ ಗೌಪ್ಯತೆಯಿಂದ ಕೂಡಿದ್ದು, ಸರ್ಕಾರದ ಇ-ಟೆಂಡರ್ ಪೋರ್ಟಲ್ ಮೂಲಕವೇ upload ಮಾಡಬೇಕಾಗಿರುತ್ತದೆ. ಯಾವುದೇ ಬಿಡ್‌ದಾರರು ಟೆಂಡರ್‌ಗೆ ಸಂಬಂಧಿಸಿದಂತೆ ಮಾಹಿತಿಗಳನ್ನು upload ಮಾಡಲು ಟೆಂಡರ್ ಸಂಬಂಧಿಸಿತ ವೆಬ್‌ಸೈಟ್ ಅನ್ನು ತೆರೆದಾಗ ಬಳಸಲಾದ ಕಂಪ್ಯೂಟರ್‌ನ IP ವಿಳಾಸವು ವೆಬ್‌ಸೈಟ್‌ನಲ್ಲಿ ದಾಖಲಾಗುವುದರಿಂದ, ಈ ಸಂಬಂಧ ಯಾವುದೇ ನಿಯಮಬಾಹಿರ ಕ್ರಮವು ನಮ್ಮ ಕಛೇರಿ ಹಂತದಲ್ಲಿ ಜರುಗಿರುವುದಿಲ್ಲ. ಇದು ಸತ್ಯಕ್ಕೆ ದೂರವಾದ ವಿಷಯವೆಂದು ಸಭೆಯ ಗಮನಕ್ಕೆ ತಂದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಬಿಸಿಎ ವಿದ್ಯಾರ್ಥಿಗಳು ಪ್ರವೇಶಾತಿ ಸೀಟು ದೊರಕಿರುವುದಿಲ್ಲ ಎಂಬ ಕಾರಣ ಹೇಳಿ ನಮ್ಮ ಬಳಿ ಬಂದಿದ್ದು, ಇಂತಹ ಸಂದರ್ಭದಲ್ಲಿ ನಾವು ಐದು ಸಿಂಡಿಕೇಟ್ ಸದಸ್ಯರು ಯುವರಾಜ ಕಾಲೇಜಿಗೆ ಹೋಗಿರುತ್ತೇವೆ. ಪ್ರಾಂಶುಪಾಲರ ಕಛೇರಿಯಲ್ಲಿ ಟೇಬಲ್ ಕೆಳಗೆ ನಮಗೆ ಒಂದು ಚೀಟಿ ಸಿಕ್ಕಿರುತ್ತದೆ. ಅದರಲ್ಲಿ

| | |
|---|---|
| | ಟೆಂಡರ್ ಹೇಗೆ ಸಲ್ಲಿಸಬೇಕು, ಯಾವ ಮಾನದಂಡ ಇರಬೇಕು ಎಂಬ ಮಾಹಿತಿಯನ್ನು ಯುವರಾಜ ಕಾಲೇಜಿನ ಲೆಟರ್‌ಹೆಡ್‌ನಲ್ಲಿ ಬರೆಯಲಾಗಿತ್ತು ಎಂದು ಸಭೆಯ ಗಮನಕ್ಕೆ ತಂದರು.<br><br>ಕುಲಸಚಿವರು ಮಾತನಾಡಿ, ಟೆಂಡರ್ ಸಂಬಂಧಿತ ಯಾವುದಾದರೂ ಲೋಪಗಳು ಹಾಗೂ ನಿಯಮಬಾಹಿರ ಕ್ರಮಗಳು ಜರುಗಿರುವುದಕ್ಕೆ ಸೂಕ್ತ ದಾಖಲೆಗಳಿದ್ದಲ್ಲಿ, ಸದರಿ ದಾಖಲೆಗಳನ್ನು ನೀವು ಒದಗಿಸಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದೆಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ರವರು ಮಾತನಾಡಿ, ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಭೇಟಿ ನೀಡಿರುತ್ತೇವೆ. ಅಲ್ಲಿ ಸಾಕಷ್ಟು ಬಿಲ್ ಬಿಡುಗಡೆಯಾಗಿದೆ. ದಯಮಾಡಿ ಕಾಮಗಾರಿಗಳು ಎಲ್ಲೆಲ್ಲಿ ನಡೆದಿದೆ ಎಂಬ ಮಾಹಿತಿಯನ್ನು ನೀಡಬೇಕಾಗಿ ಕೋರಿದೆವು. ಆದರೆ ಕಾರ್ಯಪಾಲಕ ಅಭಿಯಂತರರು ನನಗೆ ಮಾಹಿತಿ ಇರುವುದಿಲ್ಲ ಎಂದು ಸಬೂಬು ನೀಡಿರುತ್ತಾರೆ. ಆದರೆ ಕೆಲವೊಂದು ಕಾಮಗಾರಿಗೆ ಸಂಬಂಧಿಸಿದ ಹುಂಡಿಗೆ ಪ್ರತಿಯಾಗಿ ಹಣಕಾಸು ವಿಭಾಗದಿಂದ ಹಣ ಸಂದಾಯವಾಗಿರುತ್ತದೆ. ಇದು ಹೇಗೆ ಸಾಧ್ಯವೆಂದು ಕೇಳಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಕಾರ್ಯಪಾಲಕ ಅಭಿಯಂತರರ ಕಛೇರಿಯಿಂದಲೇ ಎಲ್ಲಾ ಕಾಮಗಾರಿಗಳು ಪ್ರಾರಂಭವಾಗುವುದು. ಅವರಿಂದಲೇ ಇದರ ಮಾಹಿತಿ ಪಡೆಯಬೇಕು ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಕಾರ್ಯಾಪಾಲಕ ಅಭಿಯಂತರರ ಕಛೇರಿಯಿಂದಲೇ ಎಲ್ಲಾ ಕಾಮಗಾರಿಗಳು ಜರುಗಿರುವುದರಿಂದ ಬಿಲ್ ಪಾವತಿಯಾಗಿರುವ ಕಾಮಗಾರಿಯ ಸ್ಥಳವನ್ನು ತೋರಿಸಲು ಕಾರ್ಯಪಾಲಕ ಅಭಿಯಂತರರು ಅಸಹಕಾರ ತೋರುತ್ತಾರೆ. ಆದ್ದರಿಂದ ಸಿಂಡಿಕೇಟ್‌ನ ಉಪಸಮಿತಿಯನ್ನು ರಚಿಸಿ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಲ್ಲವನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿ ಕೋರಿದರು.<br><br>ಡಾ. ಬಸವರಾಜು ಸಿ. ರವರು ಮಾತನಾಡಿ, ಸಿಂಡಿಕೇಟ್ ಸದಸ್ಯರಾದ ಶ್ರೀ ಮಹದೇಶು, ಶ್ರೀ ನಾಗರಾಜು ಸಿ ಮತ್ತು ಡಾ. ನಟರಾಜ್ ಹೆಚ್ ಎಸ್ ಅವರುಗಳೊಂದಿಗೆ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಭೇಟಿ ನೀಡಿ, ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗಿರುವ ಕಾಮಗಾರಿಗಳ ಕುರಿತು ಮಾಹಿತಿ ಕೋರಲಾಗಿತ್ತು. ಆದರೆ ವಾಸ್ತವವಾಗಿ ವಿಶ್ವವಿದ್ಯಾನಿಲಯದಲ್ಲಿ ರೂ.6.00 ಕೋಟಿ ಸಣ್ಣ ಪ್ರಮಾಣದ ಮತ್ತು ರೂ.9.00 ಕೋಟಿ ದೊಡ್ಡ ಪ್ರಮಾಣದ ಕಾಮಗಾರಿಗಳನ್ನು ನಿರ್ವಹಿಸಿದ್ದು, ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವ ಯಾವ ಸ್ಥಳದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ ಸದರಿ ಸ್ಥಳಗಳನ್ನು ತೋರ್ಪಡಿಸುವಂತೆ ಹಾಗೂ ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಾವತಿಯಾಗಿರುವ ಹಣದ ಕುರಿತು ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರಲ್ಲಿ ಕೋರಲಾಯಿತು. ಅದರೆ ಕಾರ್ಯಪಾಲಕ ಅಭಿಯಂತರರು ಸದರಿ ಕಾಮಗಾರಿಗಳನ್ನು ನಿರ್ವಹಿಸಿರುವುದರ ಕುರಿತು ಮಾಹಿತಿಗಳನ್ನು ನೀಡಲು/ಒದಗಿಸಲು ಅಸಹಕಾರ ತೋರಿದರು ಎಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಕಾರ್ಯಪಾಲಕ ಅಭಿಯಂತರರನ್ನು ಕರೆದು ಈ ವಿಷಯದ ಬಗ್ಗೆ ಚರ್ಚಿಸುವುದಾಗಿ ತಿಳಿಸಿದರು. |
| ತೀರ್ಮಾನ | **ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಕಾರ್ಯಪಾಲಕ ಅಭಿಯಂತರರನ್ನು ಆಹ್ವಾನಿಸಿ ವಿಶ್ವವಿದ್ಯಾನಿಲಯದಲ್ಲಿ 2023-24ನೇ ಸಾಲಿನ ಆರ್ಥಿಕ ವರ್ಷದವರೆಗೆ ಬಾಕಿಯಿರುವ ಹುಂಡಿಗಳ ಕಾಮಗಾರಿಗಳ ಸಂಪೂರ್ಣ ದಾಖಲೆ/ ಮಾಹಿತಿಗಳನ್ನು ಒದಗಿಸುವಂತೆ ಸೂಚಿಸಲು ಸಭೆಯು ತೀರ್ಮಾನಿಸಿತು.** |

| | |
|---|---|
| ಸಾಮಾನ್ಯ ಸಭೆ<br>2024/5.4 | ಡಾ. ಟಿ.ಆರ್. ಚಂದ್ರಶೇಖರ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರಿಗೆ ಬಾಕಿ ನೀಡಬೇಕಾಗಿರುವ ಬಿಲ್ ಮೊತ್ತಗಳ ಸಮಗ್ರ ಮಾಹಿತಿಯನ್ನು ಕೋರಿರುವ ಬಗ್ಗೆ. |
| | ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಕಾರ್ಯಪಾಲಕ ಅಭಿಯಂತರರು ವಿಶ್ವವಿದ್ಯಾನಿಲಯದಲ್ಲಿ ಕೈಗೊಂಡ ವಿವಿಧ ಕಾಮಗಾರಿಗಳನ್ನು ನಿರ್ವಹಿಸಿದ ಸಂಬಂಧ ಗುತ್ತಿಗೆದಾರರಿಗೆ ಪಾವತಿಸಬೇಕಾಗಿರುವ ಮೊತ್ತ ರೂ.18,91,64,074/-ಗಳು ಬಾಕಿಯಿರುವುದಾಗಿ ಸಭೆಯ ಗಮನಕ್ಕೆ ತಂದರು.<br><br>ಕುಲಸಚಿವರು ಮಾತನಾಡಿ, ಕಾರ್ಯಪಾಲಕ ಅಭಿಯಂತರರು ಕೊಟ್ಟಿರುವ ಬಿಲ್‌ಗಳ ವಿವರಗಳನ್ನು ಮಂಡಿಸಿರುವುದಾಗಿ ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, 2021-22 ಮತ್ತು 2022-23ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ಗುತ್ತಿಗೆದಾರರಿಗೆ ಎಷ್ಟು ಹಣ ಬಿಡುಗಡೆ ಮಾಡಿರುತ್ತೀರಿ ಎಂದು ಕೇಳಿದರು.<br><br>ಹಣಕಾಸು ಅಧಿಕಾರಿಯವರು ಮಾತನಾಡಿ, ಯಾವ ಕಾಮಗಾರಿಗೆ ಎಂದು ಸ್ಪಷ್ಟಪಡಿಸಿದ್ದಲ್ಲಿ, ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗದಿಂದ ಮಾಹಿತಿ ಪಡೆದು ಒದಗಿಸಲಾಗುವುದೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಕಳೆದ ವರ್ಷ ನಾನು ಮತ್ತು ಶ್ರೀ ಗೋಕುಲ್ ಗೋವರ್ಧನ್ ರವರು ಇದ್ದ ಸಂದರ್ಭದಲ್ಲಿ ಹಳೆ ಬಾಕಿಗಳನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು. ಎರಡು ವರ್ಷಗಳಂದ ಬಾಕಿ ಇರುವುದಕ್ಕೆ ಕಾರಣವೇನೆಂದು ಪರಾಮರ್ಶಿಸಬೇಕಾದುದ್ದರಿಂದ ಹಣ ಬಿಡುಗಡೆಗೆ ತಡೆಹಿಡಿಯಲಾಯಿತು. ಆ ಹಣವನ್ನು ಈಗ ಬಿಡುಗಡೆ ಮಾಡಿರುವಿರಾ, ಯಾವ ಬಿಲ್ ಬಾಕಿ ಇದೆ ಎಂದು ಕೇಳಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಹಳೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇನ್ನು ಕೆಲವು ಬಿಲ್‌ಗಳು ಬಾಕಿಯಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಹಣಕಾಸು ಅಧಿಕಾರಿಯವರನ್ನು ದೂರವಾಣಿ ಮೂಲಕ ಸಂಪರ್ಕಿಸಿದಾಗ ಅವರು ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ತಿಳಿಸಿದರು. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರೂ ಸಹ ಹೇಗೆ ಹಣವನ್ನು ಬಿಡುಗಡೆ ಮಾಡಿದ್ದೀರಿ. ಸಿಂಡಿಕೇಟ್‌ನಲ್ಲಿ ಸದರಿ ಕಾಮಗಾರಿಗಳ ಬಿಲ್ಲುಗಳನ್ನು ತಡೆಯಿಡಿಯುವಂತೆ ತೀರ್ಮಾನಿಸಿದ್ದರೂ ಸಹ ಕೆಲವು ಕಾಮಗಾರಿಗಳ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಿರುವುದಾಗಿ ಪ್ರಶ್ನಿಸಿದಾಗ, ಹಣಕಾಸು ಅಧಿಕಾರಿಗಳು ಮಾತನಾಡಿ, ನಿಕಟಪೂರ್ವ ಕುಲಪತಿಗಳಿದ್ದ ಸಂದರ್ಭದಲ್ಲಿಯೇ ಸಿಂಡಿಕೇಟ್‌ನಲ್ಲಿ ಈ ಕಾಮಗಾರಿಗಳಿಗೆ ಅನುಮೋದನೆ ದೊರಕಿರುವ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಗಳ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಲಾಗಿದೆಯೆಂದು ತಿಳಿಸಿರುತ್ತಾರೆ. ಸಿಂಡಿಕೇಟ್ ಅನುಮೋದನೆ ಮೀರಿ ಮತ್ತೆ ಹಣ ಬಿಡುಗಡೆ ಮಾಡಿರುವುದು ಕಾನೂನಿಗೆ ವಿರುದ್ಧವಾಗಿದೆ ಎಂದು ತಿಳಿಸಿದರು. ಬಾಕಿ ಮೊತ್ತಗಳ ಮಾಹಿತಿಯಲ್ಲಿ ಸಂಸ್ಥೆಗಳ ಹೆಸರನ್ನು ನಮೂದಿಸಿರುವುದಿಲ್ಲವೆಂದರು.<br><br>ಹಣಕಾಸು ಅಧಿಕಾರಿಯವರು ಮಾತನಾಡಿ, ಪ್ರಸ್ತುತ ಯಾವ ಕಾಮಗಾರಿಗೂ ಹಣ ಬಿಡುಗಡೆ ಮಾಡಿಲ್ಲವೆಂದು ತಿಳಿಸಿದರು. ಕಾಮಗಾರಿ ಬಹಳ ಹಿಂದೆಯೇ ಪೂರ್ಣಗೊಂಡಿದ್ದು, ನಿಯಮಾನುಸಾರ ಹಣ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, 2023 ರ ಅವಧಿಯಲ್ಲಿ ಸಿಂಡಿಕೇಟ್ ಸಭೆಯು ತಡೆಹಿಡಿದಿರುವ ಟೆಂಡರ್ ಬಾಕಿಯನ್ನು ಬಿಡುಗಡೆ ಮಾಡಿದ್ದೀರೋ, ಇಲ್ಲವೋ ಸಿಂಡಿಕೇಟ್‌ನಲ್ಲಿ ತಡೆಹಿಡಿದಿರುವ ಬಾಕಿಯನ್ನು ಪಾವತಿ ಮಾಡಿದ್ದಲ್ಲಿ, ಕಾನೂನಿಗೆ |

| | |
|---|---|
| | ವಿರುದ್ಧವಾಗುತ್ತದೆ. ಈ ಸಂಬಂಧ ಹಳೆ ಸಿಂಡಿಕೇಟ್‌ನ ನಡಾವಳಿಯನ್ನು ಸಲ್ಲಿಸುವುದು ಹಾಗೂ ಕಾಮಗಾರಿಗಳ ಕೋಡ್ ನಂಬರ್ ನಮೂದಿಸುವ ಬದಲು ಗುತ್ತಿಗೆದಾರರ ಸಂಸ್ಥೆಗಳ ಹೆಸರನ್ನು ಬಾಕಿ ಇರುವ ಮೊತ್ತಗಳ ವಿವರಗಳಲ್ಲಿ ನಮೂದಿಸಿ ಎಂದು ತಿಳಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವುದಾಗಿ ತಿಳಿಸಿದರು. |
| **ತೀರ್ಮಾನ** | **ಮುಂದೂಡಲಾಯಿತು.** |
| **ಸಾಮಾನ್ಯ ಸಭೆ 2024/5.5** | ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು-570 025 ಇವರು ಹೆಚ್ಚುವರಿಯಾಗಿ Botany ಮತ್ತು Zoology ವಿಷಯಗಳಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | **ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಹಾಗೂ "The University of Mysore-Recognition of Certain Institutions for specified studies/ specialized and Research Statutes 2008" ನಿಬಂಧನೆಗಳ ಅಡಿಯಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು-570 025 ಸಂಸ್ಥೆಗೆ ಹೆಚ್ಚುವರಿಯಾಗಿ Botany ಮತ್ತು Zoology ವಿಷಯಗಳಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2024/5.6** | ಶಾರದಾ ವಿಲಾಸ ಕಾಲೇಜು, ಕೃಷ್ಣಮೂರ್ತಿಪುರಂ, ಮೈಸೂರು ಇವರು ಹೊಸದಾಗಿ Chemistry ವಿಷಯದಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | **ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಹಾಗೂ "The University of Mysore-Recognition of Certain Institutions for specified studies/ specialized and Research Statutes 2008" ನಿಬಂಧನೆಗಳ ಅಡಿಯಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಶಾರದಾ ವಿಲಾಸ ಕಾಲೇಜು, ಕೃಷ್ಣಮೂರ್ತಿಪುರಂ, ಮೈಸೂರು ಸಂಸ್ಥೆಗೆ ಹೊಸದಾಗಿ Chemistry ವಿಷಯದಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2024/5.7** | 2023-24ನೇ ಸಾಲಿನ ವಿವಿಧ ಆಯವ್ಯಯ ಅಂದಾಜುಗಳಲ್ಲಿ ಪರಿಷ್ಕರಿಸಿರುವುದನ್ನು "ಸಿಂಡಿಕೇಟ್" ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| | ಶ್ರೀ ಮಹದೇಶು ಅವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ Provisional Balance Sheet ನೀಡಬೇಕೆಂದು ಕೋರಲಾಗಿತ್ತು. ಸುಮಾರು ವರ್ಷಗಳಿಂದ ಚಾರ್ಟರ್ಡ್ ಅಕೌಂಟೆಂಟ್ ಅವರಿಂದ ಆಡಿಟ್ ಮಾಡಿಸುತ್ತಿರಲಿಲ್ಲ. ಹಿಂದಿನ ವರ್ಷದಿಂದ ಚಾರ್ಟರ್ಡ್ ಅಕೌಂಟೆಂಟ್ ಅವರಿಂದ ಆಡಿಟ್ ಮಾಡಿಸಲಾಗುತ್ತಿದೆ ಎಂದು ಹಣಕಾಸು ಅಧಿಕಾರಿಗಳು ತಿಳಿಸಿರುತ್ತೀರಿ. ಇನ್ನು ಮುಂದೆ Provisional Balance Sheet ಸಿದ್ಧಪಡಿಸುವುದರಿಂದ ನಿಖರವಾದ ಮಾಹಿತಿ ದೊರೆಯುತ್ತದೆ. ನಮ್ಮಲ್ಲಿ ಲಭ್ಯವಿರುವ ಡೇಟಾವನ್ನು ನೀಡಿದರೆ, Provisional Balance Sheet ಅನ್ನು ಚಾರ್ಟರ್ಡ್ ಅಕೌಂಟೆಂಟ್ ಅವರು 3-4 ದಿನದೊಳಗೆ ಸಿದ್ಧಪಡಿಸಿ ನೀಡುತ್ತಾರೆ. ಬಜೆಟ್ ಅವಧಿಯಲ್ಲಿ ಸಿದ್ಧಪಡಿಸಲಾಗದಿದ್ದರೂ ತದನಂತರವಾದರೂ ಪ್ರತಿ ವರ್ಷವೂ ಮೈಸೂರು ವಿಶ್ವವಿದ್ಯಾನಿಲಯವು ಮುಂದಿನ ಆರ್ಥಿಕ ವರ್ಷದಿಂದ |

ಕಡ್ಡಾಯವಾಗಿ Provisional Balance Sheet ಸಿದ್ಧಪಡಿಸುವುದರಿಂದ ವೆಚ್ಚಗಳ ನಿಖರ ಮಾಹಿತಿಗಳು ದೊರೆಯುತ್ತದೆ ಎಂದು ತಿಳಿಸಿದರು.

ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ, ಮುಂದಿನ ಆರ್ಥಿಕ ವರ್ಷದ ಅಂತ್ಯದಲ್ಲಿ ಬಜೆಟ್ ಅನ್ನು ಸಿದ್ಧಪಡಿಸಿದ ನಂತರ Provisional Balance Sheet ಅನ್ನು ಸಿದ್ಧಪಡಿಸಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಆಯವ್ಯಯವನ್ನು ಕಾನೂನಿನ ಅಡಿಯಲ್ಲಿ ಸಿದ್ಧಪಡಿಸಬೇಕೆಂಬ ಉದ್ದೇಶದಿಂದ ಸುದೀರ್ಘವಾಗಿ ಸಂಶೋಧನೆ ಮಾಡಿ ಕೆಲವು ಲೋಪದೋಷಗಳನ್ನು ಪಟ್ಟಿ ಮಾಡಲಾಗಿದ್ದು, ಇವುಗಳನ್ನು ಸರಿಪಡಿಸಿಕೊಳ್ಳಬೇಕೆಂದು ಸಲಹೆ ನೀಡುತ್ತಿದ್ದೇನೆ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, 2023-2024 ಆಯವ್ಯಯದಲ್ಲಿ ಕೆಲವು ಆದಾಯಗಳು ಬರಬಹುದು ಎಂಬ ದೃಷ್ಟಿಯಿಂದ ಅಂದಾಜು ಮಾಡಲಾಗಿತ್ತು. ಏಕೆಂದರೆ, ಮಾತೃ ವಿಶ್ವವಿದ್ಯಾನಿಲಯದಿಂದ ಪ್ರತ್ಯೇಕಿಸಲ್ಪಟ್ಟ ಮೂರು ಸ್ನಾತಕೋತ್ತರ ಕೇಂದ್ರಗಳು ವಿನೂತನ ವಿಶ್ವವಿದ್ಯಾನಿಲಯವಾಗಿರುವುದರಿಂದ, ಕಡಿಮೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿತ್ತು. ಆದರೆ, ಸದರಿ ಮೂರು ನೂತನ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ದ್ವಿತೀಯ ಮತ್ತು ತೃತೀಯ ವರ್ಷದ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಮಾಹಿತಿ ನಿಗದಿತ ಅವಧಿಯಲ್ಲಿ ದೊರಕದ ಹಿನ್ನೆಲೆಯಲ್ಲಿ ನಿಖರವಾದ ಆಯವ್ಯಯ ಸಿದ್ಧಪಡಿಸಲಾಗಲಿಲ್ಲ. ಪ್ರಸ್ತುತ ಪ್ರವೇಶಾತಿ ಹಾಗೂ ಪರೀಕ್ಷಾ ಶುಲ್ಕಗಳು ಹೆಚ್ಚಾಗಿರುವುದರಿಂದ, ನಮಗೆ ಬಂದಿರುವ ಆದಾಯ ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚಾಗಿದೆ. ಈ ವಿಚಾರವನ್ನು ಹಣಕಾಸು ಸಮಿತಿಯಲ್ಲಿ ಮಂಡಿಸಿ, ಈಗ ಸಿಂಡಿಕೇಟ್ ಸಭೆಯ ಗಮನಕ್ಕೆ ತರಲಾಗಿದೆ. ಹಾಗೆಯೇ, ಪಿಂಚಣಿ ಅನುದಾನ 50.00 ಕೋಟಿ ರೂ.ಗಳು ಸರ್ಕಾರದಿಂದ ಬಿಡುಗಡೆಯಾಗಿದೆ. ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವಾಗ ಪ್ರಸ್ತುತ ಬಿಡುಗಡೆಯಾಗಿರುವ 50 ಕೋಟಿ ರೂ.ಗಳೊಂದಿಗೆ ಹೆಚ್ಚುವರಿಯಾಗಿ 15.00 ಕೋಟಿ ರೂ.ಗಳನ್ನು ಸೇರ್ಪಡೆಗೊಳಿಸಲಾಗಿತ್ತು. ಆದರೆ, ಹೆಚ್ಚುವರಿಯಾಗಿ ಪ್ರಸ್ತಾವನೆ ಸಲ್ಲಿಸಿದ್ದ 15.00 ಕೋಟಿ ರೂ.ಗಳು ಬಿಡುಗಡೆಯಾಗಿರುವುದಿಲ್ಲ ಮತ್ತು ಆದಾಯಗಳ ಮೂಲವಾಗಿ ಒಂದೂವರೆ ಕೋಟಿ ರೂ.ಗಳು ಬಾಡಿಗೆಯಾಗಿ ಬರಬಹುದೆಂಬ ನಿರೀಕ್ಷೆಯನ್ನು ಮಾಡಲಾಗಿದೆ. ಆದರೆ, ಒಂದು ಕೋಟಿ ರೂ.ಗಳು ಮಾತ್ರ ಆದಾಯ ಬಂದಿದೆ. ಇದರಿಂದ ಆದಾಯದ ಅಂದಾಜು ಪಟ್ಟಿಯಲ್ಲಿ ಕೆಲವೊಂದು ವ್ಯತ್ಯಾಸವಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಆಯವ್ಯಯ ಪುಸ್ತಕದ ಅಂಕಿ-ಅಂಶಗಳ ಬಗ್ಗೆ ಯಾವುದೇ ಆಕ್ಷೇಪಣೆಯಿರುವುದಿಲ್ಲ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000, ಪರಿಚ್ಛೇದ 48(1)ರ ಪ್ರಕಾರ ಬಜೆಟ್, ಬಜೆಟ್ ಅನುಮೋದನೆ, ಬಜೆಟ್‌ಅನ್ನು ಕಾರ್ಯರೂಪಕ್ಕೆ ತರುವುದು ಮತ್ತು ವಾರ್ಷಿಕ ಲೆಕ್ಕಪತ್ರಗಳ ಬಗ್ಗೆ ಸಿಂಡಿಕೇಟ್‌ಗೆ ಗುರುತರವಾದ ಜವಾಬ್ದಾರಿ ಮತ್ತು ಕರ್ತವ್ಯವನ್ನು ನೀಡಿದೆ. ಈ ಪರಿಚ್ಛೇದದ ಪ್ರಕಾರ ಹಣಕಾಸು ಅಧಿಕಾರಿಗಳ ಸಹಾಯದಿಂದ ಸಿಂಡಿಕೇಟ್ ಬಜೆಟ್‌ನ್ನು ಸಿದ್ಧಪಡಿಸಿ, ಹಣಕಾಸು ಸಮಿತಿಗೆ ಮಂಡಿಸಿ ಅನುಮೋದನೆ ಪಡೆದ ನಂತರ ಸಿಂಡಿಕೇಟ್ ಹಾಗೂ ಶಿಕ್ಷಣ ಮಂಡಳಿ ಸಭೆಗಳಲ್ಲಿ ಅನುಮೋದನೆ ಪಡೆಯುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ಕಾರಣದಿಂದ ಕಾಯ್ದೆಯಲ್ಲಿರುವ ನಿಯಮಗಳನ್ನು ಕೈಬಿಡಬಾರದೆಂಬುದು ಉದ್ದೇಶವಾಗಿದೆ. ಈ ಸಿಂಡಿಕೇಟ್ ಸಭೆಯಲ್ಲಿ 2023-2024ನೇ ಸಾಲಿನ ಆಯವ್ಯಯದ ಪರಿಷ್ಕರಣೆ ಎಂದು ಮಂಡಿಸಲಾಗಿದೆ. ಆಯವ್ಯಯವನ್ನು ಪರಿಷ್ಕರಣೆ ಮಾಡುವುದಕ್ಕೆ ಅವಕಾಶವಿದೆ. 2023-2024ನೇ ಸಾಲಿನ ಆಯವ್ಯಯವನ್ನು ಪಾಸು ಮಾಡಿದ್ದ ಆರು ತಿಂಗಳ ನಂತರ ಅಕ್ಟೋಬರ್‌ನಲ್ಲಿ ಇಂತಹ ಪರಿಷ್ಕರಣೆಗಳನ್ನು ಸಿಂಡಿಕೇಟ್ ಅನುಮೋದನೆ ಪಡೆಯತಕ್ಕದ್ದು ಎಂದು ಕಾಯ್ದೆಯಲ್ಲಿದೆ. ತದನಂತರ, ದಿನಾಂಕ: 31-03-2024ರಲ್ಲಿ

| | |
|---|---|
| | ವಾರ್ಷಿಕ ಲೆಕ್ಕಪತ್ರಗಳು ಮುಕ್ತಾಯವಾಗಿರುತ್ತದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000, ಪರಿಚ್ಛೇದ 50(1)ರ ಪ್ರಕಾರ ವಾರ್ಷಿಕ ಲೆಕ್ಕಪತ್ರಗಳನ್ನು ಜೂನ್ 30, 2024ರೊಳಗೆ ವಿಶ್ವವಿದ್ಯಾನಿಲಯದಿಂದ ವಾರ್ಷಿಕ ವರದಿಯನ್ನು ಸಿದ್ಧಪಡಿಸಿ ಶಿಕ್ಷಣ ಮಂಡಳಿಯಿಂದ ಅನುಮೋದನೆ ಪಡೆದು, ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸೆಪ್ಟೆಂಬರ್ ಮಾಹೆಯೊಳಗೆ ಸರ್ಕಾರಕ್ಕೆ ಕಳುಹಿಸುವುದು. ಸರ್ಕಾರವು ಉಭಯ ಸದನಗಳ ಅಧಿವೇಶನದಲ್ಲಿ ಒಪ್ಪಿಗೆ ಪಡೆಯಬೇಕೆಂದು ಕಾಯ್ದೆಯಲ್ಲಿದೆ. ಈ ರೀತಿಯಾಗಿ ಕಾಯ್ದೆಯಲ್ಲಿದ್ದಾಗ ತಡವಾಗಿ ಪರಿಷ್ಕರಣೆ ಆಯವ್ಯಯ ನೀಡಿರುತ್ತೀರಿ. ಇದನ್ನು ಯಾವ ರೀತಿಯಲ್ಲಿ ಸಮರ್ಥಿಸಿಕೊಳ್ಳುವುದೆಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ವಾರ್ಷಿಕ ಲೆಕ್ಕಪತ್ರಗಳು ಬೇರೆ, ಸದರಿ ಸಭೆಯಲ್ಲಿ ಮಂಡಿಸಿರುವ ವಿಷಯವೇ ಬೇರೆಯಾಗಿದೆ. ಆದರೆ, ವಾರ್ಷಿಕ ಲೆಕ್ಕಪತ್ರ ಮತ್ತು ವಾರ್ಷಿಕ ವರದಿಯನ್ನು ಸಭೆಯಲ್ಲಿ ಪ್ರಸ್ತಾಪಿಸುತ್ತಿದ್ದೀರಿ. ವಾರ್ಷಿಕ ಲೆಕ್ಕಪತ್ರ, ವಾರ್ಷಿಕ ವರದಿ, ಲೆಕ್ಕ ಪರಿಶೋಧನಾ ವರದಿ, ಆಯವ್ಯಯಗಳು ಪ್ರತ್ಯೇಕವಾಗಿರುತ್ತದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಪರಿಷ್ಕರಣೆಗೆ ಸಂಬಂಧಪಟ್ಟಂತೆ ಮಾತನಾಡುತ್ತಿದ್ದೇನೆ. ಪ್ರಸ್ತಾವನೆಯಲ್ಲಿ ನಮೂದಿಸಿರುವುದನ್ನು ತಿಳಿಸುವುದು. ಹಾಗೆಯೆ ಪರಿಷ್ಕರಣೆ ಮಾಡಿರುವ ಆಯವ್ಯಯದ ಕಾಲಂ ನಂ.6ರಲ್ಲಿ ಪ್ರತಿ ಪುಟದಲ್ಲೂ ಈಗಾಗಲೇ ಉಲ್ಲೇಖಿಸಿದ್ದರೂ, ವಿಶೇಷವಾಗಿ ಏಕೆ ಸಭೆಗೆ ಮಂಡಿಸಲಾಗಿದೆ ಮತ್ತು ಆಯವ್ಯಯ ಸಿದ್ಧಪಡಿಸುವ ಪೂರ್ವದಲ್ಲಿ ಅಂದಾಜು ಎಂದು ನಮೂದಿಸುವುದು ಸರಿಯಾಗಿದೆ. ಆದರೆ, ಇಷ್ಟು ತಡವಾಗಿ ಮಂಡಿಸುತ್ತಿದ್ದರೂ ಪರಿಷ್ಕೃತ ಆಯವ್ಯಯವೆಂದು ಏಕೆ ಮಂಡಿಸಲಾಗಿದೆ.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಪರಿಷ್ಕೃತ ಅಂದಾಜು ಎಂದರೆ ಹೆಚ್ಚುವರಿಯಾಗಿ ಬಂದಿರುವ ಅನುದಾನವನ್ನು ವಾಸ್ತವವಾಗಿ ಅಂದಾಜು ಮಾಡಲಾಗಿದೆ. ಮಾರ್ಚ್ 16 ರಿಂದ ಆಯವ್ಯಯವನ್ನು ಸಿದ್ಧಪಡಿಸುವ ಕ್ರಮವನ್ನು ಪೂರ್ಣಗೊಳಿಸಿ, ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಬೇಕಾಗಿತ್ತು. ಆದರೆ, ಚುನಾವಣಾ ನೀತಿ ಸಂಹಿತೆ ಇದ್ದುದರಿಂದ, ನಿಗದಿತ ಅವಧಿಯಲ್ಲಿ ಮಂಡಿಸಲಾಗಲಿಲ್ಲ. ಚುನಾವಣಾ ನೀತಿ ಸಂಹಿತೆ ಮುಕ್ತಾಯವಾಗಿ ಜರುಗಿದ ಮೊದಲನೇ ಸಿಂಡಿಕೇಟ್ ಸಭೆಯಲ್ಲಿಯೇ 2023-24ನೇ ಸಾಲಿನ ಆಯವ್ಯಯವನ್ನು ಮಂಡಿಸಲಾಗಿತ್ತು. ಈ ಆಯವ್ಯಯ ಅನುಮೋದನೆಗೆ ಸಿಂಡಿಕೇಟ್ ಸಭೆಗೆ 4ನೇ ಬಾರಿ ಮಂಡಿಸಲಾಗಿದೆ. ಆಯವ್ಯಯದ ಪುಸ್ತಕವನ್ನು ಸಿದ್ಧಪಡಿಸುವಾಗ ಅಂದಾಜು ಎಂದು ನಮೂದಿಸಲಾಗಿತ್ತು. ಪ್ರಸ್ತುತ actual ಎಂದು ನಮೂದಿಸಲಾಗಿದೆ. ಅಂದಾಜಿಗೂ actual ಗೂ ಹೆಚ್ಚಿನ ವ್ಯತ್ಯಾಸವಿರುವುದಿಲ್ಲವೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪರಿಷ್ಕೃತ ಅಂದಾಜು ಆಯವ್ಯಯವನ್ನು ಮರುಹಂಚಿಕೆ (reappropriation) ಮಾಡಲಾಗಿದೆ. ಆದುದರಿಂದ, Revised Budget Estimate ಎಂಬುದರ ಬದಲಾಗಿ Proposed and Realized Budget Estimate ಎಂದು ಬದಲಾವಣೆ ಮಾಡಲಾಗುವುದೆಂದು ತಿಳಿಸಿದರು. |
| ತೀರ್ಮಾನ | **2023-24ನೇ ಸಾಲಿನ ವಿವಿಯ ಆಯವ್ಯಯದ ವಿವಿಧ ಶೀರ್ಷಿಕೆಗಳಲ್ಲಿ ಅಂದಾಜಿಸಿದ್ದ ಮೊತ್ತಕ್ಕಿಂತ ಹೆಚ್ಚು ವೆಚ್ಚವಾಗಿರುವುದರಿಂದ ಇನ್ನಿತರೆ ಶೀರ್ಷಿಕೆಯಲ್ಲಿ ಅಂದಾಜಿಸಿದ ಮೊತ್ತದಲ್ಲಿ ಬಳಕೆಯಾಗದ ಅನುದಾನವನ್ನು ವರ್ಗಾಯಿಸಿ ವಿನಿಯೋಗಿಸಿರುವ ವಿವರವನ್ನು ಪುನರ್ ವಿನಿಯೋಗ ಅನುದಾನವೆಂದು ಬದಲಾವಣೆ ಮಾಡಿ ಸಿಂಡಿಕೇಟ್ ಸಭೆಗೆ ಮರು ಮಂಡಿಸಲು ತೀರ್ಮಾನಿಸಿತು.** |
| **ಸಾಮಾನ್ಯ ಸಭೆ 2024/5.8** | 2024-2025ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿ (ಅನುಬಂಧ-1)ಯನ್ನು ಅನುಮೋದನೆಗಾಗಿ ಮಂಡಿಸಿದೆ. |
| | ಹಣಕಾಸು ಅಧಿಕಾರಿಗಳು 2024-25ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಆಯವ್ಯಯ ಅಂದಾಜುಗಳಲ್ಲಿ ಪರಿಷ್ಕರಿಸಿರುವುದನ್ನು ಸಭೆಗೆ ಸವಿವರವಾಗಿ ಮಂಡಿಸಿದರು. |

| | |
|---|---|
| | ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ನಿವೃತ್ತಿ ಹೊಂದುವ ವಿಶ್ವವಿದ್ಯಾನಿಲಯದ ನೌಕರರಿಗೆ ಪಿಂಚಣಿ ಸೌಲಭ್ಯ ಹಾಗೂ ಪಿಂಚಣಿ/ಕುಟುಂಬ ಪಿಂಚಣಿಗಳ ಪಾವತಿಗೆ ಸಂಬಂಧಿಸಿದಂತೆ ನಾನು ಹೇಳಿದಂತಹ ಲೋಪಗಳನ್ನು ತಾವು ತಿದ್ದುಪಡಿ ಮಾಡಿಕೊಳ್ಳಲು ಒಪ್ಪಿರುವುದರಿಂದ ಅನುಮೋದನೆ ನೀಡಲಾಗಿದೆ. ಅದರಂತೆ ಆಯವ್ಯಯಕ್ಕೆ ಸಂಬಂಧಿಸಿದಂತ ವಿಷಯವಾಗಿರುವುದರಿಂದ ಸುದೀರ್ಘ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು, ಆಕ್ಷೇಪಣೆ ಮಾಡಬಾರದೆಂದು ಹಾಗೂ ಮಾನ್ಯ ಅಧ್ಯಕ್ಷರು ನನ್ನ ಸಂಪೂರ್ಣ ವಾದವನ್ನು ಕೇಳಿಸಿಕೊಳ್ಳ ಬೇಕೆಂದು ತಿಳಿಸುತ್ತಾ, ಸಭೆಯಲ್ಲಿ ಒಂದೂ Unwanted ಪದವನ್ನು ಬಳಸುವುದಿಲ್ಲವೆಂದು ಸಭೆಗೆ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಸಭೆಯ ಸಮಯವನ್ನು ಗಮನಿಸಿ ಹಾಗೂ ಪದಗಳ ಮೇಲೆ ಹಿಡಿತವನ್ನಿಟ್ಟು 2024-25ನೇ ಸಾಲಿನ ಆಯವ್ಯಯದ ಬಗ್ಗೆ ಚರ್ಚಿಸಬಹುದೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಈಗಾಗಲೇ ತಿಳಿಸಿರುವಂತೆ ಆಯವ್ಯಯವನ್ನು ಸಿದ್ಧಪಡಿಸುವುದು ಅನುಮೋದಿಸುವುದು ಸಿಂಡಿಕೇಟ್‌ನ ಕರ್ತವ್ಯವಾಗಿರುತ್ತದೆ. ಕಾಯ್ದೆ ಹಾಗೂ ನಿಯಮದಡಿಯಲ್ಲೇ ಆಯವ್ಯಯಕ್ಕೆ ಅನುಮೋದನೆಯನ್ನು ನೀಡಬೇಕಾಗಿರುತ್ತದೆ. ಹಣಕಾಸು ಅಧಿಕಾರಿಗಳಿಗೆ ಈ ಆಯವ್ಯಯವು ಯಾವ ತಿಂಗಳಿನಿಂದ ಅನ್ವಯವಾಗುತ್ತದೆ ಎಂದು ಕೇಳಿದರು.<br><br>ಹಣಕಾಸು ಅಧಿಕಾರಿಗಳು ಏಪ್ರಿಲ್ ಮಾಹೆಯಿಂದ ಅನ್ವಯವಾಗುತ್ತದೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ನಾವು ಆಯವ್ಯಯವನ್ನು ಯಥಾಸ್ಥಿತಿಯಲ್ಲಿ ಅನುಮೋದನೆ ಮಾಡಲು ಸಾಧ್ಯವಾಗುವುದಿಲ್ಲ. ಕಾಯ್ದೆ ಏನೂ ಹೇಳುತ್ತದೆ ಎಂಬುದರ ಆಧಾರದ ಮೇಲೆ ಚರ್ಚಿಸಬೇಕಾಗುತ್ತದೆ ಎಂದು ತಿಳಿಸಿದರು. ಹಾಗೆಯೇ ಆಯವ್ಯಯವನ್ನು ಮುಂಬರುವ ಹಣಕಾಸು ವರ್ಷದಲ್ಲಿ ನಿರೀಕ್ಷೆ ಮಾಡಬಹುದಾದಂತಹ ಆದಾಯ ಮತ್ತು ವೆಚ್ಚಗಳನ್ನು ವಿವರಿಸುವ ಒಂದು ಹಣಕಾಸು ಯೋಜನೆಯಾಗಿರುತ್ತದೆ ಎಂದು ತಿಳಿಸುತ್ತಾ, ಈ ಒಂದು ಬಜೆಟ್‌ನ್ನು ತಯಾರಿಸಲು ಹಿಂದಿನ ಹಣಕಾಸು ವರ್ಷದ ಕೊನೆಯ ಮೂರು ತಿಂಗಳು ಅಂದರೆ ಜನವರಿ ಯಿಂದ ಮಾರ್ಚ್ ವರೆಗೆ ಸಿಂಡಿಕೇಟ್‌ನ ಅನುಮೋದನೆ ಪಡೆದು ಮುಂದಿನ ಏಪ್ರಿಲ್ ಮಾಹೆಯಲ್ಲಿ ಬರುವಂತಹ ವೆಚ್ಚಗಳನ್ನು ಮಾಡಲು ಅವಕಾಶವಿರುವುದಿಲ್ಲ. ಸಿಂಡಿಕೇಟ್ ಅನುಮೋದನೆ ಪಡೆದ ನಂತರ ಹಣಕಾಸು ವಿಭಾಗದವರಿಗೆ ಖರ್ಚು ಮಾಡಲು ಅವಕಾಶವಿರುತ್ತದೆ ಎಂದು ತಿಳಿಸಿದರು. ಈಗಾಗಲೇ ಹಣವನ್ನು ಖರ್ಚು ಮಾಡಿರುವುದರಿಂದ, ಮುಂಬರುವ ವರ್ಷ ಅಂತ ಹೇಳುತ್ತಿರುವುದು ಅನ್ವಯವಾಗುವುದಿಲ್ಲವೆಂದು ತಿಳಿಸಿದರು. ನಾವು ಯಾವುದೇ ಬಜೆಟ್ ತಯಾರು ಮಾಡಬೇಕಾದರೆ ರಾಜ್ಯದ ಕಾಯ್ದೆಗಳಾದ ಬಜೆಟ್ ಮ್ಯಾನ್ಯುಯಲ್, Karnataka Fiscal Responsibility act 2002 ಬಜೆಟ್ ಮ್ಯಾನೇಜ್‌ಮೆಂಟ್, ಕರ್ನಾಟಕ ಫೈನಾನ್ಸಿಯಲ್ ಕೋಡ್ ಪ್ರಕಾರವೇ ಆಯವ್ಯಯವನ್ನು ತಯಾರಿಸಬೇಕಾಗುತ್ತದೆ ಎಂದು ಸಭೆಗೆ ತಿಳಿಸುತ್ತಾ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪರಿಚ್ಛೇದ 48(1) ರ ಪ್ರಕಾರ ಆಯವ್ಯಯವನ್ನು ತಯಾರಿಸುವುದು ಹಾಗೂ ಅನುಮೋದಿಸುವುದು ಸಿಂಡಿಕೇಟ್‌ನ ಕರ್ತವ್ಯವಾಗಿರುತ್ತದೆಂದು ಎಂದು ತಿಳಿಸುತ್ತಾ, ಆಯವ್ಯಯವನ್ನು ಜೂನ್ 30, 2024ರೊಳಗೆ ಆಯವ್ಯಯವನ್ನು ತಯಾರಿಸಿ, ಶಿಕ್ಷಣ ಮಂಡಳಿಯ ಅನುಮೋದನೆ ಪಡೆದು, ತದನಂತರ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು, ಸೆಪ್ಟೆಂಬರ್ 30 ದಿನಾಂಕಕ್ಕೆ ಮೊದಲು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು, ತದನಂತರ ರಾಜ್ಯ ಸರ್ಕಾರವು ವಿಧಾನಮಂಡಲದ ಅಧಿವೇಶನದಲ್ಲಿ ಮಂಡಿಸಿ ಒಪ್ಪಿಗೆ ಪಡೆಯುವಂತಹದ್ದಾಗಿರುವುದರಿಂದ ಆಯವ್ಯಯವನ್ನು ಸರ್ಕಾರಕ್ಕೆ ಸಲ್ಲಿಸುವಂತಹ ಕೆಲಸ ಸಿಂಡಿಕೇಟ್‌ದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. |

ಮುಂದುವರೆದು, ಆಯವ್ಯಯಕ್ಕೆ ಸಿಂಡಿಕೇಟ್‌ನ ಅನುಮೋದನೆಯೇ ಮುಖ್ಯವಾಗಿರುತ್ತದೆ. ನಿಮಗೆ ಯಾವರೀತಿ ಬೇಕೋ ಹಾಗೆ ಬಜೆಟ್ ತಯಾರಿಸಿ, ಎರಡೆರಡು ಬಣ್ಣಗಳಲ್ಲಿ (ಕೆಂಪು/ನೀಲಿ) ಮುದ್ರಿಸಿ ನಮಗೆ ನೀಡಿದ್ದೀರಿ. ಅದರಲ್ಲಿ ಮೊದಲು ನೀಡಿರುವ (ನೀಲಿ ಬಣ್ಣದಲ್ಲಿ) ಬಜೆಟ್‌ನಲ್ಲಿ 357.74 ಕೋಟಿ ಯಥಾವತ್ತಾಗಿದೆ, 59.00 ಕೋಟಿ ಕೊರತೆ ತೋರಿಸಿದ್ದೀರಿ. ಎರಡನೆ ಬಾರಿ ನೀಡಿರುವ (ಕೆಂಪು ಬಣ್ಣದ) ಬಜೆಟ್ ಪುಸ್ತಕದಲ್ಲಿ 80.35 ಕೋಟಿ ಕೊರತೆ ತೋರಿಸಿದ್ದೀರಿ. ಆದರೆ ಎರಡು ಪುಸ್ತಕಗಳಲ್ಲಿ ನೀಡಿರುವ ಬಜೆಟ್‌ನಲ್ಲಿ ಆದಾಯ ಮಾತ್ರ ಒಂದೆ ತೆರನಾಗಿದೆ. ರೂ. 277.39 ಕೋಟಿ ಎಂದು ತೋರಿಸಿದ್ದೀರಿ. ಆದರೆ ಕೊರತೆ ಮಾತ್ರ ಬೇರೆ ಬೇರೆ ತೆರನಾಗಿದ್ದು, ಸುಮಾರು ರೂ. 21.00 ಕೋಟಿ ವ್ಯತ್ಯಾಸವಿರುತ್ತದೆ ಇದು ಹೇಗೆ ಸಾಧ್ಯ? ಇದಕ್ಕೆ ವಿವರಣೆಯನ್ನು ನೀಡಬೇಕೆಂದು ಹಣಕಾಸು ಅಧಿಕಾರಿಗಳಗೆ ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಮಾರ್ಚ್ ತಿಂಗಳ ಅಂತ್ಯದಲ್ಲಿ ಆಯವ್ಯಯವನ್ನು ಮಂಡಿಸಬೇಕಾಗಿತ್ತು, ಏಪ್ರಿಲ್‌ನಿಂದ ಬಜೆಟ್ ಜಾರಿಗೆ ಬರಬೇಕಾಗಿತ್ತು. ಆದರೆ ಚುನಾವಣಾ ನೀತಿ ಸಂಹಿತೆ ಮಾರ್ಚ್ 16ರಿಂದ ಜಾರಿಗೆ ಬಂದಿದ್ದರಿಂದ ಆಯವ್ಯಯವನ್ನು ಮಾರ್ಚ್ ತಿಂಗಳಲ್ಲಿ ಮಂಡಿಸಲು ಸಾಧ್ಯವಾಗಲಿಲ್ಲವೆಂದು ಸಭೆಗೆ ತಿಳಿಸಿದರು. ಸರ್ಕಾರದ ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳ ಸಲಹೆ ಪಡೆದು ಚುನಾವಣಾ ನೀತಿ ಸಂಹಿತೆ ಮುಗಿದ ನಂತರ ಆಯವ್ಯಯವನ್ನು ಸರ್ಕಾರದ ಹಣಕಾಸು ಇಲಾಖೆ, ಪ್ಲಾನಿಂಗ್ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆಯ ಸದಸ್ಯರು ಹಾಗೂ ಇತರೆ ಸದಸ್ಯರನ್ನೊಳಗೊಂಡ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದ ನಂತರ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದೆ ಎಂದು ತಿಳಿಸುತ್ತಾ, ಹಣಕಾಸು ಸಮಿತಿ ಸಭೆ ನಡೆಯುವವರೆಗೆ ಸಿಬ್ಬಂದಿ ವೇತನ ಹಾಗೂ ಪಿಂಚಣಿ ಮಾತ್ರ ಪಾವತಿಸಲಾಗಿದೆ. ಬೇರೆ ಯಾವುದೇ ಖರ್ಚು-ವೆಚ್ಚಗಳಗೆ ಹಣವನ್ನು ಪಾವತಿಸಲಾಗಿರುವುದಿಲ್ಲವೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಚುನಾವಣಾ ನೀತಿ ಸಂಹಿತೆ ಜಾರಿ ಇದ್ದುದರಿಂದಲೂ ಹಾಗೂ ಹಣಕಾಸು ಸಮಿತಿಯು ಅನುಮೋದನೆ ನೀಡಿರುವುದರಿಂದ ಆಯವ್ಯಯವನ್ನು ಸಿಂಡಿಕೇಟ್ ಸಭೆಗೆ ಆಗಸ್ಟ್ ತಿಂಗಳನಲ್ಲಿ ಮಂಡಿಸಲಾಗಿದೆ ಎಂದು ಹೇಳುತ್ತಿದ್ದೀರಾ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಚುನಾವಣಾ ನೀತಿ ಸಂಹಿತೆ ಮುಗಿದ ತಕ್ಷಣವೇ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, 2024ರ ಚುನಾವಣೆ ನಡೆದಿದ್ದು ಜಗತ್ ಜಾಹೀರವಾಗಿತ್ತು. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದಲೂ ಮಾಹಿತಿಯೂ ಮೊದಲೇ ಇದ್ದುದರಿಂದ ನೀವು ಫೆಬ್ರವರಿ ಮಾಹೆಯಲ್ಲಿ ಅಥವಾ ಮಾರ್ಚ್ ಮಾಹೆಯ ಮೊದಲೇ ವಾರದಲ್ಲೇ ಆಯವ್ಯಯವನ್ನು ಮಂಡಿಸಬೇಕಾಗಿತ್ತಲ್ಲ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಭೆಯಲ್ಲಿ ಮೆಲುದನಿಯಲ್ಲಿ ಮಾತನಾಡಬೇಕೆಂದು ಹಾಗೂ ಶೈಕ್ಷಣಿಕವಾದ ವಿಷಯಗಳಗೆ ಸಂಬಂಧಿಸಿದಂತೆ ಹೆಚ್ಚು ಮಾತನಾಡಬೇಕೆಂದು ಪ್ರತಿ ಸಭೆಗಳಲ್ಲೂ ಹಣಕಾಸಿಗೆ ಸಂಬಂಧಿಸಿದ ವಿಷಯಗಳನ್ನು ಮಾತನಾಡುತ್ತಿದ್ದರೆ, ಶೈಕ್ಷಣಿಕ ವಿಷಯಗಳಗೆ ಸಂಬಂಧಿಸಿದಂತೆ ಪ್ರಗತಿಯನ್ನು ಸಾಧಿಸುವುದು ಹೇಗೆ? ಎಂದು ಕೇಳಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ಎಲ್ಲಾ ಸದಸ್ಯರು ಎಂದು ಹೇಳಬೇಡಿ, ನಾವುಗಳು ಶೈಕ್ಷಣಿಕ ವಿಷಯಗಳ ಬಗ್ಗೆಯೂ ಹಲವು ಸಭೆಗಳಲ್ಲಿ ಈಗಾಗಲೇ ಮಾತನಾಡಿದ್ದೇವೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಪ್ರತಿ ವರ್ಷ ನಡೆಯುವಂತಹ ಕಾರ್ಯ ವಿಧಾನದಂತೆಯೇ ಚುನಾವಣಾ ನೀತಿ ಸಂಹಿತೆ ಮುಗಿದ ತಕ್ಷಣವೇ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸರ್ಕಾರದ ಪ್ರತಿನಿಧಿಗಳನ್ನೊಳಗೊಂಡ ಸದಸ್ಯರುಗಳು ಹಾಗೂ

| | |
|---|---|
| | ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನ ಒಬ್ಬ ಸದಸ್ಯರನ್ನೊಳಗೊಂಡ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಹಣಕಾಸು ಸಮಿತಿಯಲ್ಲಿ ಅನುಮೋದನೆಗೊಂಡ ಆಯವ್ಯಯವನ್ನು ಅನುಮೋದನೆಗಾಗಿ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಗೆ ಮಂಡಿಸಲಾಗಿದೆ. ರೂ. 100/-ಗಳನ್ನು ಹೆಚ್ಚುವರಿ ಪಡೆಯಬೇಕಾದರೂ ಹಣಕಾಸು ಸಮಿತಿಯ ಅನುಮೋದನೆ ಪಡೆಯಬೇಕಾಗುತ್ತದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ತಾವು ಹೇಳಿರುವಂತೆಯೇ ಪ್ರತಿ ವರ್ಷ ಬಜೆಟ್‌ಅನ್ನು ಮಾರ್ಚ್ ತಿಂಗಳ ಅಂತ್ಯದಲ್ಲಿ ಮಂಡಿಸಲಾಗುವುದು ಎಂದು ತಿಳಿಸಿದ್ದೀರಿ. ಆದರೆ ಚುನಾವಣೆಯು ನಡೆಯಲಿದೆ ಎಂಬ ಮಾಹಿತಿಯು ತಮಗೆ ಹಾಗೂ ಎಲ್ಲರಿಗೂ ಗೊತ್ತಿರುವ ವಿಷಯ. ಆ ಕಾರಣದಿಂದ ವಿಧಾನ ಮಂಡಲ ಹಾಗೂ ಸಂಸತ್‌ಗಳು ಫೆಬ್ರವರಿ ಮಾಹೆಯಲ್ಲಿ ಬಜೆಟ್‌ಅನ್ನು ಮಂಡಿಸಿರುವುದು. ಆದ್ದರಿಂದ ವಿಶ್ವವಿದ್ಯಾನಿಲಯವು ಅದನ್ನೇ ಏಕೆ ಪಾಲನೆ ಮಾಡಲಿಲ್ಲವೆಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಎಷ್ಟು ಅನುದಾನ ದೊರಕುತ್ತದೆ ಎಂಬ ಆಧಾರದ ಮೇಲೆ ವಾಡಿಕೆಯಂತೆ ನಮ್ಮ ವಿಶ್ವವಿದ್ಯಾನಿಲಯದ ಆಯವ್ಯಯವನ್ನು ಆನಂತರದಲ್ಲಿ ಸಿದ್ಧಪಡಿಸಲಾಗುತ್ತಿದೆ ಎಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಆಂತರಿಕ ಹಣಕಾಸು ವ್ಯವಸ್ಥೆ ನಮಗೆ ತಿಳಿದಿರುವುದರಿಂದ ಆಯವ್ಯಯದ ಅಂದಾಜನ್ನು ತಯಾರಿಸಬಹುದು. ಹಾಗೆಯೇ ಸರ್ಕಾರಕ್ಕೆ ಡಿಸೆಂಬರ್ ಮಾಹೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಬೇಕಾಗುವಂತಹ ಅನುದಾನ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ತದನಂತರ ಸರ್ಕಾರದ ಆಯವ್ಯಯದಲ್ಲಿ ವಿಶ್ವವಿದ್ಯಾನಿಲಯಕ್ಕೆ ಎಷ್ಟು ಮೊತ್ತವನ್ನು ಹಂಚಿಕೆ ಮಾಡಲಾಗಿದೆ ಎಂಬುದರ ಆಧಾರದ ಮೇಲೆ ಬಜೆಟ್‌ಅನ್ನು ತಯಾರಿಸಲು ಸಾಧ್ಯವೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಸರ್ಕಾರದ ಬಜೆಟ್ ಆಗುವವರೆಗೂ ಎಂದು ಹೇಳುವುದು ತಪ್ಪಾಗುತ್ತದೆ. ನೀವು ಬಜೆಟ್‌ಅನ್ನು ಅಂದಾಜುಗಳ 'ಕರಡು ಪಟ್ಟಿ' ಎಂದಿರುವುದರಿಂದ ಇಂತಿಷ್ಟು ಹಣವೆಂದು ಸೇರಿಸಿ ಬಜೆಟ್‌ಅನ್ನು ತಯಾರಿಸಿ ಚುನಾವಣ ನೀತಿ ಸಂಹಿತೆ ಜಾರಿಗೆ ಬರುವುದರೊಳಗೆ ಮಂಡಿಸಬಹುದೆಂದು ಹಾಗೆಯೇ ಎರಡೆರಡು ಆಯವ್ಯಯಗಳ ಪುಸ್ತಕಗಳನ್ನು ನೀಡಿರುವುದು ಏಕೆ ಎಂದು ಮತ್ತೊಮ್ಮೆ ಕೇಳಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಹಿಂದೆ ನಡೆದಂತಹ ಸಿಂಡಿಕೇಟ್ ಸಭೆಯಲ್ಲಿ ತಾವು ಇರಲಿಲ್ಲ. ದಿನಾಂಕ : 20.06.2024ರಂದು ನಡೆದು ಸಭೆಯಲ್ಲಿ ಈಗಾಗಲೇ ತಿಳಿಸಲಾಗಿತ್ತು ಎಂದು ತಿಳಿಸುತ್ತಾ, ಆಯವ್ಯಯವನ್ನು ತಯಾರಿಸುವಾಗ 12 ತಿಂಗಳಿಗೆ ತೆಗೆದುಕೊಳ್ಳಬೇಕಾಗಿದ್ದ ಖರ್ಚನ್ನು 9 ತಿಂಗಳಿಗೆ ಮಾತ್ರ ತೋರಿಸಲಾಗಿತ್ತು. ಅದು ನಮ್ಮ ಕಡೆಯಿಂದ ತಪ್ಪಾಗಿದ್ದುದನ್ನು ನಾನು ಈಗಾಗಲೇ ಒಪ್ಪಿಕೊಂಡಿದ್ದೇನೆ. ಆಯವ್ಯಯದ ಕರಡು ಪುಸ್ತಕವು ಮುದ್ರಣಗೊಂಡು ಸದಸ್ಯರುಗಳಿಗೆ ತಲುಪಿಸಲಾಗಿತ್ತು. ಆ ತಪ್ಪಿನ ಅರಿವಾಗಿ ತಕ್ಷಣವೇ ಆ ಪುಸ್ತಕವನ್ನು ವಾಪಸ್ಸು ಪಡೆದು, ಎರಡನೇ ಬಾರಿ ಸರಿಯಾದ ಮಾಹಿತಿಯನ್ನೊಳಗೊಂಡ ಆಯವ್ಯಯದ ಕರಡನ್ನು ಎಲ್ಲಾ ಸದಸ್ಯರುಗಳಿಗೆ ಒದಗಿಸಲಾಗಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಆದಾಯವನ್ನು ಮಾತ್ರ 12 ತಿಂಗಳು ತೆಗೆದುಕೊಂಡು ವೆಚ್ಚವನ್ನು 9 ತಿಂಗಳಿಗೆ ಹೇಗೆ ತೆಗೆದುಕೊಂಡಿರಿ ಎಂದು ಮರುಪ್ರಶ್ನಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ ತಪ್ಪಾಗಿದ್ದನ್ನು ಒಪ್ಪಿಕೊಳ್ಳಲಾಗಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಕಳೆದ ಎರಡು ವರ್ಷಗಳಲ್ಲಿ ಖೋತಾ ಬಜೆಟ್‌ನಲ್ಲಿ ಅಂದಾಜು ರೂ. 80.00 ಕೋಟಿ ಮಂಡಿಸಿದ್ದೀರಿ. 2024-25ನೇ ಸಾಲಿನ ಆಯವ್ಯಯದಲ್ಲೂ ರೂ. 81.00 ಕೋಟಿ ಪ್ರಸ್ತುತ ಪಡಿಸಿದ್ದೀರಿ. ಕಳೆದ ಎರಡು ವರ್ಷಗಳಲ್ಲಿ |

ನಮ್ಮ ಮೂರು ಸ್ನಾತಕೋತ್ತರ ಕೇಂದ್ರಗಳು ನಮ್ಮ ವಿಶ್ವವಿದ್ಯಾನಿಲಯಕ್ಕೆ ಸೇರಿದ್ದವು. ನಾಲ್ಕು ಜಿಲ್ಲೆಗಳಿದ್ದಾಗ್ಯೂ ಅದೇ ರೂ. 81.00 ಕೋಟಿ ಕೊರತೆ ಬಜೆಟ್, ಪ್ರಸ್ತುತ ಒಂದು ಜಿಲ್ಲೆಯಿದ್ದಾಗ್ಯೂ ರೂ. 81.00 ಕೋಟಿ ಕೊರತೆ ಬಜೆಟ್ ಎಂದು ತಿಳಿಸಿದ್ದೀರಿ. ಆದರೆ ಪ್ರಸ್ತುತ ಒಂದು ಜಿಲ್ಲೆ ಇರುವುದರಿಂದ ಶೇ. 75 ಇಲ್ಲದಿದ್ದರೂ 1/3 ಭಾಗದಷ್ಟಾದರೂ ಬಜೆಟ್ ಕೊರತೆಯಾಗಬೇಕಾಗಿತ್ತು ಎಂದು ತಿಳಿಸುತ್ತಾ, ನಮ್ಮ ವಿಶ್ವವಿದ್ಯಾನಿಲಯಕ್ಕೆ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿರುವುದಿಲ್ಲ, ಹಾಗೆಯೇ ಹಾಲಿ ಇರುವ ಸಿಬ್ಬಂದಿಗಳಿಗೆ ವೇತನವನ್ನು ಹೆಚ್ಚಿಸಿಯೂ ಇಲ್ಲಾ, ಹೊಸ ಕಟ್ಟಡ, ಕಾಮಗಾರಿಗಳು ಹಾಗೂ ಮೇಲ್ವಿಚಾರಣೆಯೂ ಇಲ್ಲದಿರುವುದರಿಂದ ಎಲ್ಲವೂ ಕಡಿಮೆಯಾಗಬೇಕಾಗುತ್ತದೆ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಮೂರು ಜಿಲ್ಲೆಗಳಿಂದ ಅಂತಿಮ ವರ್ಷದಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ ಹಾಗೂ ಪರೀಕ್ಷಾ ಶುಲ್ಕವು ನಮ್ಮ ವಿಶ್ವವಿದ್ಯಾನಿಲಯಕ್ಕೆ ಬರುತ್ತಿದೆ. ಜೊತೆಗೆ ಅಲ್ಲಿರುವಂತಹ ಬೋಧನಾ ಸಿಬ್ಬಂದಿವರ್ಗದವರ ವೇತನವನ್ನು ನಮ್ಮ ವಿಶ್ವವಿದ್ಯಾನಿಲಯದಿಂದಲೇ ಭರಿಸಲಾಗುತ್ತಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ನಾನು ಕೇಳುತ್ತಿರುವುದು ವ್ಯಯದ ಬಗ್ಗೆ ಆದರೆ ನೀವು ಶುಲ್ಕದ ಬಗ್ಗೆ ತಿಳಿಸುತ್ತಿದ್ದೀರಿ, ನಾಲ್ಕು ಜಿಲ್ಲೆಗಳಿದ್ದಾಗ್ಯೂ ಒಂದೇ ಕೊರತೆ ಒಂದೇ ಜಿಲ್ಲೆಯಿದ್ದಾಗ್ಯೂ ಅಷ್ಟೇ ಕೊರತೆ ಹೇಗೆ ಇರಲು ಸಾಧ್ಯ. ನನ್ನ ಪ್ರಕಾರ ಇದು ಕಂಪ್ಯೂಟರ್‌ನಲ್ಲಿ copy ಮತ್ತು paste ಆಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ನಮ್ಮಿಂದ ಬೇರ್ಪಟ್ಟು ಹೊಸ ವಿಶ್ವವಿದ್ಯಾನಿಲಯಗಳಾಗಿ ಮಾರ್ಪಟ್ಟ ಮೂರು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ವೇತನವನ್ನು ನಮ್ಮ ವಿಶ್ವವಿದ್ಯಾನಿಲಯದಿಂದಲೇ ಭರಿಸಲಾಗುತ್ತಿದೆ. ಪಿಜಿ ವಿದ್ಯಾರ್ಥಿಗಳದ್ದು ಜೂನ್ 2024ಕ್ಕೆ ಮುಕ್ತಾಯಗೊಂಡಿದ್ದು, ಯುಜಿ ವಿದ್ಯಾರ್ಥಿಗಳದ್ದು 2025ರ ಜೂನ್ ಮಾಹೆಗೆ ಅಂತ್ಯಗೊಳ್ಳುತ್ತದೆ ಎಂದು ತಿಳಿಸಿದರು.

ಡಾ. ನಟರಾಜ್ ಎಚ್.ಎಸ್ ಅವರು ಮಾತನಾಡಿ ಮೂರು ಜಿಲ್ಲೆಗಳ ವಿಶ್ವವಿದ್ಯಾನಿಲಯಗಳಿಗೆ ಸ್ಥಿರಾಸ್ತಿಗಳೆಲ್ಲವನ್ನೂ ನೀಡಲಾಗಿದೆ ಎಂದು ತಿಳಿಸಿದ್ದೀರಿ ಎಂದು ಕೇಳಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಆದರೂ ಸಹ ಆಯವ್ಯಯದ ಕೊರತೆಯು ಕಳೆದ ವರ್ಷಗಳಿಗಿಂತಲೂ ಅರ್ಧದಷ್ಟಾದರೂ ಕಡಿಮೆ ಆಗಬೇಕಾಗಿತ್ತು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, 40 ರಿಂದ 45 ಸಾವಿರದವರೆಗೆ ವಿದ್ಯಾರ್ಥಿಗಳ ಪ್ರವೇಶಾತಿ ಆಗಬೇಕಾಗಿತ್ತು. ಆದರೆ ಪ್ರಸ್ತುತ ವರ್ಷದಲ್ಲಿ 20 ರಿಂದ 22 ಸಾವಿರದವರೆಗೆ ಮಾತ್ರ ವಿದ್ಯಾರ್ಥಿಗಳ ಪ್ರವೇಶಾತಿಯಾಗಿದೆ. ಜೊತೆಗೆ ಯುಯುಸಿಎಂಎಸ್ ಮುಖಾಂತರ ವಿದ್ಯಾರ್ಥಿಗಳು ಶುಲ್ಕವನ್ನು ಪಾವತಿಸಲಾಗುತ್ತಿದೆ. ಜೊತೆಗೆ ಶುಲ್ಕದ ಮಾಹಿತಿಯು ಸರಿಯಾಗಿ ದೊರಕಿಲ್ಲವೆಂದು ಸಭೆಗೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಮೊದಲ ಬಾರಿಗೆ ನೀಡಿರುವಂತಹ ಬಜೆಟ್ ಪುಸ್ತಕದಲ್ಲಿ ತೋರಿಸಿರುವಂತಹ ರೂ. 59.00 ಕೋಟಿ ನೈಜವಾಗಿದ್ದು, ರೂ. 59.00 ಕೋಟಿ ಕೊರತೆಯಿರುವ ನೈಜವಾದ ಬಜೆಟ್‌ಗೆ ಹಣಕಾಸು ಸಮಿತಿಯಲ್ಲಿ ಅನುಮೋದನೆಯನ್ನು ಪಡೆದಿದ್ದೀರಿ, ನಂತರ ವಿದ್ಯಾವಿಷಯಕ ಪರಿಷತ್ ಸಭೆಗೆ ರೂ. 81.00 ಕೋಟಿಗಳ ಕೊರತೆ ಬಜೆಟ್‌ಅನ್ನು ಮಂಡಿಸಿದ್ದೀರಿ ಎಂದು ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿದರು. ಜೊತೆಗೆ ನನ್ನಲ್ಲಿ ಎಲ್ಲವೂ ದಾಖಲೆಗಳಿವೆ. ಸಿಂಡಿಕೇಟ್ ಸದಸ್ಯರಾದ ಶ್ರೀ ಗೋಕುಲ್ ಗೋವರ್ಧನ್ ಅವರು ದಿನಾಂಕ : 20.06.2024ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಹಣಕಾಸು ಸಮಿತಿ ಸಭೆಯಲ್ಲಿ ಇಟ್ಟಂತಹ ಆಯವ್ಯಯಕ್ಕೂ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತುತಪಡಿಸಿರುವ ಆಯವ್ಯಯಕ್ಕೂ ರೂ. 21.00 ಕೋಟಿ ವ್ಯತ್ಯಾಸವಿದೆ ಇದು ಹೇಗೆ ಸಾಧ್ಯ ಎಂದು ಕೇಳಿರುವ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಓದಿ ಸಭೆಗೆ ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ರೂ. 21.00 ಕೋಟಿಗಳ ಕೊರತೆ ವ್ಯತ್ಯಾಸ ಹೇಗೆ ಆಗಲು ಸಾಧ್ಯವೆಂದು ನಾನು ಕೂಡ ಪ್ರಶ್ನೆ ಮಾಡಿದ್ದೆ ಎಂಬುದರ ಬಗ್ಗೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ನಾನು ದಾಖಲೆಗಳ ಪ್ರಕಾರವೇ ಮಾತನಾಡುತ್ತಿದ್ದೇನೆ. ತಾವು ಸ್ಟೇಟ್ ಆಫೀಸರ್‌ಆಗಿ ಈ ರೀತಿ ಮಾತನಾಡಬಾರದು ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ನಾನು ಸ್ಟೇಟ್ ಆಫೀಸರ್ ಆಗಿ ನನ್ನದೇ ಆದ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ಬಜೆಟ್‌ನಲ್ಲಿ ಯಾವುದೇ ರೀತಿಯ ದಾರಿತಪ್ಪಿಸುವ (mislead) ಕೆಲಸವನ್ನು ಮಾಡಿಲ್ಲವೆಂದು, ಇದರಲ್ಲಿ ಯಾವುದೇ ವೈಯಕ್ತಿಕವಾದ ಅನುಕೂಲತೆಗಳೇನು ಇಲ್ಲವೆಂದರು. ತಮಗೆ ಬೇಕಾದ ಮಾಹಿತಿಗೆ ಸ್ಪಷ್ಟನೆ ನೀಡಲಾಗಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಆಯವ್ಯಯದ ಬಗ್ಗೆ mislead ಆಗಿದೆ. ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಭೆಯಲ್ಲಿ ವಿಸ್ತೃತಪಡಿಸುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಡಾ. ಟಿ.ಆರ್. ಚಂದ್ರಶೇಖರ್ ಅವರಿಗೆ ಇನ್ನೂ 5.00 ನಿಮಿಷಗಳ ಕಾಲಾವಕಾಶ ನೀಡಲಾಗುವುದು ಎಂದು ತಿಳಿಸಿ, ಈಗಾಗಲೇ ಸಾಕಷ್ಟು ಸಮಯ ಬಜೆಟ್‌ಗೆ ಸೀಮಿತವಾಗಿದೆ. ಇನ್ನೂ ಹಲವಾರು ವಿಷಯಗಳಿವೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು 5 ನಿಮಿಷಗಳ ಕಾಲಾವಕಾಶ ಸಾಕಾಗುವುದಿಲ್ಲವೆಂದು, ಜೊತೆಗೆ ಇದು ರೂ. 360 ಕೋಟಿಗಳ ಬಜೆಟ್ ಆಗಿರುವುದರಿಂದ ವಿಸ್ತೃತವಾಗಿ ಮಾಹಿತಿಯನ್ನು ಪಡೆಯಬೇಕಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಹಾಗಾದಲ್ಲಿ ಈ ವಿಷಯವನ್ನು ಇಲ್ಲಿಗೆ ಮುಗಿಸಿ ಎಂದು ತಿಳಿಸಿದರು. ಹೆಚ್‌ಆರ್‌ಎಂಎಸ್ ನಿಂದ ಖಾಯಂ ನೌಕರರಿಗೆ ಸಂಬಳ ಬರುತ್ತಿದೆ. ಹಾಗೆಯೇ ಇದು ರೂ. 360 ಕೋಟಿಗಳ ಬಜೆಟ್ ಅಲ್ಲವೆಂದು ಸಭೆಗೆ ತಿಳಿಸಿ, ಜೊತೆಗೆ ಆಯವ್ಯಯದ ಬಗ್ಗೆ ಓಟಿಂಗ್ ಹಾಕಿಸಿ, ಆಯವ್ಯಯದ ಬಜೆಟ್ ವಿಷಯವನ್ನು ಮುಗಿಸಬೇಕಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಜೊತೆಗೆ ಆಯವ್ಯಯದ ವಿಷಯವನ್ನು ನಾಲ್ಕನೇ ಬಾರಿ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದೆ. ಇನ್ನೂ ನೀವು ಆಯವ್ಯಯದ ಬಗ್ಗೆ ಸ್ಪಷ್ಟೀಕರಣವನ್ನು ಕೇಳುತ್ತಲೇ ಇದ್ದೀರಿ. ಈಗಾಗಲೇ 25 ನಿಮಿಷಗಳ ಸಮಯವನ್ನು ತೆಗೆದುಕೊಂಡಿದ್ದೀರಿ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಬಜೆಟ್ ಬಗ್ಗೆ ವಿಶೇಷ ಸಭೆಯನ್ನು ಕರೆಯಲು ಈಗಾಗಲೇ ಪತ್ರದ ಮುಖೇನ ತಿಳಿಸಿದ್ದೆವು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಬಜೆಟ್‌ಗೆ ಸಂಬಂಧಿಸಿದಂತೆ ವಿಶೇಷ ಸಭೆಯನ್ನು ಕರೆಯಲು ಅವಕಾಶವಿರುವುದಿಲ್ಲವೆಂದು ತಿಳಿಸಿದರು.

ಸದಸ್ಯರುಗಳು ಡಾ. ಟಿ.ಆರ್. ಚಂದ್ರಶೇಖರ್ ಅವರಿಗೆ ಒಂದೊಂದೇ ವಿಷಯವನ್ನು ಸಭೆಗೆ ತಿಳಿಸುವಂತೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, 2024-25ನೇ ಸಾಲಿನ ಆಯವ್ಯಯ ಅಂದಾಜು 'ಕರಡ'ನ್ನು ವಿದ್ಯಾವಿಷಯಕ ಪರಿಷತ್‌ನಲ್ಲಿ ಮಂಡಿಸುವಾಗ ಹಣಕಾಸು ಸಮಿತಿ ಸಭೆಯಲ್ಲಿ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ ಎಂದು ತಿಳಿಸಿದ್ದೀರಿ. ಆದರೆ ಸಿಂಡಿಕೇಟ್ ಸಭೆಯಲ್ಲಿ ನಾವು ಅನುಮೋದನೆಯನ್ನು ನೀಡಿರುವುದಿಲ್ಲ. ಯಾವ ರೀತಿ ನೀವು ವಿದ್ಯಾವಿಷಯಕ ಪರಿಷತ್ ಸಭೆಗೆ ತಪ್ಪಾದ ಮಾಹಿತಿಯನ್ನು ನೀಡುವುದರ ಜೊತೆಗೆ ಶೈಕ್ಷಣಿಕ ಮಂಡಳಿಯಲ್ಲಿ ವಿಧಾನ ಪರಿಷತ್ ಸದಸ್ಯರು ಇರುತ್ತಾರೆ. ಅವರುಗಳಿಗೆ ಹೇಗೆ ದಾರಿತಪ್ಪಿಸಿದಿರಿ ಎಂದು ಪ್ರಶ್ನಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ವಿದ್ಯಾವಿಷಯಕ ಪರಿಷತ್‌ನ ನಡಾವಳಿಯಲ್ಲಿ ತಪ್ಪಾಗಿರುವುದೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಕಣ್‌ತಪ್ಪಿನಿಂದ ತಪ್ಪಾಗಿರಬಹುದೆಂದು ಹಾಗೂ ತಿದ್ದುಪಡಿ ಮಾಡಿಕೊಳ್ಳಲಾಗುವುದೆಂದು ಎಂದು ತಿಳಿಸಿದರು.

ಡಾ. ಸಿ. ಬಸವರಾಜು ಅವರು ಮಾತನಾಡಿ ಹಣಕಾಸು ಅಧಿಕಾರಿಗಳಿಗೆ ಸದರಿ ವಿಷಯಕ್ಕೆ ಉತ್ತರ ನೀಡಬೇಕೆಂದರು. ಸಿಂಡಿಕೇಟ್‌ನ ಸದಸ್ಯರೆಲ್ಲರೂ ಸಹ ದನಿಗೂಡಿಸಿದರು. ಹಲವು ಬಾರಿ ಕಣ್‌ತಪ್ಪಿನಿಂದ ಆದ ತಪ್ಪುಗಳು ಎಂದು ಪದೇ ಪದೇ ಸಭೆಯಲ್ಲಿ ಹೇಳುತ್ತಿದ್ದೀರಿ. ಇದು ಮಹಾಪರಾಧವಾಗುತ್ತದೆ. ಆದ್ದರಿಂದ ಇನ್ನೊಮ್ಮೆ ಈ ರೀತಿ ಆಗಬಾರದೆಂದು ಸಭೆಗೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಆಯವ್ಯಯವನ್ನು Karnataka Fiscal Responsibility act 2002 ರಂತೆ ತಯಾರಿಸಬೇಕಾಗುತ್ತದೆ. ಅದರಂತೆ ಕೊರತೆಯು ಶೇಕಡ 3ಕ್ಕಿಂತ ಮೀರುವಂತಿಲ್ಲವೆಂದಿರುತ್ತದೆ. ಹಾಗಾದಲ್ಲಿ ಕೊರತೆ ಕೇವಲ 10.00 ಕೋಟಿಯಾಗಿರಬೇಕಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರವು ಪಿಂಚಣಿ ಅನುದಾನವನ್ನು ಕಡಿಮೆ ನೀಡುತ್ತಿರುವುದರಿಂದ ಕೊರತೆಯ ಪ್ರಮಾಣ ಹೆಚ್ಚಾಗಿದೆ. ಸರ್ಕಾರವು ಪಿಂಚಣಿ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ನೀಡಿದರೆ ಕೊರತೆ ಪ್ರಮಾಣವು ಕಡಿಮೆಯಾಗುವುದು ಎಂದು ಸಭೆಗೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಪ್ರೊ. ಕೆ.ಎಸ್. ರಂಗಪ್ಪನವರು ಕುಲಪತಿಗಳಾಗಿದ್ದಾಗ ಬಜೆಟ್ ಕೊರತೆ ಪ್ರಮಾಣವು ಶೇಕಡ 1ರಷ್ಟಿತ್ತು. ಆದರೆ ಪ್ರಸ್ತುತ ಬಹಳ ಜಾಸ್ತಿಯಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಪ್ರೊ. ಕೆ.ಎಸ್. ರಂಗಪ್ಪನವರು ಕುಲಪತಿಗಳಾಗಿದ್ದ ಸಮಯದಲ್ಲಿ ಸರ್ಕಾರವು ಪಿಂಚಣಿ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ನೀಡುವುದರ ಜೊತೆಗೆ ಹೆಚ್ಚುವರಿ ಅನುದಾನವನ್ನು ನೀಡಿತ್ತು. 2018 ರಿಂದ ಪಿಂಚಣಿ ಅನುದಾನವು ಅರ್ಧದಷ್ಟನ್ನು ಮಾತ್ರ ನೀಡುತ್ತಿದೆ. ಆದ್ದರಿಂದ ಕೊರತೆ ಪ್ರಮಾಣವು ಹೆಚ್ಚಾಗಿದೆ ಎಂದು ತಿಳಿಸಿದರು. ಪ್ರಸ್ತುತ ನಮ್ಮಲ್ಲಿ ಶೇಕಡ 34 ರಷ್ಟು ನೌಕರರಿದ್ದಾರೆ. ಪ್ರೊ. ಕೆ.ಎಸ್. ರಂಗಪ್ಪ ನವರು ಇದ್ದ ಸಂದರ್ಭದಲ್ಲಿ ಶೇಕಡ 72 ರಷ್ಟು ನೌಕರರಿದ್ದರು. ಪ್ರಸ್ತುತ ಸರ್ಕಾರವು ಪೂರ್ಣ ಪ್ರಮಾಣದಲ್ಲಿ ಪಿಂಚಣಿ ಅನುದಾನವನ್ನು ನೀಡಿದರೆ ಕೊರತೆ ಪ್ರಮಾಣವು ಕಡಿಮೆಯಾಗುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ನಾವು ಬಜೆಟ್‌ಅನ್ನು ಕಾಯ್ದೆಯ ಪ್ರಕಾರ ತಯಾರಿಸಬೇಕಾಗುತ್ತದೆ. ಕಾಯ್ದೆಯ ಪ್ರಕಾರ ಆದಾಯಕ್ಕನುಗುಣವಾಗಿ ಹಾಗೂ ವಾಸ್ತವವಾಗಿ ವಸ್ತುನಿಷ್ಠವಾಗಿ ಬಜೆಟ್‌ಅನ್ನು ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ನಾನು ಕುಲಪತಿಯಾಗಿ ಬಂದ ನಂತರ ವಸ್ತುನಿಷ್ಠವಾಗಿಯೇ ಬಜೆಟ್‌ಅನ್ನು ತಯಾರಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಶೇ. 30 ರಷ್ಟು ಕೊರತೆಯಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ 8–10 ತಿಂಗಳ ಹಿಂದೆ ರಾಜ್ಯ ಲೆಕ್ಕಪತ್ರ ಇಲಾಖೆಯವರು ಒಂದು ಲೆಕ್ಕಪರಿಶೋಧನಾ ಆಕ್ಷೇಪಣೆಯನ್ನು ಪ್ರಮಾಣಪತ್ರದ ಮೂಲಕ ನೀಡಿದ್ದಾರೆ. ವಿಶ್ವವಿದ್ಯಾನಿಲಯದ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳು ಅತ್ಯಂತ ದೋಷಪೂರಿತವಾಗಿದ್ದು, ನೈಜ ಮತ್ತು ನ್ಯಾಯಯುತವಾದ ಚಿತ್ರಣವನ್ನು ನೀಡುವುದಿಲ್ಲವೆಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಇದಕ್ಕೆ ತಮ್ಮ ಉತ್ತರವೇನು ಎಂದು ಕೇಳಿದರು.

| | |
|---|---|
| | ಮಾನ್ಯ ಕುಲಪತಿಗಳು ಮಾತನಾಡಿ ಯುಯುಸಿಎಂಎಸ್‌ನಿಂದ ನಮಗೆ ಹಲವಾರು ತೊಂದರೆಗಳುಂಟಾಗಿವೆ. ನಮ್ಮ ಸಿಂಡಿಕೇಟ್ ಸದಸ್ಯರುಗಳಾಗಿರುವ ಪ್ರಾಂಶುಪಾಲರುಗಳಿಗೆ ಇದರ ಅರಿವಿರುತ್ತದೆ ಎಂದು ತಿಳಿದಿರುತ್ತೇನೆ.<br><br>ಡಾ. ಆಂಥೋನಿ ಪೌಲ್‌ರಾಜ್ ಸಿ. ಅವರು ಮಾತನಾಡಿ, ವಿದ್ಯಾರ್ಥಿಗಳು ಮೊದಲು ನೇರವಾಗಿ ಶುಲ್ಕವನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸುತ್ತಿದ್ದರು. ಆದರೆ ಯುಯುಸಿಎಂಎಸ್ ಬಂದ ನಂತರ ಹಲವಾರು ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ನಮ್ಮ ಕಾಲೇಜಿನಲ್ಲಿರುವಂತಹ ಮಕ್ಕಳಿಗೆ ನವೆಂಬರ್ ಮಾಹೆಯಲ್ಲಿ ಎಸ್‌ಸಿ/ಎಸ್‌ಟಿ ಮಕ್ಕಳು ಕಾಲೇಜಿನಿಂದ ಹೋಗುವಾಗ ಸರ್ಕಾರದಿಂದ ಬರುವಂತಹ ಸ್ಕಾಲರ್‌ಶಿಫ್ ಹಣವನ್ನು ಶುಲ್ಕಗಳಿಗೆ ಮರುಭರಿಕೆ ಮಾಡಿಕೊಳ್ಳಲಾಗುವುದೆಂದು ಬಜೆಟ್‌ನಲ್ಲಿ ಹಾಕಿಕೊಳ್ಳಲಾಗಿರುತ್ತದೆ. ಆದರೆ ಆ ಸಮಯಕ್ಕೆ ಸರ್ಕಾರದಿಂದ ಹಣ ಬಿಡುಗಡೆಯಾಗುವುದಿಲ್ಲ. ಮೊದಲಾದರೆ ಅಂಕಪಟ್ಟಿ ಇಟ್ಟುಕೊಂಡು ಸ್ಕಾಲರ್‌ಶಿಪ್ ಬಂದ ನಂತರ ಶುಲ್ಕವನ್ನು ಕಟ್ಟಿಸಿಕೊಂಡು ಅವರಿಗೆ ಅಂಕಪಟ್ಟಿಯನ್ನು ನೀಡುವ ವ್ಯವಸ್ಥೆಯು ಇತ್ತು. ಆದರೆ ಯುಯುಸಿಎಂಎಸ್ ಬಂದ ನಂತರ ಇದ್ಯಾವುದಕ್ಕೂ ಅವಕಾಶವಿರುವುದಿಲ್ಲ. ಯುಯುಸಿಎಂಎಸ್‌ನಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗಿದೆ ಎಂದು ತಿಳಿಸಿದರು.<br><br>ನಂತರ ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಆಯವ್ಯಯದಲ್ಲಿ ಇರುವಂತಹ ಲೋಪದೋಷಗಳ ಬಗ್ಗೆ ನಾನು ಈಗಾಗಲೇ ತಿಳಿಸಿದ್ದೇನೆ. ಲೋಪದೋಷಗಳು ಮರುಕಳಿಸಿದಂತೆ ಪರಿಹಾರವನ್ನು ತಿಳಿಸುತ್ತೇನೆ ಎಂದು ಸಭೆಗೆ ತಿಳಿಸಿದರು. ಈಗಾಗಲೇ ಐದು ತಿಂಗಳು ಮುಗಿದಿದೆ. ಆದ್ದರಿಂದ ನೈಜವಾಗಿ ಆದಾಯ ಮತ್ತು ಖರ್ಚುಗಳಾಗಿರುವ ಬಗೆಗೆ ಒಂದು ಆಯವ್ಯಯವನ್ನು ಮುಂದಿನ 7 ತಿಂಗಳಿಗೆ ಕಾಯ್ದೆಯಡಿ ಆಯವ್ಯಯವನ್ನು ಮಂಡಿಸಿದ್ದಲ್ಲಿ ಅನುಮೋದನೆಯನ್ನು ನೀಡಬಹುದೆಂದು, ಇಲ್ಲವಾದಲ್ಲಿ ದೋಷಪೂರಿತವಾಗಿ ಕೂಡಿರುವಂತಹ ಆಯವ್ಯಯವನ್ನು ಅನುಮೋದಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಡಾ. ಟಿ.ಆರ್. ಚಂದ್ರಶೇಖರ್ ಅವರಿಗೆ ನೀವು ಈಗಾಗಲೇ 40 ನಿಮಿಷಗಳಿಗಿಂತ ಹೆಚ್ಚಿಗೆ ಆಯವ್ಯಯಕ್ಕೆ ಸಂಬಂಧಿಸಿದಂತೆ ಚರ್ಚಿಸಿದ್ದೀರಿ. ನಿಮಗೆ ಆಯವ್ಯಯವನ್ನು ಒಪ್ಪಲು ಸಾಧ್ಯವಿಲ್ಲದಿದ್ದಲ್ಲಿ ಒಂದು ಡಿಸೆಂಟ್ (Dissent) ನೋಟ್ ನೀಡಿ ಇಲ್ಲವಾದಲ್ಲಿ, ನಿಮಗೆ ಆಯವ್ಯಯಕ್ಕೆ ಸಂಬಂಧಿಸಿದಂತೆ ಇನ್ನೂ ಸ್ಪಷ್ಟತೆ ಬೇಕಾದಲ್ಲಿ ಹಣಕಾಸು ಅಧಿಕಾರಿಗಳಿಂದ ಮಾಹಿತಿ ಪಡೆಯಿರಿ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ದೋಷಪೂರಿತ ಹಾಗೂ ಕೊರತೆಯಿಂದ ಕೂಡಿರುವ ಆಯವ್ಯಯವನ್ನು ಒಪ್ಪಲು ಸಾಧ್ಯವಿಲ್ಲ, ಎರಡೆರಡು ಬಜೆಟ್ ಪುಸ್ತಕಗಳನ್ನು ನೀಡುತ್ತೀರಿ, ಜೊತೆಗೆ ಸಿಂಡಿಕೇಟ್ ಸಭೆಯ ಅನುಮೋದನೆಯಿಲ್ಲದೆಯೇ ಸಿಂಡಿಕೇಟ್ ಅನುಮೋದನೆ ನೀಡಿದೆ ಎಂದು ವಿದ್ಯಾವಿಷಯಕ ಪರಿಷತ್ ಸಭೆಗೆ ಕಾನೂನು ಬಾಹಿರವಾಗಿ ಮಾಹಿತಿಯನ್ನು ನೀಡಿರುವುದು ತಪ್ಪಾಗಿದೆ. ವಸ್ತುನಿಷ್ಠವಾಗಿ ನೈಜತೆಯಿಲ್ಲದಿರುವ ಆಯವ್ಯಯವಾಗಿರುವುದರಿಂದ ಒಪ್ಪಲು ಸಾಧ್ಯವಿಲ್ಲ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ನಿಮಗೆ ಈಗಾಗಲೇ ಸಾಕಷ್ಟು ಸಮಯವನ್ನು ನೀಡಲಾಗಿದೆ. ಹಾಗೆಯೇ ನಿಮ್ಮ ಅಭಿಪ್ರಾಯವನ್ನು ತಿಳಿಸಲು ಹಾಗೂ ಚರ್ಚೆಗೂ ಅವಕಾಶ ನೀಡಲಾಗಿದೆ. ಎಲ್ಲಾ ಸದಸ್ಯರುಗಳು ಒಪ್ಪಿದ್ದಲ್ಲಿ ಆಯವ್ಯಯಕ್ಕೆ ಓಟಿಂಗ್ ಮುಖಾಂತರ ಅನುಮೋದನೆಯನ್ನು ಪಡೆಯಲಾಗುವುದು ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ವಿಶ್ವವಿದ್ಯಾನಿಲಯವನ್ನು ಆರ್ಥಿಕ ದುಸ್ಥಿತಿಗೆ ಇಳಿಸಲಾಗುವುದಿಲ್ಲ. ಜೊತೆಗೆ ಕಾರ್ಯವಿಧಾನಗಳಿಗೆ ದೋಷವೆಸಗಿರುವ (Procedure lapse)ಇಂತಹ ಹಣಕಾಸು ಅಧಿಕಾರಿಗಳನ್ನು ರಾಜ್ಯ ಸರ್ಕಾರವು ತಕ್ಷಣವೇ ವಾಪಸ್ಸು ಕರೆಸಿಕೊಂಡು ಅಮಾನತ್ತಿನಲ್ಲಿಡಬೇಕು ಎಂದು ಎಲ್ಲಾ ಸಿಂಡಿಕೇಟ್ ಸದಸ್ಯರುಗಳ ಮುಖೇನ ಹೇಳುತ್ತಿದ್ದೀನಿ ಎಂದು ಸಭೆಗೆ ತಿಳಿಸಿದರು. |

| | |
|---|---|
| | ಡಾ. ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆಯವರು ಮಾತನಾಡಿ, ಆಯವ್ಯಯದ ಬಗ್ಗೆ ತಪ್ಪಾಗಿರುವುದರ ಬಗ್ಗೆ ಹಣಕಾಸು ಅಧಿಕಾರಿಗಳು ವಾಟ್ಸ್‌ಆಪ್‌ನಲ್ಲಿ ತಿಳಿಸಿದ್ದರು. ಮತ್ತೆ ಯಾವ ಯಾವ ಆಂತರಿಕ ತಪ್ಪುಗಳಾಗಿವೆಯೋ ಅವುಗಳನ್ನು ಸಹ ತಿದ್ದುಪಡಿ ಮಾಡಿಕೊಡುತ್ತಾರೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಹಣಕಾಸು ಅಧಿಕಾರಿಗಳು ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು, ನೀವಲ್ಲ ಎಂದು ಡಾ. ವಿಜಯಲಕ್ಷ್ಮಿಯವರಿಗೆ ತಿಳಿಸಿದರು.<br><br>ಡಾ. ವಿಜಯಲಕ್ಷ್ಮಿಯವರು ನಾನು ನನ್ನ ಅಭಿಪ್ರಾಯವನ್ನು ತಿಳಿಸುತ್ತಿರುವುದಾಗಿ ತಿಳಿಸಿದರು.<br><br>ಡಾ. ಎಚ್.ಸಿ. ನಟರಾಜು ಅವರು ಮಾತನಾಡಿ ಸಿಂಡಿಕೇಟ್ ಒಬ್ಬ ಸದಸ್ಯರು ಆಯವ್ಯಯದ ಬಗ್ಗೆ ಸಂಪೂರ್ಣವಾಗಿ ಚರ್ಚಿಸಬೇಕೆಂದಲ್ಲಿ ಅವಕಾಶ ಮಾಡಿಕೊಡಬೇಕು ಜೊತೆಗೆ ಅವರು ಸರಿ/ತಪ್ಪುಗಳನ್ನು ವಿಶ್ಲೇಷಣೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಆಯವ್ಯಯದ ಬಗ್ಗೆ ನಾಲ್ಕನೇ ಬಾರಿ ಸಿಂಡಿಕೇಟ್‌ಗೆ ಮಂಡಿಸಲಾಗಿದೆ. ಆಯವ್ಯಯದ ಬಗ್ಗೆ ಚರ್ಚಿಸುವುದಕ್ಕಾಗಿಯೇ ಬೇರೆ ಇತರೆ ವಿಷಯಗಳನ್ನು ಈ ಸಭೆಯಲ್ಲಿ ಮಂಡಿಸಲಾಗಿಲ್ಲ. ಕೆಲವೊಮ್ಮೆ ಆಯವ್ಯಯವನ್ನು ಮಾಡುವಾಗ ಕೆಲವೊಂದು ತಪ್ಪುಗಳಾಗುತ್ತವೆ. ಅದನ್ನು ಹಣಕಾಸು ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ. ಮುಖ್ಯವಾಗಿ ಬೋಧನಾ ಸಿಬ್ಬಂದಿಗೆ 9 ತಿಂಗಳ ವೇತನವನ್ನು ತೋರಿಸಿರುವುದೇ ತಪ್ಪಾಗಿರುತ್ತದೆ. ಅದನ್ನು ಹಣಕಾಸು ಅಧಿಕಾರಿಗಳ ಗಮನಕ್ಕೆ ತಂದು ಸರಿಪಡಿಸಲಾಗಿದೆ ಎಂದು ತಿಳಿಸುತ್ತಾ, ವಿಶ್ವವಿದ್ಯಾನಿಲಯವು ವಾಸ್ತವವಾಗಿ ವಸ್ತುನಿಷ್ಠವಾದ ನೈಜತೆಯಿಂದ ಕೂಡಿರುವಂತಹ ಆಯವ್ಯಯವನ್ನು ಮಂಡಿಸಿದೆ. ಸರ್ಕಾರದಿಂದ ಅನುದಾನವು ಸರಿಯಾದ ಸಮಯಕ್ಕೆ ಹಾಗೂ ಕೋರಿರುವಂತಹ ಅನುದಾನವನ್ನು ನೀಡಿದಾಗ ಮಾತ್ರ ವಿಶ್ವವಿದ್ಯಾನಿಲಯವನ್ನು ಕೊರತೆಯಿಲ್ಲದಂತೆ ಸುಸೂತ್ರವಾಗಿ ನಡೆಸಲು ಸಾಧ್ಯವಾಗುತ್ತದೆ. ದತ್ತಿ ಹಾಗೂ ಇತರೆ ವಿಶ್ವವಿದ್ಯಾನಿಲಯದ ಕೆಲವೊಂದು ನಿಧಿಗಳನ್ನು ಉಪಯೋಗಿಸಲು ಸಾಧ್ಯವಿರುವುದಿಲ್ಲ. ದತ್ತಿ ಕೆಲವೊಂದು ನಿಧಿಗಳಿಂದ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆದಾಯವಿರುವುದಿಲ್ಲ. ಆದರೆ ಹಿಂದಿನಿಂದಲೂ ಅವುಗಳೆಲ್ಲವನ್ನು ಆದಾಯಕ್ಕೆ ಸೇರ್ಪಡಿಸಿದ್ದಾರೆ. ಇದೆಲ್ಲವನ್ನು ಆಯವ್ಯಯದಲ್ಲಿ ಪ್ರಸ್ತುತ ಸೇರ್ಪಡೆಗೊಳಿಸಲಾಗಿರುವುದಿಲ್ಲ. 2018ರವರೆಗೂ ಸರ್ಕಾರವು ವಿಶ್ವವಿದ್ಯಾನಿಲಯಕ್ಕೆ ಎಲ್ಲಾ ಅನುದಾನವನ್ನು ಬಿಡುಗಡೆ ಮಾಡುತ್ತಿತ್ತು. ನಂತರ ಶೇ.50ರಷ್ಟು ಮಾತ್ರ ಅನುದಾನವನ್ನು ಬಿಡುಗಡೆ ಮಾಡಿ ಮೂಲ ಆದಾಯದಿಂದ ಇತರೆ ವೆಚ್ಚಗಳನ್ನು ಭರಿಸಲು ಸರ್ಕಾರವು ಸೂಚಿಸಿತ್ತು. ಮಂಗಳೂರು ವಿಶ್ವವಿದ್ಯಾಲಯ ಮತ್ತು ಧಾರವಾಡ ವಿಶ್ವವಿದ್ಯಾಲಯಗಳಿಗೆ ಹಾಗೂ ಇತರೆ ವಿಶ್ವವಿದ್ಯಾಲಯಗಳಿಗೆ ಸರ್ಕಾರವೇ ಭರಿಸುತ್ತಿದೆ. ಮುಂದೆ ನಮ್ಮ ವಿಶ್ವವಿದ್ಯಾನಿಲಯಕ್ಕೂ ಸರ್ಕಾರವೂ ಪೂರ್ಣ ಪ್ರಮಾಣದಲ್ಲಿ ಪಿಂಚಣಿ ಸೌಲಭ್ಯವನ್ನು ನೀಡಿದ್ದಲ್ಲಿ ಜೊತೆಗೆ ನಮ್ಮ ಖರ್ಚುವೆಚ್ಚಗಳನ್ನು ಕಡಿಮೆ ಮಾಡಿಕೊಂಡು ಆದಾಯಕ್ಕೆ ತಕ್ಕಂತೆ ಆಡಳಿತವನ್ನು ನಿರ್ವಹಿಸಿದರೆ ಮುಂದಿನ ಬಜೆಟ್‌ನಲ್ಲಿ ಕೊರತೆ ಪ್ರಮಾಣ ಕಡಿಮೆಯಾಗುತ್ತದೆ. ಹಾಗೆಯೇ ಬೋಧನೆಗೆ ಸಂಬಂಧಿಸಿದಂತೆ ಎಷ್ಟು ಗಂಟೆಗಳನ್ನು ನೀಡಬೇಕು, ಎಷ್ಟು ಬೋಧನಾ ಸಿಬ್ಬಂದಿ ಬೇಕು ಎಂಬುದೆಲ್ಲವನ್ನು ಗಮನಿಸಲಾಗುತ್ತಿದೆ. ನಮ್ಮ ಬಂಡವಾಳ ಕಡಿಮೆಯಾಗುತ್ತಿದೆ. ಆದರೆ ಪಿಂಚಣಿಯ ಮೊತ್ತವು ಬೃಹತ್ ಮೊತ್ತವಾಗಿರುವುದರಿಂದ ಪಿಂಚಣಿ ಸೌಲಭ್ಯವನ್ನು ವಿಶ್ವವಿದ್ಯಾನಿಲಯವು ಭರಿಸಲು ಸಾಧ್ಯವಾಗುವುದಿಲ್ಲ. ಪ್ರಸ್ತುತ ಸದಸ್ಯರುಗಳು ಬಜೆಟ್‌ಗೆ ಒಪ್ಪಿಗೆಯನ್ನು ನೀಡಿ, ತದನಂತರ ಬದಲಾವಣೆಗಳ ಅವಶ್ಯಕತೆಯಿದ್ದಲ್ಲಿ ತಾವು ಆಯವ್ಯಯದ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಬಹುದು. ಆಯವ್ಯಯಕ್ಕೆ ಅನುಮೋದನೆಯನ್ನು ನೀಡದೆ ಇದ್ದಲ್ಲಿ ತೊಂದರೆಯಾಗುತ್ತದೆ. ಮತ್ತು ಯಾವುದೇ ರೀತಿಯ ಪಾವತಿಯನ್ನು ಮಾಡಲು ಕಷ್ಟವಾಗುತ್ತದೆಂದು ಹಾಗೂ ಸರ್ಕಾರದಿಂದಲೂ ಅನುದಾನ ಪಡೆಯಲು ಕಷ್ಟವಾಗುತ್ತದೆಂದರು. |

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಪ್ರೊಸಿಜರ್ ಲ್ಯಾಪ್ಸ್ ಆಗಿದೆ. ಕಾಯ್ದೆಯ ಪ್ರಕಾರ ಆಯವ್ಯಯವು ಆಗಿಲ್ಲದಿರುವುದರಿಂದ ನಾನು ಒಪ್ಪಿಗೆ ನೀಡುವುದಿಲ್ಲ. ನನ್ನ ಡಿಸೆಂಟ್ ನೋಟನ್ನು ನೀಡುತ್ತೇನೆ ಎಂದು ತಿಳಿಸಿದರು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಆಯವ್ಯಯದಲ್ಲಿ ಯಾವುದೇ ತಪ್ಪುಗಳಾಗಿಲ್ಲ, ಮೀಸ್‌ಲೀಡ್ ಮಾಡಲಾಗಿರುವುದಿಲ್ಲ, ಮುದ್ರಣ ದೋಷಗಳಾಗಿವೆ (ಟೈಪೋಗ್ರಾಫಿಕಲ್ ಮಿಸ್ಟೇಕ್) ಹಣಕಾಸು ಅಧಿಕಾರಿಗಳಂದ ಆಯವ್ಯಯದ ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಸದಸ್ಯರನ್ನು ಕೇಳಬೇಕಾಗಿತ್ತು ಆದರೆ ಅದನ್ನು ಮಾಡಲಾಗಿಲ್ಲದಿರುವುದೊಂದು ತಪ್ಪಾಗಿದೆ. ಆಯವ್ಯಯವನ್ನು ವಸ್ತುನಿಷ್ಠವಾಗಿಯೇ ತಯಾರು ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಆಯವ್ಯಯವನ್ನು ದೋಷಪೂರಿತವಾಗದಿರುವಂತೆ ನೋಡಿಕೊಳ್ಳುವುದು ಸಿಂಡಿಕೇಟ್‌ನ ಕರ್ತವ್ಯವಾಗಿರುತ್ತದೆ. ಆಯವ್ಯಯವನ್ನು ಸಿಂಡಿಕೇಟ್ ಅನುಮೋದಿಸಬೇಕಾದಲ್ಲಿ ನಾವು ತಿಳಿಸಿರುವ ಮಾಹಿತಿಗಳನ್ನು ಅಳವಡಿಸಿಕೊಂಡು ಪರಿಷ್ಕರಣೆ ಮಾಡಬೇಕಾಗುತ್ತದೆ ಇಲ್ಲವಾದಲ್ಲಿ ಸಿಂಡಿಕೇಟ್‌ನ ವಿರೋಧವಿರುತ್ತದೆ. ಜೊತೆಗೆ ಸರ್ಕಾರಕ್ಕೆ ವಿಚಾರಣೆ ನಡೆಸುವಂತೆ ಪತ್ರ ಬರೆಯಲಾಗುವುದು ಹಾಗೂ ಪತ್ರಿಕಾ ಪ್ರಕಟಣೆಯನ್ನು ನೀಡಲಾಗುವುದು ಎಂದು ತಿಳಿಸಿದರು.

ಡಾ. ಎಚ್.ಎಸ್. ನಟರಾಜು ಅವರು ಮಾತನಾಡಿ ಹಣಕಾಸು ಅಧಿಕಾರಿಗಳಿಗೆ ಡಾ. ಟಿ.ಆರ್. ಚಂದ್ರಶೇಖರ್ ಅವರು ತಿಳಿಸಿರುವಂತಹ ಲೋಪದೋಷಗಳನ್ನು ಸರಿಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಸಿಂಡಿಕೇಟ್ ಸಭೆಯು ಆಯವ್ಯಯಕ್ಕೆ ಸಂಬಂಧಿಸಿದಂತೆ ತಿಳಿಸಿರುವ ಎಲ್ಲಾ ತಿದ್ದುಪಡಿಗಳನ್ನು ಸರಿಪಡಿಸಿಕೊಳ್ಳಲಾಗುವುದೆಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ ನಾವು ಪ್ರತಿ ಸಭೆಯಲ್ಲೂ ತಪ್ಪುಗಳನ್ನು ತಿಳಿಸುವುದಾದರೆ ಯಾವಾಗ ಆಯವ್ಯಯವನ್ನು ದೋಷಪೂರಿತವಿಲ್ಲದಂತೆ ತಯಾರಿಸುತ್ತೀರಿ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಕುಲಪತಿಗಳಿಗೆ, ಕುಲಸಚಿವರಿಗೆ ಹಾಗೂ ಹಣಕಾಸು ಅಧಿಕಾರಿಗಳಿಗೆ ಹಲವು ಬಾರಿ ಪತ್ರವನ್ನು ಬರೆದಿದ್ದೇನೆ. ಯಾವುದೇ ಮಾಹಿತಿಯನ್ನಾಗಲೀ, ಉತ್ತರವನ್ನಾಗಲೀ ನೀಡಿರುವುದಿಲ್ಲ. ಇದಕ್ಕೆ ಕಾರಣವೇನು? ಸಿಂಡಿಕೇಟ್ ಸದಸ್ಯರುಗಳಿಗೆ ಗೌರವವಿಲ್ಲವೇ ನಮ್ಮ ಪತ್ರಕ್ಕೆ ಬೆಲೆ ಇಲ್ಲವೇ ಎಂದು ಪ್ರಶ್ನಿಸಿದರು. ಡಾ. ಸಿ. ಬಸವರಾಜು ಅವರು ಹಾಗೂ ಇನ್ನಿತರೆ ಸದಸ್ಯರುಗಳು ಸದರಿ ವಿಷಯಕ್ಕೆ ದನಿಗೂಡಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಿಂಡಿಕೇಟ್ ಸದಸ್ಯರುಗಳು ಕೇಳುವಂತಹ ಮಾಹಿತಿಯನ್ನು ಆಯಾ ಶಾಖೆಯ ಅಧಿಕಾರಿಗಳು ನೀಡುವಂತೆ ಸೂಚಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ ಸಿಂಡಿಕೇಟ್ ಸದಸ್ಯರುಗಳು ಪತ್ರದಲ್ಲಿ ವ್ಯವಹರಿಸಿದಾಗ ತಮ್ಮಲ್ಲಿ ದಾಖಲೆಗಳಿದ್ದಲ್ಲಿ ನೀಡಿ, ಇಲ್ಲವಾದಲ್ಲಿ ದಾಖಲೆಗಳಿಲ್ಲವೆಂದಾದರೂ ಪತ್ರವನ್ನು ನೀಡಬೇಕೆಂದು ಹೇಳಿದರು. ಪತ್ರ ಹಾಗೂ ದಾಖಲೆಗಳ ಬಗ್ಗೆ ಸುದೀರ್ಘವಾದ ಚರ್ಚೆ ನಡೆಯಿತು.

ಶ್ರೀ ಮಾದೇಶು ಅವರು ಮಾತನಾಡಿ ಟೆಂಡರ್‌ನಿಂದ ವಿಶ್ವವಿದ್ಯಾನಿಲಯಕ್ಕೆ ಕೋಟಿ ಹಣ ಉಳಿಕೆಯಾಗುವುದಾದರೆ ಒಳಿತಲ್ಲವೇ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ತಾವು ಬರೆದಿರುವ ಪತ್ರಗಳಿಗೆ ಈಗಾಗಲೇ ಉತ್ತರವನ್ನು ಪತ್ರ ಮುಖೇನ ನೀಡಲಾಗಿದೆ ಎಂದು ತಿಳಿಸಿದರು.

| | |
|---|---|
| | ಡಾ. ಬಸವರಾಜು ಸಿ. ಅವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ನಾವು ಕೊಡುವಂತಹ ಪತ್ರಗಳ ಬಗ್ಗೆ ಒಂದು ತೀರ್ಮಾನವಾಗಲೇ ಬೇಕು. ಕುಲಸಚಿವರು, ಕುಲಸಚಿವ (ಪರೀಕ್ಷಾಂಗ) ಹಾಗೂ ಹಣಕಾಸು ಅಧಿಕಾರಿಗಳಿಗೆ ನೀಡುವಂತಹ ಪತ್ರಗಳಿಗೆ ಆಯಾ ಶಾಖೆಯವರು ಉತ್ತರ ನೀಡುತ್ತಾರೆ ಎಂದು ತಿಳಿಸಿದ್ದೀರಿ. ಅದರಂತೆ ಅವರಿಗೆ ತಾವು ಇಂತಿಷ್ಟು ದಿನಗಳೊಳಗೆ ಉತ್ತರವನ್ನು ನೀಡುವಂತೆ ಸೂಚಿಸಬೇಕೆಂದು ತಿಳಿಸಿದರು.<br><br>ಡಾ. ಎಚ್.ಸಿ. ನಟರಾಜು ಅವರು ಮಾತನಾಡಿ ಅನಾಮಧೇಯ ಪತ್ರಗಳಿಗಿರುವಂತಹ ಮಾನ್ಯತೆ ನಮ್ಮ ಸಿಂಡಿಕೇಟ್ ಸದಸ್ಯರುಗಳ ಪತ್ರಗಳಿಗೆ ಇರುವುದಿಲ್ಲ. ನಮ್ಮಗಳ ಸದಸ್ಯತ್ವದ ಬಗ್ಗೆಯಾಗಲೀ ಅಥವಾ ಯಾವುದೇ ಅತಿಥಿ ಉಪನ್ಯಾಸಕರುಗಳ ಬಗ್ಗೆಯಾಗಲೀ ಅನಾಮಧೇಯರಿಂದ ಪತ್ರ ಬಂದ ತಕ್ಷಣ ಒಂದು ವಾರದೊಳಗೆ ಉತ್ತರಿಸುತ್ತೀರಿ ಎಂದು ತಿಳಿಸಿದರು.<br><br>ಶ್ರೀ ಮಹದೇಶು ಅವರು ಮಾತನಾಡಿ ಮರು ಟೆಂಡರ್‌ಅನ್ನು ಕರೆದರೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ತೊಂದರೆಯಾಗುವುದಿಲ್ಲ. ರೂ. 89.00 ಲಕ್ಷ ವಿಶ್ವವಿದ್ಯಾನಿಲಯಕ್ಕೆ ಉಳಿಯುವುದಾದರೆ ಮರು ಟೆಂಡರ್‌ಅನ್ನು ಕರೆಯುವುದರಲ್ಲಿ ತಪ್ಪೇನಿರುವುದಿಲ್ಲವೆಂದರು.<br><br>ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ ಟೆಕ್ನಿಕಲ್ ಕಮಿಟಿಯವರ ಅನುಮೋದನೆ ಹಾಗೂ ನಿಯಮಾನುಸಾರ ಟೆಂಡರ್ ಅನ್ನು ಕರೆಯಲಾಗಿರುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ತಾಂತ್ರಿಕ ಸಮಿತಿಯ ಆಧಾರದ ಮೇಲೆ ಟೆಂಡರ್‌ಅನ್ನು ಅನುಮೋದಿಸಲಾಗಿರುತ್ತದೆಂದರು. ಜೊತೆಗೆ ಟೆಂಡರ್‌ದಾರರಿಗೆ ಅನ್ಯಾಯವಾಗಿದ್ದರೆ ಅವರು ನ್ಯಾಯಾಲಯದ ಮೊರೆ ಹೋಗಬಹುದಿತ್ತು. ಟೆಂಡರ್ ಪ್ರಕ್ರಿಯೆಯೂ ಪೂರ್ಣಪ್ರಮಾಣದಲ್ಲಿ ಆನ್‌ಲೈನ್ ಮುಖಾಂತರವೇ ಹಾಗೂ ನಿಯಮಾನುಸಾರವೇ ನಡೆದಿರುತ್ತದೆ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಟೆಂಡರ್‌ಅನ್ನು ಇಂಜಿನಿಯರಿಂಗ್ ವಿಭಾಗದವರೇ ಕರೆದಿರುತ್ತಾರೆ. ಜೊತೆಗೆ ತಾಂತ್ರಿಕ ಸಮಿತಿ, ಅಂಗೀಕಾರ ಸಮಿತಿ (Technical Committee) ಅನುಮೋದನೆ, ಕುಲಪತಿಗಳಿಂದ ಅನುಮೋದನೆಯಾದ ನಂತರ ನಿಯಮಾನುಸಾರ ಆದೇಶವನ್ನು ನೀಡಲಾಗುವುದೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ತಾಂತ್ರಿಕ ಸಮಿತಿಯು ಒಪ್ಪಿಗೆ ನೀಡಿದ ನಂತರವೇ ಷರತ್ತುಗೊಳಪಟ್ಟು ಟೆಂಡರ್‌ಅನ್ನು ಅಂಗೀಕಾರ ಸಮಿತಿಯು ಅನುಮೋದನೆ ನೀಡಿದ ನಂತರ ಟೆಂಡರ್‌ಅನ್ನು ನೀಡಲಾಗಿರುತ್ತದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ನಮ್ಮಲ್ಲಿ ಆಯವ್ಯಯವು ಕೊರತೆಯಿರುವುದರಿಂದ, ಹಾಗೂ ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದಲೂ ವಿಶ್ವವಿದ್ಯಾನಿಲಯಕ್ಕೆ ರೂ. 1.00 ಕೋಟಿಗಳು ಉಳಿಯುತ್ತೆಂದಾದಲ್ಲಿ ಏಕೆ ಮರು ಟೆಂಡರ್‌ಅನ್ನು ಕರೆಯಬಾರದೆಂದರು. ಸದರಿ ವಿಷಯದ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು.<br><br>ಮಾನ್ಯ ಕುಲಪತಿಗಳು ಮಾತನಾಡಿ ಆಯವ್ಯಯಕ್ಕೆ ಸಿಂಡಿಕೇಟ್ ಅನುಮೋದನೆಯನ್ನು ನೀಡುತ್ತಿಲ್ಲವೆಂದು ಸರ್ಕಾರಕ್ಕೆ ಪತ್ರ ಬರೆಯುವುದಾಗಿ ತಿಳಿಸುತ್ತಾ, ಹಣಕಾಸು ಸಮಿತಿಯಲ್ಲಿರುವಂತಹ ಸದಸ್ಯರೆಲ್ಲರಿಗೂ ಪತ್ರವನ್ನು ಬರೆಯಿರಿ ಎಂದು ಹಣಕಾಸು ಅಧಿಕಾರಿಗಳಿಗೆ ತಿಳಿಸಿದರು.<br><br>ಡಾ. ಬಸವರಾಜು ಅವರು ಮಾತನಾಡಿ ವಿಶ್ವವಿದ್ಯಾನಿಲಯವನ್ನು ಅಭಿವೃದ್ಧಿ ಪಡಿಸುವುದರತ್ತ ಹೆಚ್ಚು ಗಮನಹರಿಸಬೇಕು. ನಾವು ವಿಶ್ವವಿದ್ಯಾನಿಲಯಕ್ಕೆ ಒಳಿತನ್ನು ಮಾಡುತ್ತೇವೋ ಅದು ಶಾಶ್ವತವಾಗಿ ಉಳಿಯುವಂತಾಗಬೇಕು. ತಪ್ಪಾಗಿರುವುದನ್ನು ತಿದ್ದುಪಡಿ ಮಾಡಿಕೊಂಡು, ಮುಂದಿನ ದಿನಗಳಲ್ಲಿ ತಪ್ಪುಗಳು ಮರುಕಳಿಸದಂತೆ ಕಾರ್ಯನಿರ್ವಹಿಸುವತ್ತ ಗಮನಹರಿಸಬೇಕೆಂದರು. |

| | |
|---|---|
| | ಶ್ರೀ ಮಹದೇಶು ಅವರು ಮಾತನಾಡಿ ನಾವೆಲ್ಲರೂ ಕಾರ್ಯನಿರ್ವಹಿಸುತ್ತಿರುವುದು ವಿಶ್ವವಿದ್ಯಾನಿಲಯದ ಒಳಿತಿಗಾಗಿಯೇ. ನಾವು ಆಯವ್ಯಯಕ್ಕೆ ಅನುಮೋದನೆಯನ್ನು ನೀಡಬಾರದೆಂಬ ಮನಸ್ಥಿತಿಯೂ ಇಲ್ಲ. ಆದರೆ ಆಯವ್ಯಯದಲ್ಲಿರುವಂತಹ ಲೋಪದೋಷಗಳನ್ನು ಪರಿಷ್ಕರಿಸಿ ನೀಡಿದರೆ ಅನುಮೋದನೆ ನೀಡಬಹುದೆಂದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಈಗಾಗಲೇ ಮುಗಿದಿರುವಂತಹ ಐದು ತಿಂಗಳ ವಾಸ್ತವ, ನೈಜ ಆಯವ್ಯಯ ವರದಿ, ಉಳಿದ 7 ತಿಂಗಳಿಗೆ ಅಂದಾಜು ಆಯವ್ಯಯವನ್ನು ತಿದ್ದುಪಡಿಯೊಂದಿಗೆ ಮಂಡಿಸಿದರೆ ಆಯವ್ಯಯವನ್ನು ಅನುಮೋದಿಸಬಹುದು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರದಿಂದ ಯಾವುದೇ ಅನುದಾನವನ್ನು ಪಡೆಯಬೇಕಾದರೆ ಯಾವ ರೀತಿಯ ಪತ್ರ ವ್ಯವಹಾರಗಳು ಹಾಗೂ ಇತರೆ ಕಾರ್ಯವಿಧಾನಗಳ ಬಗ್ಗೆ ಅರಿವಿದೆಯೇ, ಎಲ್ಲ ಕೆಲಸ ಕಾರ್ಯಗಳಿಗೂ ತನ್ನದೇ ಆದ ಕಾರ್ಯವೈಖರಿಯಿರುತ್ತದೆ. ಅವೆಲ್ಲವನ್ನು ನಾವು ಸರಿದೂಗಿಸಿಕೊಂಡು ಹೋಗಬೇಕಾಗುತ್ತದೆ. ಆಯವ್ಯಯವನ್ನು ವಸ್ತುನಿಷ್ಠವಾಗಿಯೇ ತಯಾರಿಸಲಾಗಿದೆ. ಜೊತೆಗೆ ನಾಲ್ಕು ಬಾರಿ ಆಯವ್ಯಯವನ್ನು ಮಂಡಿಸಿದರು ಸಭೆಯು ಅನುಮೋದಿಸಿರುವುದಿಲ್ಲ. ಇನ್ನು ಎಷ್ಟು ಸಭೆಗಳನ್ನು ನಡೆಸುವುದು. ಉಳಿದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕಾರ್ಯಗಳನ್ನು ಯಾರೂ/ಯಾವಾಗ ನಿರ್ವಹಿಸುವುದು. ಯಾರೇ ಆದರೂ ಪ್ರಶ್ನಿಸಬಹುದು. ಆದರೆ ಆ ಕೆಲಸವನ್ನು ನಿರ್ವಹಿಸಬೇಕಾದರೆ ಅವರಿಗೆ ತನ್ನದೇ ಆದ ಮಾನದಂಡಗಳು, ನಿಯಮಗಳಿರುತ್ತವೆ. ಜೊತೆಗೆ ಸರ್ಕಾರದ ಜೊತೆಗೂಡಿ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ ಎಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ ಸದರಿ ಸಭೆಯಲ್ಲಿ ಹೇಳಿರುವಂತಹ ತಿದ್ದುಪಡಿಗಳನ್ನು ಮಾಡಿ ಪರಿಷ್ಕರಿಸಿದ ಆಯವ್ಯಯವನ್ನು ನೀಡಿದರೆ ಮುಂದಿನ ಸಭೆಯಲ್ಲಿ ಅನುಮೋದನೆಯನ್ನು ನೀಡಲಾಗುವುದೆಂದರು. |
| ತೀರ್ಮಾನ | **2024-25ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳಿಗೆ ಸಿಂಡಿಕೇಟ್ ಸದಸ್ಯರುಗಳು ತಿಳಿಸಿರುವ ಲೋಪದೋಷಗಳನ್ನು ತಿದ್ದುಪಡಿ ಮಾಡಿ, ಪರಿಷ್ಕರಿಸಿದ ಆಯವ್ಯಯವನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/5.9 | 2024-2025ನೇ ಸಾಲಿನಲ್ಲಿ ನಿವೃತ್ತಿ ಹೊಂದುವ ವಿಶ್ವವಿದ್ಯಾನಿಲಯದ ನೌಕರರಿಗೆ ಪಿಂಚಣಿ ಸೌಲಭ್ಯಗಳು ಹಾಗೂ ಪಿಂಚಣಿ/ಕುಟುಂಬ ಪಿಂಚಣಿಗಳ ಪಾವತಿಗೆ ಕೊರತೆ ಇರುವುದರಿಂದ ಪಿಂಚಣಿ "CORPUS FUND"ನಿಂದ ಹಣ ಹಿಂಪಡೆಯುವ ಸಂಬಂಧ. |
| | ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವರ್ಷಕ್ಕೆ ಪಿಂಚಣಿಗೆ ಅಂದಾಜು ರೂ.131 ಕೋಟಿಗಳು ಬೇಕಾಗುತ್ತದೆ. ದಿನಾಂಕ: 04-04-2024ರಂದು ಪಿಂಚಣಿಗೆ ರೂ.131 ಕೋಟಿಗಳು ಬೇಕಾಗುತ್ತದೆಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರವು ರೂ.50 ಕೋಟಿಗಳನ್ನು ಮಾತ್ರ ಬಿಡುಗಡೆ ಮಾಡಿತ್ತು. ಇದರಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರೂ.81 ಕೋಟಿಗಳು ಕೊರತೆಯಾಗಿದೆ. ಎಲ್‌ಐಸಿ ಯ ಕಾರ್ಪಸ್ ನಿಧಿಯಲ್ಲಿ ರೂ.49 ಕೋಟಿಯಿದೆ. ಸರ್ಕಾರವು ರೂ.50 ಕೋಟಿಗಳನ್ನು ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ಪಿಂಚಣಿ ಅನುದಾನ ಕೊರತೆಯಾಗಿತ್ತು. ಈ ಸಂದರ್ಭದಲ್ಲಿ ಎಲ್‌ಐಸಿ ಯ ಕಾರ್ಪಸ್ ನಿಧಿಯಿಂದ ರೂ.49 ಕೋಟಿಗಳನ್ನು ಉಪಯೋಗಿಸಿಕೊಳ್ಳಲಾಯಿತು. ಪ್ರಸ್ತುತ ಎಲ್‌ಐಸಿ ಯ ಕಾರ್ಪಸ್ ನಿಧಿಯಲ್ಲಿ ಯಾವುದೇ ಠೇವಣಿ ಮೊತ್ತವಿರುವುದಿಲ್ಲ. ತದನಂತರ, ಸರ್ಕಾರದಿಂದ ಪಿಂಚಣಿ ಅನುದಾನವನ್ನು ಬಿಡುಗಡೆ ಮಾಡಿದ್ದಾಗ ಎಲ್‌ಐಸಿ ಯ ಕಾರ್ಪಸ್ ನಿಧಿಗೆ ಜಮಾ ಮಾಡಲಾಗುತ್ತದೆ ಎಂದು ತಿಳಿಸಿರುತ್ತೀರಿ. ಆಯವ್ಯಯ ಪುಸ್ತಕದ ಪುಟ ಸಂಖ್ಯೆ: 71 ರಲ್ಲಿ ನಿವೃತ್ತ ವೇತನ ನಿಧಿಯಲ್ಲಿ 6 ಮತ್ತು 7 ಕಾಲಂನಲ್ಲಿ 2023-24ನೇ |

ಸಾಲಿನ ಪರಿಷ್ಕೃತ ಅಂದಾಜಿನಲ್ಲಿ closing balance ನಲ್ಲಿ ಮಾರ್ಚ್ ಅಂತ್ಯದಲ್ಲಿ ರೂ. 79,41,00,000/- ಇದೆ. ಹಾಗೆಯೇ, ದಿನಾಂಕ: 01-01-2024ರಂದು opening balance ನಲ್ಲಿಯೂ ರೂ. 79,41,00,000/- ಇದೆ. ಸರ್ಕಾರವು ಅವಶ್ಯಕತೆಗನುಗುಣವಾಗಿ ರೂ.50 ಕೋಟಿಗಳನ್ನು ಬಿಡುಗಡೆ ಮಾಡಿದೆ. ಸರ್ಕಾರವು ಬಿಡುಗಡೆ ಮಾಡಿರುವ ರೂ.50 ಕೋಟಿಗಳನ್ನು ಹಾಗೂ ವಿಶ್ವವಿದ್ಯಾನಿಲಯದ ನಿವೃತ್ತ ವೇತನ ನಿಧಿಯಲ್ಲಿರುವ ರೂ. 79,41,00,000/- ಗಳನ್ನು ಸೇರ್ಪಡೆಗೊಳಿಸಿದಾಗ ವರ್ಷಕ್ಕೆ ಪಿಂಚಣಿದಾರರಿಗೆ ಬೇಕಾಗಿರುವ ಮೊತ್ತ ರೂ.130 ಕೋಟಿಗಳಾಗುತ್ತದೆ. ಇದರಿಂದ ಪಿಂಚಣಿಗೆ ಯಾವುದೇ ಕೊರತೆಯಿರುವುದಿಲ್ಲ. ಪ್ರಸ್ತುತ ನಿವೃತ್ತ ವೇತನ ನಿಧಿಯಲ್ಲಿ ರೂ.49 ಕೋಟಿಯಿರುತ್ತದೆ ಎಂದು ಆಯವ್ಯಯ ಪುಸ್ತಕದಲ್ಲಿ ತಿಳಿಸಲಾಗಿದೆ. ಈ ರೂ.49 ಕೋಟಿಗಳು ಬಾಕಿಯಿರುವ ಮಾಹೆಯ ಮಾಹಿತಿಯನ್ನು ಸ್ಪಷ್ಟವಾಗಿ ತಿಳಿಸಬೇಕು ಹಾಗೂ opening balance ನಲ್ಲಿಯೂ ರೂ. 79,41,00,000/- ಇದೆಯೆಂದು ಮತ್ತು closing balance ನಲ್ಲಿಯೂ ರೂ. 79,41,00,000/- ಇದೆಯೆಂದು ನಮೂದಾಗಿರುವುದಕ್ಕೂ ಸ್ಪಷ್ಟ ಮಾಹಿತಿ ನೀಡಬೇಕೆಂದು ಎಂದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಆಯವ್ಯಯ ಪುಸ್ತಕದಲ್ಲಿ opening balance ನಲ್ಲಿಯೂ ರೂ. 79,41,00,000/- ಇದೆಯೆಂದು ಮತ್ತು closing balance ನಲ್ಲಿಯೂ ರೂ.79,41,00,000/- ಇದೆಯೆಂದು ನಮೂದಾಗಿರುವುದು ತಪ್ಪಾಗಿದೆ. ಏಕೆಂದರೆ, expenditure ಮಾಡಿದ ನಂತರ ಉಳಿಕೆ ಮೊತ್ತವನ್ನು ನಮೂದಿಸಬೇಕು. ಇಲ್ಲವೇ NIL ಎಂದು ನಮೂದಿಸಬೇಕೆಂದು ಸಭೆಯ ಗಮನಕ್ಕೆ ತಂದರು.

ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ, ಪ್ರಸ್ತುತ ಆಯವ್ಯಯ ಪುಸ್ತಕದ ನಿವೃತ್ತ ವೇತನ ನಿಧಿಯಲ್ಲಿ ನಮೂದಿಸಲಾಗಿರುವ ರೂ.79,41,00,000/- ಗಳ ಅನುದಾನವಿರುವುದು ಸಹ ಎಲ್ಐಸಿ ಯ ಕಾರ್ಪಸ್ ನಿಧಿಯಾಗಿದೆ ಹೊರತು ವಿಶ್ವವಿದ್ಯಾನಿಲಯ ಬ್ಯಾಂಕ್‌ನಲ್ಲಿಟ್ಟಿರುವ ಮೊಬಲಗಲ್ಲ ಎಂದು ಸ್ಪಷ್ಟವಾಗಿ ತಿಳಿಸಿದರು. ಮುಂದುವರಿದು, ಆಯವ್ಯಯ ಪುಸ್ತಕವನ್ನು ಪರಿಶೀಲಿಸಿದ ನಂತರ opening balance ನಲ್ಲಿಯೂ ರೂ. 79,41,00,000/- ಇದೆಯೆಂದು ಮತ್ತು closing balance ನಲ್ಲಿ NIL ಎಂದು ನಮೂದಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರವು ಒಂದೇ ಇಡುಗಂಟಿನಲ್ಲಿ ರೂ.50 ಕೋಟಿಗಳನ್ನು ಬಿಡುಗಡೆ ಮಾಡುವುದಿಲ್ಲ. ಈ ಅನುದಾನವು ಹಂತ ಹಂತವಾಗಿ ಬಿಡುಗಡೆಯಾಗುತ್ತದೆ. ಇಂತಹ ಸಂದರ್ಭದಲ್ಲಿ ಪಿಂಚಣಿದಾರರಿಗೆ ಪಿಂಚಣಿಯನ್ನು ನೀಡಲು ಎಲ್ಐಸಿ ಯ ಕಾರ್ಪಸ್ ನಿಧಿಯಲ್ಲಿರುವ ಅನುದಾನವನ್ನು ಉಪಯೋಗಿಸಿಕೊಂಡು ಸರ್ಕಾರದಿಂದ ಅನುದಾನ ಬಿಡುಗಡೆಯಾದ ಕೂಡಲೇ ಎಲ್ಐಸಿ ಯ ಕಾರ್ಪಸ್ ನಿಧಿಗೆ ಮರುಜಮಾ ಮಾಡಲಾಗುವುದು. ಇದರಿಂದ ಪ್ರತಿ ಮಾಹೆಯಲ್ಲೂ ಪಿಂಚಣಿಯ ಅನುದಾನದಲ್ಲಿ ವ್ಯತ್ಯಾಸವಾಗುವುದು ಸಹಜವಾಗಿದೆ. ಮಾನ್ಯ ಸದಸ್ಯರು ಆಯವ್ಯಯ ಪುಸಕ್ತದಲ್ಲಿ ರೂ.49 ಕೋಟಿಗಳು ಬಾಕಿಯಿರುವ ಮಾಹೆಯ ಮಾಹಿತಿಯನ್ನು ಸ್ಪಷ್ಟವಾಗಿ ನಮೂದಿಸಬೇಕೆಂದು ತಿಳಿಸಿರುವ ಹಿನ್ನೆಲೆಯಲ್ಲಿ, ಇನ್ನು ಮುಂದೆ ಶಿಕ್ಷಣ ಮಂಡಳಿ ಮತ್ತು ಸಿಂಡಿಕೇಟ್ ಸಭೆಗಳಲ್ಲಿ ಆಯವ್ಯಯವನ್ನು ಮಂಡಿಸುವ ಸಂದರ್ಭದಲ್ಲಿ ಬಾಕಿ ಮೊಬಲಗಿನ ಮುಂದೆ as on date ಎಂದು ನಮೂದಿಸುವುದಾಗಿ ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಮಾನ್ಯ ಸದಸ್ಯರು ರೂ.49 ಕೋಟಿಗಳು ಬಾಕಿಯಿರುವ ಮಾಹೆಯ ಮಾಹಿತಿಯನ್ನು ಸ್ಪಷ್ಟವಾಗಿ ನಮೂದಿಸಬೇಕೆಂದು ತಿಳಿಸಿರುವ ಹಿನ್ನೆಲೆಯಲ್ಲಿ, ಇದನ್ನು ತಿದ್ದುಪಡಿ ಮಾಡಿಕೊಂಡು as on August 2024 ಎಂದು ನಮೂದಿಸಿ, ಬಾಕಿಯಿರುವ ಮೊತ್ತವನ್ನು ತೋರಿಸಲಾಗುವುದೆಂದು ತಿಳಿಸುತ್ತಾ, opening balance ನಲ್ಲಿಯೂ ರೂ.79,41,00,000/- ಇದೆಯೆಂದು ಮತ್ತು closing balance ನಲ್ಲಿಯೂ

| | |
|---|---|
| | ರೂ.79,41,00,000/- ಇದೆಯೆಂದು ನಮೂದಾಗಿರುವುದು ಕಣ್ತಪ್ಪಿನಿಂದ ಮುದ್ರಣವಾಗಿರುವುದರಿಂದ, closing balance ನಲ್ಲಿ NIL ಎಂದು ನಮೂದಿಸಿ ತಿದ್ದುಪಡಿ ಮಾಡಿಕೊಳ್ಳಲಾಗುವುದೆಂದು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಮಹದೇಶು ಅವರು ಮಾತನಾಡಿ, ಪ್ರಸ್ತುತ ಎಲ್‌ಐಸಿ ಯ ಕಾರ್ಪಸ್ ನಿಧಿಯಲ್ಲಿ ರೂ.49 ಕೋಟಿಯಿದೆ. ಈ ಅನುದಾನ ಪಿಂಚಣಿದಾರರಿಗೆ ವಿತರಿಸಿದ ನಂತರ ಮುಂದಿನ ಕ್ರಮವೇನು ಎಂದು ಪ್ರಶ್ನಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರದ Public Accounts Committee ಸಭೆಯಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಶ್ರೀ ಪಿ.ಸಿ. ಜಾಫರ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು ಇವರನ್ನು ಭೇಟಿ ಮಾಡಿ, ಮುಂದಿನ ದಿನಗಳಲ್ಲಿ ಎಲ್‌ಐಸಿ ಯಕಾರ್ಪಸ್ ನಿಧಿಯಲ್ಲಿರುವ ಅನುದಾನದ ಲಭ್ಯತೆಯ ಬಗ್ಗೆ ವಿವರಿಸಲಾಗಿದೆ ಎಂದರು. ಆದ್ದರಿಂದ ವಿಶ್ವವಿದ್ಯಾನಿಲಯವು ಪಿಂಚಣಿ ಅನುದಾನಕ್ಕಾಗಿ ಅವಶ್ಯವಿರುವ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಈ ಸಂಬಂಧ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಅನುದಾನವನ್ನು ಬಿಡುಗಡೆ ಮಾಡಿಕೊಡಬೇಕೆಂದು ಮನವರಿಕೆ ಮಾಡಿಕೊಡಲಾಯಿತು. ಇದಕ್ಕೆ ಪ್ರತಿಕ್ರಿಯಿಸಿದ ಶ್ರೀ ಪಿ.ಸಿ. ಜಾಫರ್ ಅವರು ಮೊದಲು ಎಲ್‌ಐಸಿ ಯ ಕಾರ್ಪಸ್ ನಿಧಿಯಲ್ಲಿರುವ ಅನುದಾನವನ್ನು ಸದ್ಬಳಕೆ ಮಾಡಿ, ನಂತರ ಪಿಂಚಣಿ ಅನುದಾನಕ್ಕೆ ಅವಶ್ಯವಿರುವ ಮೊತ್ತವನ್ನು ಕೋರಿ ಪ್ರಸ್ತಾವನೆ ಸಲ್ಲಿಸಬೇಕೆಂದು ತಿಳಿಸಿದರು. ಏಕೆಂದರೆ, ವಿಶ್ವವಿದ್ಯಾನಿಲಯದ ದತ್ತಿಗಳು ಹಾಗೂ ಪೀಠಗಳಿಗೆ ಠೇವಣಿಯಾಗಿಟ್ಟಿರುವ ಮೊತ್ತ ರೂ.200 ಕೋಟಿಗಳ ಅನುದಾನವನ್ನು ಗಮನಿಸಿ, ಈ ರೀತಿ ಹೇಳಿರುತ್ತಾರೆ. ಆದರೆ, ದತ್ತಿಗಳು ಹಾಗೂ ಪೀಠಗಳ ಸ್ಥಾಪನೆಗೆ ದಾನಿಗಳು ನೀಡಿರುವ ಠೇವಣಿಯಾಗಿಸಿರುವ ಮೊತ್ತವನ್ನು ಯಾವುದೇ ಕಾರಣಕ್ಕೂ ಹಿಂಪಡೆಯುವುದಕ್ಕೆ ಸಾಧ್ಯವಿರುವುದಿಲ್ಲ. 2018 ರವರೆಗೆ ಸರ್ಕಾರವು ಪಿಂಚಣಿ ಅನುದಾನಕ್ಕೆ ಅವಶ್ಯವಿರುವ ಅನುದಾನವನ್ನು ಬಿಡುಗಡೆ ಮಾಡುತ್ತಿತ್ತು. 2019ರ ನಂತರ ಪಿಂಚಣಿಗೆ ಅವಶ್ಯವಿರುವ ಅನುದಾನದಲ್ಲಿ ಶೇ.50 ರಷ್ಟು ಅನುದಾನವನ್ನು ಮಾತ್ರ ಬಿಡುಗಡೆ ಮಾಡುತ್ತಿದ್ದು, ಉಳಿದ ಶೇ.50 ರಷ್ಟು ಅನುದಾನವನ್ನು ಎಲ್‌ಐಸಿ ಯ ಕಾರ್ಪಸ್ ನಿಧಿಯಿಂದ ಭರಿಸಲಾಗುತ್ತಿದೆ. ಈ ಎಲ್‌ಐಸಿ ಯ ಕಾರ್ಪಸ್ ನಿಧಿಯನ್ನು ಪಿಂಚಣಿಗೆ ಮಾತ್ರ ಪಡೆಯಲಾಗುತ್ತಿದೆ. ಇನ್ಯಾವುದೇ ಖರ್ಚು-ವೆಚ್ಚಗಳಿಗೆ ಪಡೆಯುತ್ತಿಲ್ಲ ಎಂದು ಸಭೆಯ ಗಮನಕ್ಕೆ ತಂದರು.<br><br>ಕುಲಸಚಿವರು ಮಾತನಾಡಿ, ಪ್ರತಿ ತಿಂಗಳು ಪಿಂಚಣಿಗಾಗಿ ರೂ.8 ಕೋಟಿಗಳನ್ನು ಭರಿಸಲಾಗುತ್ತಿದೆ. ಹಾಗೆಯೇ, ಪ್ರತಿ ತಿಂಗಳು ವಯೋನಿವೃತ್ತಿ ಹೊಂದುತ್ತಿರುವ ಉದ್ಯೋಗಿಗಳನುಸಾರವಾಗಿ ಅಂದಾಜಿಸಿರುವ ಪಿಂಚಣಿ ಮೊತ್ತವು ವ್ಯತ್ಯಾಸವಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **2024-2025ನೇ ಸಾಲಿನಲ್ಲಿ ನಿವೃತ್ತಿ ಹೊಂದುವ ವಿಶ್ವವಿದ್ಯಾನಿಲಯದ ನೌಕರರಿಗೆ ಪಿಂಚಣಿ ಸೌಲಭ್ಯಗಳು ಹಾಗೂ ಪಿಂಚಣಿ/ಕುಟುಂಬ ಪಿಂಚಣಿಗಳ ಪಾವತಿಗೆ ಕೊರತೆ ಇರುವುದರಿಂದ, ಮೈಸೂರು ವಿಶ್ವವಿದ್ಯಾನಿಲಯ ತನ್ನ ಆಂತರಿಕ ಸಂಪನ್ಮೂಲ ಉಳಿತಾಯ ಹಣವನ್ನು ಪಿಂಚಣಿ ಕಾರ್ಪಸ್ ನಿಧಿಗಾಗಿ LIC ಯ "Corpus Fund"ನ "New Group Superannuation Cash Accumulation Benefit Scheme" ಖಾತೆಯಲ್ಲಿ ಹೂಡಿಕೆ ಮಾಡಿರುವ ಮೊತ್ತವನ್ನು ಹಿಂಪಡೆಯಲು ಹಾಗೂ ಸರ್ಕಾರದಿಂದ ಪಿಂಚಣಿ ಅನುದಾನ ಬಿಡುಗಡೆ ಮಾಡಿದಾಗ ಮರುಹೂಡಿಕೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |

**ಇತರೆ ವಿಷಯಗಳು:**

1) ಡಾ. ವಿಶ್ವನಾಥ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿನ ಕನ್ನಡ ವಿಭಾಗದಲ್ಲಿ ನಿಯೋಜನೆ ಮೇರೆಗೆ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಇವರ ಹುದ್ದೆಯ ಮೇಲಿನ ಹಕ್ಕನ್ನು "ಲೀನ್" 02 ವರ್ಷಕ್ಕೆ ಅನುಮತಿ ಪಡೆದು, ಮೂರನೇ ವರ್ಷದ ಅನಧಿಕೃತವಾಗಿ ಗೈರುಹಾಜರಾಗಿರುವ ಅವಧಿಯನ್ನು ಕೆ.ಸಿ.ಎಸ್.ಆರ್ ನಿಯಮ 106(ಎ) ಅನ್ವಯ ವೇತನರಹಿತ ರಜೆಯೆಂದು ಪರಿಗಣಿಸಿ ದಿನಾಂಕ: 20-06-2024ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಿರುವುದನ್ನು ಪ್ರಶ್ನಿಸಿ ಇವರ ವಿರುದ್ಧ ನಿವೃತ್ತ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರ ಮುಖೇನ ಇಲಾಖಾ ವಿಚಾರಣೆಯನ್ನು ನಡೆಸುವುದು ಸೂಕ್ತವೆಂದು ಡಾ. ಟಿ.ಆರ್. ಚಂದ್ರಶೇಖರ್ ಅವರು ಸಭೆಯ ಗಮನಕ್ಕೆ ತಂದರು.

   ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು ಡಾ. ವಿಶ್ವನಾಥ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರ ಪ್ರಕರಣವನ್ನು ಒಳಗೊಂಡಂತೆ ಈ ರೀತಿಯ ಯಾವುದಾದರೂ ಪ್ರಕರಣಗಳು ವಿಶ್ವವಿದ್ಯಾನಿಲಯದಲ್ಲಿ ಜರುಗಿದ್ದಲ್ಲಿ, ಅಂತಹ ಸಂದರ್ಭಗಳಲ್ಲಿ ವಿಚಾರಣಾ ಸಮಿತಿಗಳನ್ನು ಆಯೋಜಿಸುವುದರ ಬದಲು ನೇರವಾಗಿ ನಿವೃತ್ತ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲು ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

2) ಶ್ರೀ ಮಹದೇಶು ರವರು ಮಾತನಾಡಿ, ಸಿಂಡಿಕೇಟ್ ಸದಸ್ಯರುಗಳ ಗಮನಕ್ಕೆ ತರದೆ ಸ್ನಾತಕ ಕೋರ್ಸ್‌ಗಳಿಗೆ ಅತಿಥಿ ಉಪನ್ಯಾಸಕರನ್ನು ಸಂದರ್ಶನಕ್ಕೆ ಆಹ್ವಾನಿಸಿರುವುದರ ಕುರಿತು ತಕ್ಷಣ ಅಧಿಸೂಚನೆ ಹೊರಡಿಸಲಾಗಿದೆ, ಯಾವುದೇ ಕ್ರಮ ಕೈಗೊಂಡರೂ ಸಿಂಡಿಕೇಟ್ ಸದಸ್ಯರ ಗಮನಕ್ಕೆ ಪೂರ್ವಭಾವಿಯಾಗಿ ತರಬೇಕೆಂದು ತಿಳಿಸಿದರು.

   ಮಾನ್ಯ ಕುಲಪತಿಯವರು ಮಾತನಾಡಿ, ಅತಿಥಿ ಉಪನ್ಯಾಸಕರನ್ನು ಸಂದರ್ಶನದ ಮೂಲಕ ಆಹ್ವಾನಿಸುವ ವಿಷಯವನ್ನು ಮುಂದಿನ ಶೈಕ್ಷಣಿಕ ಸಾಲಿನಿಂದ calendar of events ನಲ್ಲಿ ಸೇರ್ಪಡೆಗೊಳಿಸಲಾಗುವುದೆಂದು ತಿಳಿಸಿದರು.

3) ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫಾ ರವರು ಮಾತನಾಡಿ, ಸಿಂಡಿಕೇಟ್ ಸದಸ್ಯರಾಗಿ ತಾವು ವಿಶ್ವವಿದ್ಯಾನಿಲಯಕ್ಕೆ ಬಂದ ತರುವಾಯ ವಿಶ್ವವಿದ್ಯಾನಿಲಯದ ಧನಾತ್ಮಕ ಅಭಿವೃದ್ಧಿಯನ್ನು ನೋಡುತ್ತಿದ್ದೇವೆ. ಋಣಾತ್ಮಕ ವಿಷಯಗಳನ್ನು ಬೇಗ ಬಿಂಬಿಸಲಾಗುತ್ತದೆ. ಸಿಂಡಿಕೇಟ್ ಸಭೆಯಲ್ಲಿ ವಿಭಾಗದ ಕುಂದುಕೊರತೆಗಳನ್ನು ಮಂಡಿಸುತ್ತೇವೆ. ನಾವು ವಿಭಾಗದ ಹಾಗೂ ಶಿಕ್ಷಕರ ನ್ಯೂನತೆಗಳನ್ನು ತಿಳಿಸುತ್ತೇವೆ. ಕೆಲವು ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸದೆ ಇರುವ ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ. ಆದರೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಏಕೆ ಕ್ರಮ ಕೈಗೊಳ್ಳುತ್ತಿಲ್ಲವೆಂದು ಕೇಳಿದರು. ವಿಶ್ವವಿದ್ಯಾನಿಲಯ ಕೂಡಲೇ ಇವರ ವಿರುದ್ಧ ಕ್ರಮಕೈಗೊಳ್ಳಬೇಕಾಗಿ ತಿಳಿಸಿರುತ್ತೇನೆ.

   ಮಾನ್ಯ ಕುಲಪತಿಯವರು ಮಾತನಾಡಿ, ಆಯಾಯಾ ವಿಭಾಗಧ್ಯಕ್ಷರೇ ಕರ್ತವ್ಯ ಲೋಪ ಎಸಗುತ್ತಿರುವವರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ತಿಳಿಸಿದರು. ವಿಭಾಗಧ್ಯಕ್ಷರು ಕ್ರಮ ಕೈಗೊಳ್ಳಲು ಸಾಧ್ಯವಿಲ್ಲದಿದ್ದ ಪಕ್ಷದಲ್ಲಿ ತಮ್ಮ ಗಮನಕ್ಕೆ ತಂದಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವೆಂದು ತಿಳಿಸಿದರು.

   ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫಾರವರು ಮಾತನಾಡಿ, ವಿಭಾಗಾಧ್ಯಕ್ಷರು ಮಾನ್ಯ ಕುಲಪತಿಗಳ ಗಮನಕ್ಕೆ ತರದೇ ಇದ್ದ ಸಂದರ್ಭದಲ್ಲಿ ನಿಮಗೆ ಕ್ರಮ ತೆಗೆದುಕೊಳ್ಳಲು ಅಧಿಕಾರವಿಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಯುವರಾಜ ಕಾಲೇಜಿನ ವಿದ್ಯಾರ್ಥಿಗಳ ಹಾಜರಾತಿಗೆ ಸಂಬಂಧಿಸಿದಂತೆ ತಾವು ಸೂಕ್ತ ಕ್ರಮ ತೆಗೆದುಕೊಂಡು ಹಾಜರಾತಿ ಕಡಿಮೆ ಇದ್ದ ವಿದ್ಯಾರ್ಥಿಗಳಿಗೆ ಹಾಜರಾತಿ ನೀಡಿಲ್ಲವೆಂದು ತಿಳಿಸಿದರು. ತಮ್ಮ ಗಮನಕ್ಕೆ ಬಂದ ಸಂದರ್ಭದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫಾರವರು ಮಾತನಾಡಿ, ಕೆಲವು ಹಿರಿಯ ಪ್ರಾಧ್ಯಾಪಕರುಗಳು ತಮ್ಮನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳು ರಕ್ಷಿಸುತ್ತಾರೆ ಎಂದು ತಿಳಿದಿರುತ್ತಾರೆ, ಇದನ್ನು ಬದಲಾವಣೆ ಮಾಡಬೇಕು. ಸದರಿ ಪ್ರಾಧ್ಯಾಪಕರುಗಳು ತಪ್ಪೆಸಗಿದಲ್ಲಿ ಅವರ ವಿರುದ್ಧ ಗಂಭೀರ ಕ್ರಮ ಕೈಗೊಳ್ಳಲು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಹಿಂಜರಿಯುವುದಿಲ್ಲ ಎಂಬ ವಿಷಯವು ಮನದಟ್ಟಾಗುವಂತೆ ಕ್ರಮ ವಹಿಸಬೇಕೆಂದು ತಿಳಿಸಿದರು. ಮುಂದುವರೆದು, ಸಾಕಷ್ಟು ವಿಶ್ವವಿದ್ಯಾನಿಲಯದ ಕಾಯ್ದೆ, ನಿಬಂಧನೆಗಳು, ಅಧಿನಿಯಮಗಳನ್ನು ಸಿಂಡಿಕೇಟ್ ಸದಸ್ಯರು ಈಗಾಗಲೇ ಉಲ್ಲೇಖಿಸಿದ್ದಾರೆ. ಪ್ರಮುಖ ವಿಷಯಗಳನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತರಬೇಕು. ಈ ಕಾರ್ಯವಿಧಾನ (procedure) ಅನುಸರಿಸುತ್ತಿಲ್ಲವೆಂದು ತಮಗೆ ಅನಿಸುತ್ತಿದೆ ಎಂದು ತಿಳಿಸಿದರು.

4) ಶ್ರೀ ಮಹದೇಶು ಅವರು ಪತ್ರಿಕೋದ್ಯಮ ಮತ್ತು ಸಂವಹನ ಅಧ್ಯಯನ ವಿಭಾಗದಲ್ಲಿರುವಂತಹ ವಿದ್ಯಾರ್ಥಿಗಳಿಗೆ ಬಹಳ ಅನ್ಯಾಯವಾಗಿದೆ. ವಿಭಾಗದ ಆಂತರಿಕ ಅಂಕಪಟ್ಟಿ ತಿದ್ದಿರುವುದರ ಬಗ್ಗೆ ದಿನಾಂಕ: 06.08.2024 ಮತ್ತು ದಿನಾಂಕ : 09.08.2024ರಂದು ವಿಶ್ವವಿದ್ಯಾನಿಲಯಕ್ಕೂ ಹಾಗೂ ಸಿಂಡಿಕೇಟ್ ಸದಸ್ಯರಾದ ನಮಗೂ ದೂರಿನ ಪತ್ರವನ್ನು ನೀಡಿರುತ್ತಾರೆ. ಸದರಿ ವಿಷಯದ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕಾಗುತ್ತದೆ. ಜೊತೆಗೆ ಪತ್ರಿಕೋದ್ಯಮ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಂತಹ ಹಲವಾರು ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ತೊಂದರೆಯಾಗುತ್ತದೆ. ಆದ್ದರಿಂದ ಯಾರು ತಪ್ಪನ್ನೆಸಗಿದ್ದಾರೋ ಅವರಿಗೆ ಶಿಕ್ಷೆಯಾಗಬೇಕು. ಜೊತೆಗೆ ತಾವು ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕೆಂದು ತಿಳಿಸುತ್ತಾ, ಈ ರೀತಿ ವಿಶ್ವವಿದ್ಯಾನಿಲಯದಲ್ಲಿ ಲೋಪವೆಸಗಬಾರದೆಂದು ಎಲ್ಲಾ ವಿಭಾಗಗಳಿಗೂ ಸುತ್ತೋಲೆ ನೀಡಬೇಕೆಂದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ಪತ್ರಿಕೋದ್ಯಮ ವಿಭಾಗದಲ್ಲಿ ಅಲ್ಲದೆ, ಇಎಂಆರ್‌ಸಿ ವಿಭಾಗದಲ್ಲಿಯೂ ಸಹ ಅನೇಕ ತೊಂದರೆಗಳಿವೆ. ಆದ್ದರಿಂದ ಒಂದು ಸಮಿತಿಯನ್ನು ರಚಿಸಿ, ಸಮಿತಿಯ ತೀರ್ಮಾನದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದರು. ನಾವು ತೆಗೆದುಕೊಳ್ಳುವ ತೀರ್ಮಾನದಿಂದ ಪ್ರತಿಯೊಬ್ಬರಿಗೂ ಮಾದರಿಯಾಗಬೇಕೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಶೈಕ್ಷಣಿಕವಾಗಿ ಕೆಲವೊಂದು ನಿರ್ಧಾರಗಳನ್ನು ಕೈಗೊಳ್ಳಲೇಬೇಕಾಗಿದೆ. ನನಗೂ ಸಹ ಪತ್ರಗಳು ಬರುತ್ತಿವೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸಮಿತಿಯನ್ನು ರಚಿಸಿ, ಸಮಿತಿಯ ತೀರ್ಮಾನದಂತೆ ನಿರ್ಣಯವನ್ನು ಕೈಗೊಳ್ಳಬೇಕಾಗುತ್ತದೆ. ತದನಂತರದಲ್ಲಿ ಸಮಿತಿಯ ತೀರ್ಮಾನವನ್ನು ತಾವೆಲ್ಲರೂ ಅನುಮೋದಿಸಿ ಕ್ರಮ ಕೈಗೊಳ್ಳಲು ಅನುವು ಮಾಡಿಕೊಡಬೇಕಾಗುತ್ತದೆ. ಜೊತೆಗೆ ಸಮಿತಿಯು ನೀಡುವ ತೀರ್ಮಾನಕ್ಕೆ ತಾವೆಲ್ಲರೂ ಬದ್ಧರಾಗಿರಬೇಕಾಗುತ್ತೆಂದರು.

ಡಾ. ಬಸವರಾಜು ಸಿ. ಅವರು ಮಾತನಾಡಿ ಸಮಿತಿ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿರುತ್ತೇವೆ ಎಂದು ತಿಳಿಸಿದರು.

5) ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಅತಿಥಿ ಉಪನ್ಯಾಸಕರುಗಳಿಗೆ 4 ಗಂಟೆಗೆ ನೀಡಿರುವ ಆದೇಶವನ್ನು 8 ಗಂಟೆಗೆ ನೀಡಿದರೆ ಅವರ ಜೀವನ ನಿರ್ವಹಣೆಗೆ ಅನುಕೂಲವಾಗುತ್ತದೆ. ಹಾಗೆಯೇ ಎಲ್ಲಾ ಸದಸ್ಯರುಗಳು 4 ಗಂಟೆಗೆ ನೀಡಿರುವ ಬೋಧನಾ ಕಾರ್ಯವನ್ನು ತೆಗೆದುಹಾಕುವಂತೆ ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, 4 ಗಂಟೆಗೆ ಬೋಧನಾ ಕಾರ್ಯವನ್ನು ನೀಡಿರುವ ಅತಿಥಿ ಉಪನ್ಯಾಸಕರುಗಳನ್ನು ಮುಂದುವರಿಸಿ, ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಅರ್ಹತೆಯಿರುವ ಅತಿಥಿ ಉಪನ್ಯಾಸಕರುಗಳನ್ನು ಮಾತ್ರ ಉಳಿಸಿಕೊಳ್ಳಬಹುದು ಎಂದು ತಿಳಿಸಿದರು.

6) ಡಾ. ನಟರಾಜು ಎಚ್.ಎಸ್. ಅವರು ಮಾತನಾಡಿ, ಸ್ಕೂಲ್ ಆಫ್ ಲಾ ವಿಭಾಗದಲ್ಲಿ ಅತಿಥಿ ಉಪನ್ಯಾಸಕರೊಬ್ಬರು ಒಬ್ಬ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ ಫೇಲ್ ಮಾಡಿ, ಆ ವಿದ್ಯಾರ್ಥಿಗೆ ಖುದ್ದಾಗಿ ನಿನ್ನನ್ನು ಅನುತ್ತೀರ್ಣಗೊಳಿಸಲಾಗಿದೆ ಎಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ ಹಾಗೂ ಅವ್ಯಾಚ್ಯ ಶಬ್ದಗಳಿಂದಲೂ ಸಹ ನಿಂದಿಸಿದ್ದಾರೆ. ಆದ್ದರಿಂದ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

ಮುಂದುವರೆದು, ಎಸ್‌ಆರ್‌ಎಫ್ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವಾಗ ಅವರು ಸೇರಿರುವ ದಿನಾಂಕದಿಂದ ಶಿಷ್ಯವೇತನವನ್ನು ನೀಡುತ್ತಿದ್ದಾರೆ. ಆದರೆ ಈ ಹಿಂದೆ ಪ್ರಕ್ರಿಯೆಯಾಗಲಿ, ನಿಯಮವಾಗಲಿ ಇರಲಿಲ್ಲ. ಆದ್ದರಿಂದ ಶಿಷ್ಯವೇತನಕ್ಕೆ 4-5 ವಿದ್ಯಾರ್ಥಿಗಳು ಮಾತ್ರ ಅರ್ಜಿಸಲ್ಲಿಸಿದ್ದಾರೆ. ಆದ್ದರಿಂದ ಅವರಿಗೆ ಶಿಷ್ಯವೇತನವನ್ನು ನೀಡುವಂತಾಗ ಬೇಕೆಂದರು.

7) ಡಾ. ಶಿಲ್ಪಾ ಜೆ. ಅವರು ಮಾತನಾಡಿ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಸಂಶೋಧನೆಯನ್ನು ನಡೆಸಲು ಶಿಷ್ಯವೇತನವನ್ನು ಹೆಚ್ಚಿಸುವ ಸಂಬಂಧ ವಿಷಯವನ್ನು ಪ್ರಸ್ತಾಪಿಸುತ್ತಾ, ಓಬಿಸಿ ಮಕ್ಕಳು ಕಡಿಮೆ ಇದ್ದು, 21 ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಿರುತ್ತಾರೆ. 12 ಮಂದಿ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಪ್ರಸ್ತುತ ಹಿಂದುಳಿದ ವಿದ್ಯಾರ್ಥಿಗಳಿಗೆ ಸಂಶೋಧನೆ ನಡೆಸಲು ರೂ. 12,000/-ಗಳನ್ನು ನೀಡಲಾಗುತ್ತಿದೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಕಡಿಮೆ ಇರುವುದರಿಂದಲೂ ಅವರಿಗೆ ಸಂಶೋಧನೆ ನಡೆಸಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಅವರಿಗೆ ನೀಡುತ್ತಿರುವ ಶಿಷ್ಯವೇತನವನ್ನು ರೂ. 12,000/-ಗಳಿಂದ ರೂ. 22,000/-ಗಳಿಗೆ ಹೆಚ್ಚಿಸಬೇಕೆಂದು ಹೇಳಿದರು. ಇದಕ್ಕೆ ಇತರ ಸಿಂಡಿಕೇಟ್ ಸದಸ್ಯರುಗಳು ದನಿಗೂಡಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಶಿಷ್ಯವೇತನವನ್ನು ಇಂತಿಷ್ಟೇ ನೀಡಬೇಕೆಂದು ನಿಯಮವಿಲ್ಲ. ಆದರೆ ಕಳೆದ ವರ್ಷಗಳಲ್ಲಿ 10 ಮಂದಿಗೆ ಶಿಷ್ಯವೇತನವನ್ನು ನೀಡಬೇಕೆಂದಿತ್ತು. ಆದರೆ ಆ ಸಂದರ್ಭದಲ್ಲಿ 44 ಮಂದಿ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಿದ್ದರಿಂದ ಆಗ ಇದ್ದಂತಹ ಆದಾಯಕ್ಕನುಗುಣವಾಗಿ ರೂ. 12,000/-ಗಳನ್ನು ಶಿಷ್ಯವೇತನವನ್ನಾಗಿ ನೀಡಲಾಗಿತ್ತು ಎಂದು ತಿಳಿಸಿದರು.

ಡಾ. ಎಚ್.ಎಸ್. ನಟರಾಜು ಅವರು ಮಾತನಾಡಿ, ಹಿಂದುಳಿದ ವರ್ಗಗಳ ಇಲಾಖೆಯಿಂದ ವಿಶ್ವವಿದ್ಯಾನಿಲಯಕ್ಕೆ ಯಾವುದಾದರೂ ಅನುದಾನ ಬರುವಂತಿದ್ದರೆ ತರುವಂತಹ ಪ್ರಯತ್ನ ಮಾಡೋಣವೆಂದರು. ಆದ್ದರಿಂದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಹೆಚ್ಚಿಸಬಹುದೆಂದರು.

ಹಿಂದುಳಿದ ವಿದ್ಯಾರ್ಥಿಗಳ ಶಿಷ್ಯವೇತನವನ್ನು ರೂ. 12,000/-ಗಳಿಗಿಂತ ಹೆಚ್ಚಿನ ಶಿಷ್ಯವೇತನವನ್ನು ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.

8) ಡಾ. ಬಸವರಾಜು ಸಿ. ಅವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಕನಕದಾಸರ ಅಧ್ಯಯನ ಮತ್ತು ಸಂಶೋಧನಾ ಪೀಠವನ್ನು ಸ್ಥಾಪಿಸುವ ಬಗ್ಗೆ ವಿಷಯವನ್ನು ಪ್ರಸ್ತಾಪಿಸುತ್ತಾ ಸಿಂಡಿಕೇಟ್ ಸದಸ್ಯರೆಲ್ಲರೂ ಒಕ್ಕೊರಲಿನಿಂದ ಅನುಮೋದಿಸಿದ್ದಾರೆಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆಯೂ ಹಾಗೂ ಸರ್ಕಾರದ

ಮಟ್ಟದಿಂದ ಶ್ರೀ ಕನಕದಾಸರ ಅಧ್ಯಯನ ಮತ್ತು ಸಂಶೋಧನಾ ಪೀಠಕ್ಕೆ ಅನುದಾನವನ್ನು ಪಡೆಯಲು ಸಿಂಡಿಕೇಟ್ ಸದಸ್ಯರುಗಳು ಪ್ರಯತ್ನಿಸುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಗಳು ಶ್ರೀ ಕನಕದಾಸರ ಅಧ್ಯಯನ ಮತ್ತು ಸಂಶೋಧನಾ ಪೀಠವನ್ನು ಸ್ಥಾಪಿಸುವ ಬಗೆಗಿನ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮತಿಸಿದರು.

9) ಶ್ರೀ ಮಹದೇಶು ಅವರು ಮಾತನಾಡಿ ನಿವೃತ್ತಿ ಹೊಂದಿರುವಂತಹ ಅನೇಕ ಪ್ರಾಧ್ಯಾಪಕರುಗಳು ತಮ್ಮ ವಿಭಾಗದ ಕೊಠಡಿಯ ಬೀಗದ ಕೀಯನ್ನು ಕೊಡದೆ ಸತಾಯಿಸುತ್ತಿದ್ದಾರೆ. ಅದರ ಬಗ್ಗೆಯೂ ತಾವು ಸೂಕ್ತ ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ** | **ಕುಲಪತಿಗಳು ಮತ್ತು ಅಧ್ಯಕ್ಷರು**